

ಸಂಚಯ

ಕನ್ನಡ ಸಾಹಿತ್ಯ, ಸಂಸ್ಕೃತಿ ಪತ್ರಿಕೆ

ಸಂಚಿಕೆ 93

ಸಂಚಿಕೆಯ ಗ್ಯಾ|ಲ|ರಿ

ರವಿವರ್ಮನ ಕಲಾಕೃತಿಗಳು



ಹಂಸ ದಮಯಂತಿ

ಕೃಷ್ಣ ಸಂಧಾನ



ಸಂಚಯ

ಕನ್ನಡ ಸಾಹಿತ್ಯ, ಸಂಸ್ಕೃತಿ ಪತ್ರಿಕೆ

ದ್ವೈಮಾಸಿಕ * ಸಂಪುಟ : ೨೦
* ಸಂಚಿಕೆ : ೯೩
ಜುಲೈ – ಆಗಸ್ಟ್ ೨೦೧೧

ಪ್ರೇಮ ಬೆಂಕಿಯ ಬೆಳಕು, ಸೊನ್ನೆಯನು ತುಂಬುವದು
ಶಬ್ದ ಪಾತ್ರೆಗೆ ಅರ್ಥ ತುಂಬಿದಂತೆ.
ಇಡಿಲೋಕ ಬೆಳಕಿನಲಿ, ಬೆರಗಿನಲಿ, ಬೆಳಗುವುದು
ಈಗಷ್ಟೆ ಕಣ್ದೆರೆದ ಕೂಸಿನಂತೆ

ಚಂದ್ರಶೇಖರ ಕಂಬಾರ
(ಪ್ರೇಮ ಕಾಮ)

ಸಂಪಾದಕ : ಡಿ.ವಿ. ಪ್ರಹ್ಲಾದ್


ಸಂಪರ್ಕ ವಿಳಾಸ

ನಂ.೧೦೦, ೨ನೇ ಮುಖ್ಯರಸ್ತೆ, ೬ನೇ ಬ್ಲಾಕ್, ೩ನೇ ಘಟ್ಟ
ಬನಶಂಕರಿ ೩ನೇ ಹಂತ, ಬೆಂಗಳೂರು–೫೬೦ ೦೮೫
ಫೋನ್ ನಂ. : ೨೬೭೭೧೯೨೫, ಮೊಬೈಲ್: ೯೮೪೪೦ ೬೩೫೧೪
email : sanchaya.sahityapatrike@gmaii.com

ಚಂದಾ ವಿವರ | * ವಾರ್ಷಿಕ ಚಂದಾ : ರೂ.೨೫೦/– * ಎರಡು ವರ್ಷಕ್ಕೆ : ರೂ.೫೦೦/–

ಚೆಕ್ / ಡಿ.ಡಿ. ಮೂಲಕ ಚಂದಾ ಕಳುಹಿಸುವವರು 'ಸಂಚಯ', ಬೆಂಗಳೂರು ಎಂಬ ಹೆಸರಿಗೆ ಕಳುಹಿಸಿ ಅಥವಾ ಕೆನರಾಬ್ಯಾಂಕ್, ಬೆಂಗಳೂರಿನ ಗಿರಿನಗರ ಶಾಖೆ ಉಳಿತಾಯ ಖಾತೆ ಸಂ.: ೧೮೨೧ ೧೦೧೦ ೦೪೬೮೨ಗೆ ನಿಮ್ಮೂರಿನ ಕೆನರಾ ಬ್ಯಾಂಕಿನಿಂದ ಜಮಾ ಮಾಡಬಹುದು.

ಈ ಸಂಚಿಕೆಯಲ್ಲಿ...



ಹೊಳೆದದ್ದು ತಾರೆ ಉಳಿದದ್ದು ಆಕಾಶ!

ಪ್ರಿಯ ಓದುಗರೇ,

ಈ ಕಾಲ ತನ್ನ ಉದ್ವೇಗದ ನಡುವೆ, ತನ್ನ ಮೌಲ್ಯಗಳನ್ನೆಲ್ಲಾ ಕಳೆದುಕೊಂಡಿದೆಯಾ ಅನ್ನುವ ಅನುಮಾನ ಹುಟ್ಟುವ ಹೊತ್ತಿನಲ್ಲೇ ಹಲವು ಆಶಾದಾಯಕ ಸಂಗತಿಗಳು ನಮ್ಮ ಸಾಮಾಜಿಕ ಜೀವನದಲ್ಲಿ ಘಟಿಸುತ್ತಿವೆ. ಅಧಿಕಾರವುಳ್ಳ ಭ್ರಷ್ಟರನ್ನ ಯಾರೂ ಏನೂ ಮಾಡಲು ಆಗುವುದಿಲ್ಲ ಎಂಬ ಹತಾಶೆಯ ಭಾವ ಹೆಪ್ಪುಗಟ್ಟುವ ಹೊತ್ತಿನಲ್ಲಿ, ಕೆಲವರು ಜೈಲುಪಾಲಾಗಿ ಮತ್ತೆ ಕೆಲವರು ಕಟಕಟೆಯ ಹಿಂದೆ ನಿಂತು ಪ್ರಶ್ನೆಗಳಿಗೆ ಗುರಿಯಾಗುತ್ತಿದ್ದಾರೆ. ಇಂಥವು ನ್ಯಾಯದ ಬಗ್ಗೆ, ಮೌಲ್ಯದ ಬಗ್ಗೆ ನಂಬಿಕೆ ಹುಟ್ಟಿಸುತ್ತವೆ. ಹಣ, ಅಧಿಕಾರಗಳ ಜೊತೆಗೆ ಜವಾಬ್ದಾರಿಯನ್ನ ಅವು ಸೂಚಿಸುತ್ತಿವೆ.

ಈ ಸಂಚಿಕೆ ಅಚ್ಚಿಗೆ ಸಿದ್ಧಗೊಳ್ಳುವ ಹೊತ್ತಿನಲ್ಲೇ ನಮ್ಮ ಚಂದ್ರಶೇಖರ ಕಂಬಾರರಿಗೆ ಜ್ಞಾನಪೀಠ ಪ್ರಶಸ್ತಿ ಲಭಿಸಿದೆ. ಇದು ಕನ್ನಡದ ಅಕ್ಷರ ಲೋಕವನ್ನು ಸಂಭ್ರಮಗೊಳಿಸಿದೆ. ನಮ್ಮ ಪತ್ರಿಕೆಯ ಹೆಮ್ಮೆಯ ಓದುಗರಾದ ಕಂಬಾರರಿಗೆ ಅಭಿನಂದನೆಗಳು. ನಮ್ಮ ಜನಸಮೂಹ ಕಂಬಾರರ ಕೃತಿಗಳನ್ನು ಓದುವುದಕ್ಕೆ ಚರ್ಚಿಸುವುದಕ್ಕೆ ಅಭಿನಂದಿಸುವುದಕ್ಕೆ ಒಳ್ಳೆಯ ಸಂದರ್ಭ.


ಕುರ್ತಕೋಟಿಯವರು ಕಂಬಾರರ 'ಹೇಳತೇನ ಕೇಳ' ಬೆನ್ನುಡಿಯಲ್ಲಿ "ಜಾನಪದ ಲೋಕವೇ ಕಂಬಾರರ ಕಾವ್ಯದ ಸ್ವಂತ ಮನೆ, ಆ ಮನೆಯ ಇತಿಹಾಸ ಅಂತಸ್ತು ರೀತಿ ರಿವಾಜುಗಳೆಲ್ಲಾ ಅದಕ್ಕೆ ಗೊತ್ತು. ಆಧುನಿಕ ಕಾವ್ಯಲೋಕ ಈ ಕಾವ್ಯಕ್ಕೆ ಜಗತ್ತು. ಮನೆಯಿಂದ ಜಗತ್ತಿಗೆ ಬರಬೇಕಾದ್ದು ಅನಿವಾರ್ಯ. ಮನೆಯಿಂದ ತಂದದ್ದನ್ನು ಜಗತ್ತಿಗೆ ತೋರಿಸಬೇಕು, ಜಗತ್ತಿನಿಂದ ಪಡಕೊಂಡದ್ದನ್ನು ಮನೆಯ ಬೆಳಕಿನಲ್ಲಿ ಪರೀಕ್ಷಿಸಬೇಕು. ಮನೆಯೊಳಗೆ ಕುಳಿತರೂ ಕಿಟಕಿ ಬಾಗಿಲುಗಳ ಮೂಲಕ ಹೊರಗೆ ನೋಡಬಹುದು. ಪೂರ್ವಜರ ಮನೆ ತನ್ನದಾದಾಗ ಸಹಜವಾಗಿಯೇ ಹೊರಜಗತ್ತಿನೊಡನೆ ಒಳಜಗತ್ತು ನಿರ್ಮಾಣವಾಗಿರುತ್ತದೆ. ಅದು ತನ್ನ ರಹಸ್ಯಗಳೊಂದಿಗೆ ಹಳೆಯ ಕತೆಗಳೊಂದಿಗೆ ಪ್ರತ್ಯೇಕವಾಗಿದ್ದುಕೊಂಡು ಹೊರಗಿನ ಜಗತ್ತಿನೊಂದಿಗೆ ಸಂಬಂಧ ಬೆಳೆಸಿಕೊಂಡಿರುತ್ತದೆ."

ಹೀಗೆ ಕನ್ನಡದ ಮನೆಯಿಂದ ತಂದದ್ದನ್ನು ಕಂಬಾರರು ಕಟ್ಟಿಕೊಟ್ಟಿದ್ದಾರೆ. ಜಗತ್ತು ಅದನ್ನು ಸಂಭ್ರಮಿಸಿ ಬೆಳಗುಗಣ್ಣಿಂದ ತನ್ನದಾಗಿಸಿಕೊಂಡು ನೆರಳು ಬೆಳಕಿನಾಟದ ಬಿಂಬ ಪ್ರತಿಬಿಂಬಗಳೂ, ಮನುಷ್ಯ ಮತ್ತು ಅವನ ನೆರಳುಗಳು ಕಂಬಾರರ ಕೃತಿಗಳಲ್ಲಿ ಗಾಢವಾಗಿದೆ. ಅವರ ಪ್ರಶಸ್ತಿಯ ಸನ್ನಿವೇಶದಲ್ಲೂ ಬಿಂಬ ಪ್ರತಿಬಿಂಬದ ಮಾತುಕತೆಗಳು ಯಾವತ್ತಿನಂತೆ ನಡೆದಿದೆ. ಮೂಲ ಆಕೃತಿಯನ್ನೋ ಬಿಂಬವನ್ನೋ ಬೇಕಾದವರು ಬೇಕಾದ ಹಾಗೆ ನೋಡಿ ಸಂಭ್ರಮಿಸಿದ್ದಾರೆ, ಕರುಬಿದ್ದಾರೆ.

ಹಾಗೆ ನೋಡಿದರೆ ಇದು ಟಾಗೋರ್ ವಿಶೇಷಾಂಕ ಆಗಬೇಕಿತ್ತು. ಇನ್ನೂ ಅದರ ತಯಾರಿ ಬಾಕಿ ಇರುವ ಕಾರಣ ಅದು ನವೆಂಬರ್ ಕೊನೆಗೆ ನಿಮ್ಮ ಕೈ ಸೇರಲಿದೆ. ತಡವಾಗಿ ಮತ್ತೊಂದು ಸಂಚಿಕೆ ಕೈಗಿಡುತ್ತಿರುವುದು ಸಂಕೋಚ ಎನ್ನಿಸಿದರೂ ಅನಿವಾರ್ಯವಾಗಿದೆ.

ನಿಮ್ಮ

ಸಂಪಾದಕ



ಅಣ್ಣಾ ಹಜಾರೆಯವರ ಆಗಸ್ಟ್ ಆಂದೋಲನ

ಎಸ್.ಆರ್. ವಿಜಯಶಂಕರ

ಆಳುವವನ ಮೇಲೊಬ್ಬ ಕೇಳುವವ ಇರಬೇಕು – ದ.ರಾ. ಬೇಂದ್ರೆ

ಅಣ್ಣಾ ಹಜಾರೆ ಎರಡನೇ ಸ್ವಾತಂತ್ರ್ಯ ಹೋರಾಟ ಎಂದು ಕರೆದಿರುವ ಭ್ರಷ್ಟಾಚಾರದ ವಿರುದ್ಧದ ಆಂದೋಲನದ ಮೊದಲ ಘಟ್ಟ ಇದೀಗ ಮುಗಿದಿದೆ. ಆಗಸ್ಟ್ 16ರಂದು ಪ್ರಾರಂಭವಾದ ಅಣ್ಣಾ ನಿರಶನ ಪಾರ್ಲಿಮೆಂಟ್ ಅಣ್ಣಾ ಸೂಚಿಸಿದ ರಾಜಿ ರಹಿತ ಮೂರು ವಿಚಾರಗಳ ಪರಿಗಣನೆಗೆ ಒಪ್ಪಿದ ಠರಾವು ಸ್ವೀಕರಿಸಿದ ಬಳಿಕ ಆಗಸ್ಟ್ 28ರಂದು ಭಾನುವಾರ ಕೊನೆಗೊಂಡಿದೆ. 1989ರಲ್ಲಿ ಜಾಗತೀಕರಣ ಪ್ರಾರಂಭವಾದ ಬಳಿಕ, ಕಳೆದ ಎರಡು ದಶಕಗಳಲ್ಲಿ ಇಷ್ಟೊಂದು ಪ್ರಮಾಣದಲ್ಲಿ ಜನ ಬೀದಿಗಿಳಿದು ಸಾರ್ವಜನಿಕವಾಗಿ ಪ್ರತಿಭಟಿಸಲಿಲ್ಲ. 1970ರ ದಶಕದಲ್ಲಿ ಜೆ.ಪಿ. ಚಳವಳಿ ಹಾಗೂ ತುರ್ತು ಪರಿಸ್ಥಿತಿ ಬಳಿಕ 1977ರ ಚುನಾವಣೆಗಳಲ್ಲಿ ಜನ ಸಮೂಹ ಹೀಗೆ ಮೈಕೊಡವಿ ಬೀದಿಗೆ ಇಳಿದಿತ್ತು.

ಲೋಕಪಾಲ ಮಸೂದೆ ತಂದು ಭ್ರಷ್ಟಾಚಾರಕ್ಕೆ ಕಡಿವಾಣ ಹಾಕುತ್ತೇವೆ ಎಂದು ಹೊರಟ ಅಣ್ಣಾ ಹಜಾರೆ ನೇತೃತ್ವದ ಚಳವಳಿಯ ಸಾಧಕ ಬಾಧಕಗಳ ಬಗ್ಗೆ ಈಗ ಚರ್ಚೆ ಪ್ರಾರಂಭವಾಗಿದೆ. ಅಣ್ಣಾ ಹಜಾರೆ ಅವರೇ ಹೇಳಿದಂತೆ ಇದೊಂದು ಪ್ರಾರಂಭ ಮಾತ್ರ. ಲೋಕಪಾಲ ಮಸೂದೆಗಾಗಿ ಮಾಡಲಿರುವ ಹೋರಾಟದಲ್ಲಿ ಅರ್ಧ ಜಯ ಮಾತ್ರ ಈಗ ಲಭ್ಯವಾಗಿದೆ. ಹೊಸ ಸ್ವಾತಂತ್ರ್ಯದ ಹೋರಾಟದ ದೀವಿಗೆ ಉರಿಯ ತೊಡಗಿದೆ. ಅದನ್ನು ಆರಲು ಬಿಡಬೇಡಿ ಎಂಬುದೇ ನಿರಶನ ನಿಲ್ಲಿಸುವಾಗ ಅವರು ಜನತೆಗೆ ನೀಡಿದ ಕರೆ.

ಅಣ್ಣಾ ಹಜಾರೆಯವರ ಭ್ರಷ್ಟಾಚಾರ ವಿರೋಧ ಚಳವಳಿಯ ಪರ– ವಿರೋಧಗಳಿರುವ ವಿಚಾರಗಳನ್ನು ಗಮನಿಸುವುದು. ಈ ಆಂದೋಲನದ ಆರೋಗ್ಯವನ್ನು ಅರಿಯುವ ದೃಷ್ಟಿಯಿಂದ

ಮುಖ್ಯವಾದ್ದು. ಈ ಮಾತನ್ನು ಹೇಳುವಾಗ ನಾವು ನೆನಪಿಡಬೇಕಾದ ಅಂಶವೊಂದಿದೆ. ಅದೆಂದರೆ. ಕಳೆದ ಎರಡು ಶತಮಾನಗಳಲ್ಲಿ ರಾಷ್ಟ್ರ ಪ್ರಭುತ್ವದ (Nation State) ಬೆಳವಣಿಗೆ ಪ್ರಾರಂಭವಾದ ಬಳಿಕ ನಡೆದ ಸಶಸ್ತ್ರ ಕ್ರಾಂತಿಗಳಿವೆ ಅನೇಕ ದಾರಿಗಳು ಗುರುತಿಸಲ್ಪಟ್ಟಿದೆ. ಎಡಪಂಥೀಯ ಸಶಸ್ತ್ರ ಕ್ರಾಂತಿಗಳಿಂದಾಗಿಯೂ ಹೋರಾಟ ಹಾಗು ಜನ ಪ್ರಾತಿನಿಧ್ಯದ ಬಗ್ಗೆ ಅನೇಕ ವಿಚಾರಗಳೂ ಸಂಗ್ರಹವಾಗಿವೆ. ಲೆನಿನ್, ಸ್ಟಾಲಿನ್, ಟ್ರಾಟ್ಸ್ಕಿ, ಮಾವೋ, ಚೆಗೆವಾರ, ಹೊಚಿಮಿನ್ ಮೊದಲಾದವರಿಂದ ಅಂತಹ ಅನೇಕ ತಾತ್ವಿಕತೆ ಲಭ್ಯವಾಗಿದೆ.

ಆದರೆ, ಜನ ಪ್ರಭುತ್ವಕ್ಕಾಗಿ ನಡೆದ ಅಹಿಂಸಾತ್ಮಕ ಹೋರಾಟದಿಂದ ಕಂಡು ಕೊಂಡ ದಾರಿ ಹಾಗೂ ಜನಪ್ರಾತಿನಿಧ್ಯದ ತಿಳುವಳಿಕೆ ತುಂಬಾ ಬೆಳೆದಿಲ್ಲ. ಅಹಿಂಸಾತ್ಮಕ ಹೋರಾಟವನ್ನು ಅಧಿಪತ್ಯದ ಎದುರು ಹುಟ್ಟಿ ಹಾಕಿದವರೇ ಗಾಂಧೀಜಿ. ಆ ಬಳಿಕ ಅದು ಮುಖ್ಯವಾಗಿ ಮಾರ್ಟಿನ್ ಲೂಥರ್ ಕಿಂಗ್ ಹಾಗೂ ನೆಲ್ಸನ್ ಮಂಡೆಲಾ ಅವರಿಂದ ಪ್ರತಿಪಾದಿತವಾಯಿತು. ಬರ್ಮಾದಲ್ಲಿ ಸೂಕಿ ನೇತೃತ್ವದಲ್ಲಿ ಅದರ ಇನ್ನೊಂದು ಪ್ರಯೋಗ ನಡೆಯುತ್ತಿದೆ. ಭಾರತದಲ್ಲಿ ಜೆ.ಪಿ. ಅವರ ಸಂಪೂರ್ಣ ಕ್ರಾಂತಿಯ ಕರೆ ಒಂದು ಆಂದೋಳನವಾಗಿ ಬೆಳೆದರೂ ಅದು ಕೊನೆಗೂ ಪ್ರಜಾಪ್ರಭುತ್ವದಲ್ಲಿ ಪಕ್ಷ ರಾಜಕೀಯದ ಶಕ್ತಿಯನ್ನು ಬಲಪಡಿಸುವುದರಲ್ಲಿ ಪರ್ಯಾವಸಾನವಾಯಿತು.

ಪಕ್ಷರಾಜಕೀಯದಿಂದ ಹೊರಗೆ:

ಅಣ್ಣಾ ಹಜಾರೆಯವರ ಭ್ರಷ್ಟಾಚಾರದ ವಿರುದ್ಧದ ಜನಲೋಕಪಾಲ ಮಸೂದೆ ಜಾರಿಯಾಗಬೇಕೆಂದು ನಡೆಸುವ ಹೋರಾಟ ಪ್ರಜಾಪ್ರಭುತ್ವದಲ್ಲಿ ಪಕ್ಷ ರಾಜಕೀಯದ ಹೊರತಾದ ಜನ ಪ್ರಾತಿನಿಧ್ಯದ ಚಿಂತನೆಯನ್ನು ಪ್ರೇರೇಪಿಸುತ್ತದೆ. ಕಳೆದ 65 ವರ್ಷಗಳಲ್ಲಿ ಭಾರತೀಯ ಪ್ರಜಾಪ್ರಭುತ್ವ ಪಕ್ಷ ರಾಜಕೀಯ ವ್ಯವಸ್ಥೆಯಲ್ಲೇ ಪಳಗಿದೆ. ಅಲ್ಲೊಂದು, ಇಲ್ಲೊಂದು ಸ್ವತಂತ್ರ ಅಭ್ಯರ್ಥಿಯ ಆಯ್ಕೆಯಾದರೂ ಅದು ನಾಯಕನೊಬ್ಬನ ವ್ಯಕ್ತಿತ್ವದ ಬಲ ಅಥವಾ ವರ್ಚಸ್ಸಿನಿಂದ ಗೆಲ್ಲುವ ವಿಚಾರವಾಗಿರುತ್ತದೆ. ಅಥವಾ ಕೆಲವೊಮ್ಮೆ ಮತಕ್ಷೇತ್ರದ ಯಾವುದೋ ಪ್ರತಿಭಟನೆಯ ಫಲವಾಗಿರುತ್ತದೆ. ಆದ್ದರಿಂದ ಪಕ್ಷ ರಾಜಕೀಯದ ಹೊರತಾಗಿ ಪ್ರಭುತ್ವವನ್ನು ರಾಷ್ಟ್ರಮಟ್ಟದಲ್ಲಿ ಎದುರಿಸುವ ಪರೀಕ್ಷಾರ್ಥ ಪ್ರಯೋಗವಾಗಿಯೂ ನಾವು ಈ ಚಳವಳಿಯನ್ನು ಗಮನಿಸಬೇಕು. ಈ ಹಿನ್ನೆಲೆಯಲ್ಲಿ ಅಣ್ಣಾ ಹಜಾರೆಯವರ ಚಳವಳಿ ಬಗ್ಗೆ ಎತ್ತಿದ ಹಲವಾರು ಆಕ್ಷೇಪಗಳಲ್ಲಿ ಮುಖ್ಯವಾದ ಕೆಲವನ್ನಾದರೂ ನಾವು ಪರೀಕ್ಷಿಸಬೇಕು.

ಅಣ್ಣಾ ಹಜಾರೆಯವರ ಭ್ರಷ್ಟಾಚಾರ ವಿರೋಧಿ ಆಂದೋಲನ ಪಾರ್ಲಿಮೆಂಟರಿ ಪ್ರಜಾಪ್ರಭುತ್ವ ವಿರೋಧಿಯೆ?

ಈ ಆಂದೋಲನ ಈ ತನಕದ ಬಹುತೇಕ ನಾವು ಕಂಡ ಸಾರ್ವಜನಿಕ ಅನುಭವದಂತೆ ಕೇವಲ ಪ್ರತಿಭಟನೆಗೆ ಮಾತ್ರ ಸೀಮಿತವಾಗದೆ ಪರಿಹಾರವೊಂದನ್ನೂ ಸೂಚಿಸಿ ಅದಕ್ಕಾಗಿ ಒತ್ತಾಯಿಸುತ್ತದೆ. ಭ್ರಷ್ಟಾಚಾರ ನಿಯಂತ್ರಣಕ್ಕೆ ಜನಲೋಕ ಪಾಲ ಮಸೂದೆ ಒಂದು ಉತ್ತಮ ಪರಿಹಾರ. ಆ ಮಸೂದೆಯನ್ನು ಪಾರ್ಲಿಮೆಂಟ್ ಚರ್ಚಿಸಿ ಅಂಗೀಕರಿಸಬೇಕು ಎಂಬುದು ಒತ್ತಾಯ. ಅದಕ್ಕಾಗಿ ನಿರಶನ. ಅದನ್ನು ಬೆಂಬಲಿಸಿ ಜನ ಸಮುದಾಯ ಅಣ್ಣಾ ಹಿಂದೆ ನಿಂತಿದೆ.

ಇದು ಪ್ರಜಾಪ್ರತಿನಿಧಿ ಕಾಯಿದೆಗೆ ಸಂವಿಧಾನದ ಆಶಯಕ್ಕೆ ಹಾಗೂ ನಮ್ಮ ಪ್ರಜಾಪ್ರಭುತ್ವದಲ್ಲಿ ಕಾಯಿದೆ ರಚಿಸುವ ಪಾರ್ಲಿಮೆಂಟಿನ ಪರಮಾಧಿಕಾರಕ್ಕೆ ವಿರೋಧವಾಗಿದೆ ಎಂಬ ಒಂದು ವಾದ ಇದೆ. ಇದೆಲ್ಲವನ್ನೂ ಪ್ರಜಾಪ್ರಭುತ್ವದ ಮೂಲ ಆಶಯದ ಹಿನ್ನೆಲೆಯಲ್ಲಿ ಅರ್ಥ ಮಾಡಿಕೊಂಡಾಗ ಮಾತ್ರ ಸಮಂಜಸವಾದ ಉತ್ತರ ಸಿಕ್ಕಲು ಸಾಧ್ಯ.

ಮೊದಲನೆಯದಾಗಿ, ನಮ್ಮ ಪ್ರಜಾಪ್ರಭುತ್ವಕ್ಕೆ ಪಕ್ಷ ರಾಜಕೀಯದ ಹೊರಗೆ ದೇಶಾದ್ಯಂತ ಒಂದು ಜನಬೆಂಬಲ ಬೆಳೆಯಬಹುದು ಎಂಬ ಕಲ್ಪನೆ ಇಲ್ಲ. ಭ್ರಷ್ಟಾಚಾರ ವಿರೋಧವೆಂಬ ಒಂದೇ ತತ್ವ ಪ್ರಣಾಳಿಕೆ ಅಡಿಯಲ್ಲಿ ಅನೇಕ ರಾಜಕೀಯ ಪಕ್ಷಗಳಿಗೆ ಸೇರಿದವರು ಹಾಗೂ ಸಕ್ರಿಯವಾಗಿ ಯಾವುದೇ ಒಂದು ಪಕ್ಷಕ್ಕೆ ಸೇರದವರೂ ಭಾಗವಹಿಸಿದ್ದಾರೆ. ವಿದ್ಯಾರ್ಥಿಗಳು, ಯುವಕರು ಹಾಗೂ ಎಲ್ಲಾ ವರ್ಗಗಳಿಗೆ ಸೇರಿದ ಜನ ಸಮೂಹದ ಪ್ರತ್ಯಕ್ಷ ಹಾಗೂ ಪರೋಕ್ಷ ಭಾಗವಹಿಸುವಿಕೆ ಈ ಚಳವಳಿಯಲ್ಲಿ ನಡೆದಿದೆ. ಹಾಗಾಗಿ ರಾಜಕೀಯ ಪಕ್ಷ ಅಥವಾ ರಾಜಕೀಯ ತತ್ವ ಪ್ರೇರಿತ ಚಳವಳಿಗಳನ್ನು ಮಾತ್ರ ಕಂಡಿರುವ ನಮಗೆ ಈ ರೀತಿ ಒಬ್ಬ ವ್ಯಕ್ತಿಯ ನೇತೃತ್ವದಲ್ಲಿ ಒಂದು ಕಾರಣಕ್ಕಾಗಿ ತಮ್ಮೊಡನೆ ಸೇರುವಂತೆ ಯಾವ ಪಕ್ಷಕ್ಕೂ ಕರೆ ಇಲ್ಲದೆ ಕೇವಲ ಜನರಿಗೆ ಮಾತ್ರ ಕರೆ ಕೊಟ್ಟ ಚಳವಳಿ ಹೊಸದು. ಬಹು ಪಕ್ಷ ಪ್ರಭುತ್ವದಲ್ಲಿ ನಂಬಿಕೆ ಇಲ್ಲದ ಕಮ್ಯುನಿಸ್ಟ್ ಪಕ್ಷಗಳು ಹಾಗೂ ತೀವ್ರವಾದಿ ಕಮ್ಯುನಿಸ್ಟ್ ಪಕ್ಷಗಳು ಕೂಡಾ ನಮ್ಮಲ್ಲಿ ಪಕ್ಷ ರಾಜಕೀಯ ಪ್ರಜಾಪ್ರಭುತ್ವವನ್ನೇ ಆರಿಸಿಕೊಂಡವು ಎಂದ ಮೇಲೆ ಪಕ್ಷ ರಾಜಕೀಯ ಪ್ರಜಾಪ್ರಭುತ್ವದ ಪ್ರಭಾವ ನಮ್ಮ ಮೇಲೆ ಎಷ್ಟಾಗಿದೆ ಎಂಬುದನ್ನು ನಾವು ಊಹಿಸಬಹುದು. ಹೀಗೆ ರಾಜಕೀಯ ಪಕ್ಷಗಳ ನೇರ ಭಾಗವಹಿಸುವಿಕೆ ಇಲ್ಲದ ಚಳವಳಿಯನ್ನು ಅರ್ಥ ಮಾಡಿಕೊಳ್ಳಬೇಕಾದ ನೆಲೆಗಳು ಇನ್ನೂ ಸ್ಪಷ್ಟವಾದಂತೆ ಇಲ್ಲ. ಇದೊಂದು ಹೊಸ ಪ್ರಯೋಗ.

ಪಕ್ಷಾತೀತ ಪ್ರಜಾಪ್ರಭುತ್ವದ ಹಿನ್ನೆಲೆ:

ಸ್ವಾತಂತ್ರ್ಯ ಪ್ರಾಪ್ತಿಯ ಬಳಿಕ ತಾತ್ವಿಕ ಕಾರಣಗಳಿಗಾಗಿ ಕಾಂಗ್ರೆಸ್ಸನ್ನು ಸಮಾಪ್ತಿಗೊಳಿಸಬೇಕೆಂದು ಗಾಂಧೀಜಿ ಪ್ರತಿಪಾದಿಸಿದರೂ ಕಾಂಗ್ರೆಸ್ ಪಕ್ಷ ಬಲಿಷ್ಠ ರಾಜಕೀಯ ಪಕ್ಷವಾಗಿ ಬೆಳೆಯಿತು. ಆ ಬಳಿಕ ನಿಧಾನವಾಗಿ ವಿರೋಧ ಪಕ್ಷಗಳಾಗಿ ಬೆಳೆಯುತ್ತಾ ಹೋದ ಎಡ ಹಾಗು ಬಲ ಪಕ್ಷಗಳು 1977ರಲ್ಲಿ ಮೊದಲ ಬಾರಿಗೆ ಅಧಿಕಾರಕ್ಕೆ ಬಂದವು. ಆ ಮೊದಲು ಹಾಗೂ ಆ ಬಳಿಕ ಕೇಂದ್ರ ಹಾಗೂ ರಾಜ್ಯ ರಾಜಕೀಯಗಳಲ್ಲಿ ಪಕ್ಷ ಅವಲಂಬಿತ ಪ್ರಜಾಪ್ರಭುತ್ವವೇ ನಮ್ಮಲ್ಲಿ ಬೆಳೆಯಿತು.

ಯಾವುದೇ ಪಕ್ಷ ಪ್ರಭುತ್ವದ ಅಧಿಕಾರ ಪಡೆದಾಗ ಅಥವಾ ಅಧಿಕಾರ ಹಂಚಿಕೆಯಲ್ಲಿ ವ್ಯಕ್ತಿಯ ಎದುರು ಪ್ರಭುತ್ವದ ಲಾಭಗಳನ್ನೇ ಬೆಳೆಸಿಕೊಳ್ಳುತ್ತಾ ಹೋದುದರಿಂದ ಪ್ರಭುತ್ವದ ಎದುರಿನ ಹೋರಾಟಕ್ಕೆ ಕೇವಲ ರಾಜಕೀಯ ಪಕ್ಷಗಳು ಮಾತ್ರ ಸಾಕಾಗುವುದಿಲ್ಲ ಎಂಬುದನ್ನು ಜನ ಮನಗಂಡರು. ಅದರ ಪ್ರಭಾವದಿಂದ ಚಿಕ್ಕ ಪುಟ್ಟ ಪಂಗಡಗಳು, ಸಮುದಯ ಸಂಘಟನೆಗಳು, ವ್ಯಕ್ತಿಗಳು ಪ್ರಭುತ್ವದ ಚಿಕ್ಕ ಹಾಗೂ ದೊಡ್ಡ ಅನ್ಯಾಯಗಳ ವಿರುದ್ಧ ಪ್ರತಿಭಟಿಸುತ್ತಲೇ ಇದ್ದರು. ರಾಜಕೀಯ ಪಕ್ಷಗಳು ಹಾಗೂ ಕಾರ್ಮಿಕ ಸಂಘಟನೆಗಳ ಹೊರಗಿದ್ದೂ ನಡೆಸಬೇಕಾದ ಹೋರಾಟಗಳು ಕಾಲ ಕ್ರಮೇಣ ಪ್ರಜೆಗಳ ಪ್ರತಿಭಟನೆಯ ನಾಗರಿಕ ರೂಪ ತಾಳಿದವು. ಅವುಗಳು ಕಾಲ ಕಳೆದಂತೆ ಅಲ್ಲಲ್ಲಿ ಸರ್ಕಾರೇತರ ಸಂಸ್ಥೆಗಳಾಗಿ ಅಂದರೆ ಎನ್‌ಜಿಒ ಗಳಾಗಿ ಅಲ್ಲಲ್ಲಿ ಸಂಚಲನಕ್ಕೆ ಕಾರಣವಾದವು. ಗ್ರಾಹಕರ ಕಾನೂನು (Consumer Act) ಚಳವಳಿ

ಹಾಗೂ ಮಾಹಿತಿಹಕ್ಕು ಚಳವಳಿ (Right to InformAtion Act) ಅವುಗಳ ಯಶಸ್ಸು ಕೂಡಾ ಪಕ್ಷ ರಾಜಕೀಯದ ಹೊರತಾದ ಪ್ರಜಾಪ್ರಭುತ್ವ ಹೋರಾಟಕ್ಕೆ ಒಂದು ದಿಕ್ಕು ದೆಸೆ ತೋರಿಸಿದ್ದವು. ಅದಲ್ಲದೆ ಕೆಲವು ಕಾಲ ತೀವ್ರ ವ್ಯಕ್ತಿವಾದಿಗಳಾಗಿದ್ದ ಕೆಲವರು ಸೋಶಲಿಸ್ಟ್ ನಾಯಕರೂ ಪಕ್ಷಗಳನ್ನು ಒಡೆಯುತ್ತಾ ಬಲಿಷ್ಠ ಪಕ್ಷವಿಲ್ಲದ ಹೋರಾಟಕ್ಕೆ ನಾಂದಿ ಹಾಡಿದ್ದರು.

ಖಾಸಗೀಕರಣ ಮತ್ತು ಭ್ರಷ್ಟಾಚಾರ:

ಆದರೆ 1989ರ ಆರ್ಥಿಕ ಸುಧಾರಣಾ ನೀತಿಗಳ ಬಳಿಕ ಹೆಚ್ಚು ಕಮ್ಮಿ ಎಲ್ಲಾ ರಾಜಕೀಯ ಪಕ್ಷಗಳೂ ಖಾಸಗಿ ಹಾಗೂ ಕಾರ್ಪೊರೇಟ್ ಆರ್ಥಿಕತೆ ಪರವಾಗಿ ಅಭಿವೃದ್ಧಿ ಮಂತ್ರ ಜಪಿಸತೊಡಗಿದಾಗ ನಾನಾ ಕಾರಣಗಳಿಂದ ಭ್ರಷ್ಟಾಚಾರ ಹೆಚ್ಚಾಯಿತು. ಸಂಪತ್ತಿನ ಸೃಷ್ಟಿಯೇ ಅಭಿವೃದ್ಧಿಯ ಮೂಲಮಂತ್ರವಾಯಿತು. ಅಂತಹ ಸಂಪತ್ತಿನ ಹಿಂದೆ ಎಂತಹ ನೈತಿಕ ನೆಲೆಗಳಿರಬೇಕು ಎಂಬ ಕಾಳಜಿ ಗೌಣವಾಯಿತು. ಎಲ್ಲಾ ರಾಜಕೀಯ ಪಕ್ಷಗಳೂ ಜಾಗತೀಕರಣದ ಹಿನ್ನೆಲೆಯಲ್ಲಿ ಅಭಿವೃದ್ಧಿ ಒಂದೇ ಮಂತ್ರ ಎನ್ನತೊಡಗಿದಾಗ ಬೆಳೆಯಲಾರಂಭಿಸಿದ ಭ್ರಷ್ಟಾಚಾರದ ಹಾಗೂ ಪ್ರಭುತ್ವದ ಶಕ್ತಿಯ ಎದುರು ಪ್ರಶ್ನೆ ಕೇಳಬೇಕಾದವರು ಯಾರು? ಹೋರಾಡಬೇಕಾದವರು ಯಾರು?

ಅಂತಹ ಹೋರಾಟಗಳು ಪ್ರಶ್ನೆಗಳು ರಾಜಕೀಯ ಪಕ್ಷಗಳ ಬದಲು ಸಣ್ಣ ಪುಟ್ಟ ಗುಂಪುಗಳಿಂದ ಬರತೊಡಗಿದವು. ಅಂತಹ ಅನೇಕ ಆಕ್ಟಿವಿಸ್ಟ್ ವ್ಯಕ್ತಿಗಳು, ಗುಂಪುಗಳು ಎನ್‌ಜಿಒ ಸಂಸ್ಥೆಗಳಾಗಿ ತಮ್ಮದೇ ಆದ ಧ್ಯೇಯಗಳಿಗಾಗಿ ಹೋರಾಡತೊಡಗಿದವು. ರಾಷ್ಟ್ರೀಯ ಮಟ್ಟದಲ್ಲಿ ಸಮಗ್ರವಾದ್ದೊಂದು ಜಾಲವಿಲ್ಲದೆ, ಅಲ್ಲಲ್ಲಿ ಬಿಡಿಬಿಡಿಯಾಗಿ ಹರಡಿಕೊಂಡು ರಾಷ್ಟ್ರದಾದ್ಯಂತ ಹೋರಾಡುತ್ತಿದ್ದ ಅನೇಕ ನಾಗರಿಕ ಸಂಸ್ಥೆಗಳಿಗೆ ಎನ್‌ಜಿಒಗಳಿಗೆ ಅಣ್ಣಾ ಹಜಾರೆ ರಾಷ್ಟ್ರೀಯ ಜಾಲವೊಂದನ್ನು ಜನರ ಆಶಯದಿಂದಲೆ ಸೃಷ್ಟಿಸಿ ನೇಯ್ದರು. ಅಂತಹ ನೇಯ್ಗೆಗೆ ಪ್ರಜಾಪ್ರಭುತ್ವದಲ್ಲಿ ಮುಖ್ಯವಾದ ನಾಲ್ಕನೇ ಅಂಗವೆಂದು ಪರಿಗಣಿತವಾದ ಮಾಧ್ಯಮಗಳು ಸಹಕಾರ ನೀಡಿದವು. ಜನರಿಗೆ ರೋಸಿ ಹೋಗಿದ್ದ. ಭ್ರಷ್ಟಾಚಾರದ ವಿರುದ್ಧದ ದನಿ ರಾಷ್ಟ್ರೀಯ ಧ್ಯೇಯವಾಗಿ ಜನರ ಆಶಯವನ್ನು ಪ್ರತಿಬಿಂಬಿಸಿತು. ಮಹಾರಾಷ್ಟ್ರದಲ್ಲಿ ಪ್ರಭುತ್ವದ ಭ್ರಷ್ಟಾಚಾರದ ವಿರುದ್ಧ ಹೋರಾಡಿ ಅನುಭವ ಪಡೆದಿದ್ದ, ನೈತಿಕ ಶಕ್ತಿಯಿಂದಲೂ ವ್ಯವಹರಿಸಬಲ್ಲ ಅಣ್ಣಾ ಹಜಾರೆ ಅವರ ನಾಯಕತ್ವ ಒದಗಿ ಬಂತು. ನಮ್ಮ ಪ್ರಜಾಪ್ರಭುತ್ವಕ್ಕೆ ಪಕ್ಷ ರಾಜಕೀಯದಿಂದ ಹೊರತಾಗಿ ಜನರ ಆಶಯವನ್ನು ಸೇರಿಸಬಲ್ಲ ಹೊಸ ಆಯಾಮವೊಂದು ಲಭ್ಯವಾಯಿತು.

ಇಂತಹ ಆಯಾಮವೊಂದು ಪ್ರಜಾಪ್ರಭುತ್ವದ ಸಹಜ ಬೆಳವಣಿಗೆ. ರಾಜಕೀಯ ಪಕ್ಷಗಳೂ ಭ್ರಷ್ಟಾಚಾರದ ಭಾಗವಾದಾಗ (ಕರ್ನಾಟಕದಲ್ಲಿ ಬಿ.ಜೆ.ಪಿ ಪಕ್ಷವು ಕಾಂಗ್ರೆಸ್ ಪಕ್ಷಕ್ಕಿಂತ ಕಮ್ಮಿ ಭ್ರಷ್ಟಾಚಾರದಲ್ಲಿ ತೊಡಗಿದೆ ಎನ್ನಲು ಇನ್ನು ಮುಂದೆ ಯಾರಿಗಾದರೂ ಸಾಧ್ಯವೆ? ಲೋಕಾಯುಕ್ತ ವರದಿಯ ಒಂದು ಸ್ಪಷ್ಟ ಸಾಕ್ಷಿಯೇ ಇದೆಯಲ್ಲ.) ಜನರ ಆಶಯವನ್ನು ಪ್ರತಿನಿಧಿಸಬಲ್ಲ ಪಕ್ಷ ರಾಜಕೀಯದ ಹೊರಗಿನ ಶಕ್ತಿಯ ಬೆಳವಣಿಗೆ ನಮ್ಮ ಪ್ರಜಾಪ್ರಭುತ್ವದ ಆರೋಗ್ಯದ ಲಕ್ಷಣ ಎಂದೇ ನಾವು ತಿಳಿಯಬೇಕು.

ಲೋಕಪಾಲ ಮಸೂದೆ ಬೇಡಿಕೆ ಪಾರ್ಲಿಮೆಂಟ್ ಪರಮಾಧಿಕಾರಕ್ಕೆ ವಿರೋಧವೇ?

ಈ ಒಂದು ಆರೋಪವನ್ನು ಅಣ್ಣಾ ಹಜಾರೆಯವರ ಆಂದೋಲನದ ವಿರುದ್ಧ ಕೆಲವರು ಮಾಡಿದ್ದಾರೆ. ಈ ಪ್ರಶ್ನೆಗೆ ಉತ್ತರ ತಿಳಿಯಲು ಪಾರ್ಲಿಮೆಂಟರಿ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪಾರ್ಲಿಮೆಂಟ್ ಸಂಸ್ಥೆಯ ಮೂಲತತ್ವವೇನು ಎಂಬ ತಳಸ್ಪರ್ಶಿ ಸತ್ಯಗಳಲ್ಲಿ ಹುಡುಕಬೇಕು.

ಕೊಡಲ್ಪಟ್ಟ ಅಧಿಕಾರ:

ಮೂಲತಃ ಪಾರ್ಲಿಮೆಂಟ್ ಎಂಬುದು ಜನರನ್ನು ಪ್ರತಿನಿಧಿಸುವ ಸಭೆ. ಅಂತಹ ಲೋಕಸಭೆಯ ಸದಸ್ಯರನ್ನಾಗಿ ಜನರು ತಮ್ಮ ಪ್ರತಿನಿಧಿಗಳನ್ನು ನಿಯೋಜಿಸುತ್ತಾರೆ. ಅಂದರೆ ಅದು ನಿಯೋಜಿಸಲ್ಪಟ್ಟ ಅರ್ಥಾತ್ ಇಂಗ್ಲೀಷಿನಲ್ಲಿ ಹೇಳುವ ಡೆಲಿಗೇಟೆಡ್ (Delegated) ಅಥವಾ ಕೊಡಲ್ಪಟ್ಟ ಅಧಿಕಾರ. ಒಮ್ಮೆ ಅಂತಹ ಅಧಿಕಾರ ಕೊಟ್ಟರೆ ಅದರ ಅವಧಿ ನಮ್ಮ ಪ್ರಜಾಪ್ರಭುತ್ವದಲ್ಲಿ ಐದು ವರುಷಗಳು.

ಹಾಗೆ ಚುನಾವಣೆಯಲ್ಲಿ ಆಯ್ಕೆಯಾದ ಪ್ರತಿನಿಧಿಯ ಅವಧಿ ಐದು ವರುಷವಾಗಿದ್ದು ಅವರನ್ನು ಹಿಂದಕ್ಕೆ ಕರೆಸುವ ಅಧಿಕಾರ ಆರಿಸಿದ ಜನಗಳಿಗೆ ಈಗ ಇಲ್ಲ. ಆದರೆ ಅದು ಜನರಿಗೂ ಪ್ರತಿನಿಧಿಗಳಿಗೂ ಸಂಪರ್ಕವೇ ಇಲ್ಲದ ಪರಮಾಧಿಕಾರ ಅಲ್ಲ. ಜನರ ಆಶಯವನ್ನು ಪ್ರತಿನಿಧಿಸಬೇಕಾದ್ದು ಆಯ್ಕೆಗೊಂಡ ಪ್ರತಿನಿಧಿಯ ಕರ್ತವ್ಯ. ಅಂತಹ ಆಶಯ ಕೇವಲ ಆಯ್ಕೆಯಾಗುವ ದಿನದವರೆಗೆ ಮಾತ್ರ ಎಂದು ನಿಗದಿಯಾಗಿಲ್ಲ. ಐದು ವರುಷದ ಅಧಿಕಾರವಧಿಯಿಂದ ನಿವೃತ್ತನಾಗುವವರೆಗೂ ಆಯ್ಕೆಗೊಂಡ ಪ್ರತಿನಿಧಿಗಳು ಆ ತನಕದ ಜನರ ಆಶಯವನ್ನು ಪ್ರತಿನಿಧಿಸುತ್ತಿರಬೇಕು. ಹಾಗಾಗಿ ತಮ್ಮ ಬೇಡಿಕೆಗಳನ್ನು ಜನರು ತಮ್ಮ ಪ್ರತಿನಿಧಿಗಳ ಸಭೆಯಾದ ಪಾರ್ಲಿಮೆಂಟಿಗೆ ಮಂಡಿಸುವುದು ಜನರ ಹಕ್ಕಿನ ಒಳಗೇ ಇರುತ್ತದೆ. ಮತ್ತು ಅದು ಪಾರ್ಲಿಮೆಂಟಿನ ಪರಮಾಧಿಕಾರವನ್ನು ಪ್ರಶ್ನಿಸಿದಂತೆ ಆಗುವುದಿಲ್ಲ.

ಅದರ ಜೊತೆ ಸಂವಿಧಾನ ಜನರಿಗೆ ನೀಡಿದ ಅಭಿವ್ಯಕ್ತಿ ಸ್ವಾತಂತ್ರ್ಯವೂ ತಮ್ಮ ಬೇಡಿಕೆಗಳನ್ನು ಮಂಡಿಸಲು ಅವಕಾಶ ನೀಡುತ್ತದೆ ಎಂಬುದನ್ನು ಮರೆಯಬಾರದು.ಆದ್ದರಿಂದ, ಡೆಲಿಗೇಟೆಡ್ ಪವರ್ ಅಥವಾ ನಿಯೋಜಿತ ಅಧಿಕಾರವನ್ನು ಹೊಂದಿದ ನಾಯಕರ ಬಳಿ ಅಂತಹ ಅಧಿಕಾರ ನೀಡಿದ ಜನರು ಹೋಗಿ ನಮಗೆ ಇಂತಹ ಒಂದು ಲೋಕಪಾಲ ಮಸೂದೆ ಭ್ರಷ್ಟಾಚಾರ ನಿಯಂತ್ರಣಕ್ಕೆ ಬೇಕು. ಅದನ್ನು ನೀವು ಚರ್ಚಿಸಿ ವಸೂದೆಯಾಗಿ ಅಂಗೀಕರಿಸಿ ಎನ್ನುವುದರಲ್ಲಿ ತಪ್ಪೇನೂ ಇಲ್ಲ. ಮಾತ್ರವಲ್ಲ ಅದು ಜನರ ಅಧಿಕಾರದ ಒಳಗೇ ಬರುತ್ತದೆ.

ಇಂತಹ ಒತ್ತಾಯ ಇಲ್ಲದಿದ್ದಾಗ ಏನಾಗುತ್ತದೆ?

ಜನರ ಒತ್ತಾಯ ಇಲ್ಲದಾಗ ಒಂದು ಪ್ರಗತಿಪರ ಮಸೂದೆ ಜಾರಿಯಾಗಲು ಸಮಯ ಹೆಚ್ಚು ತಗಲುತ್ತದೆ ಇವನ್ನು ಎರಡು ಉದಾಹರಣೆಗಳಿಂದ ಗಮನಿಸಬಹುದು.

ಸಮಗ್ರ ಹಿಂದೂ ಆಕ್ಟ್: ನಮ್ಮ ಪಾರ್ಲಿಮೆಂಟ್ ಅಂಗೀಕರಿಸಿದ ಎಲ್ಲಾ ಹಿಂದು ಮಸೂದೆಗಳು 1957ರಿಂದ ಜಾರಿಗೆ ಬಂತು. ಅಲ್ಲಿಯವರೆಗೆ ಹಿಂದೂಗಳಲ್ಲಿಯೂ ಬಹು ಪತ್ನಿತ್ವ ಜಾರಿಯಲ್ಲಿತ್ತು. 1947ರಿಂದಲೇ ಡಾ। ಬಾಬಾ ಸಾಹೇಬ್ ಅಂಬೇಡ್ಕರ್ ಸಂಪೂರ್ಣ ಹಿಂದೂ ಆ್ಯಕ್ಟ್ ಜಾರಿಗೆ ಬರಬೇಕೆಂದು ಒತ್ತಾಯಿಸುತ್ತಿದ್ದರು. ಈ ಮಸೂದೆಯ ಹಿಂದೆ

ಬ್ರಹ್ಮ ಸಮಾಜದ ಕಾಲದಿಂದ ಹಿಂದೂ ಸಮಾಜದಲ್ಲಿ ನಡೆದ ಪ್ರಗತಿಪರ ಚಿಂತನೆಯ ಬೆಂಬಲದ ಹಿನ್ನೆಲೆ ಇತ್ತು. ಅಂದರೆ ಸುಮಾರು ಒಂದೂವರೆ ಶತಮಾನಗಳಿಗೂ ಅಧಿಕ ಕಾಲದ ಪ್ರಗತಿಪರ ಸಾಮಾಜಿಕ ಚಿಂತನೆ ಇದ್ದಂತಾಯಿತು. ಆದರೂ ಪಂಡಿತ್ ನೆಹರೂ ನಾವಿನ್ನೂ ಈ ಮಸೂದೆಗಾಗಿ ಪಾರ್ಲಿಮೆಂಟಿನ ಹೊರಗೆ ಹಾಗೂ ಒಳಗೆ ತಯಾರಾಗಿಲ್ಲ ಎಂದು ಹೇಳುತ್ತಿದ್ದರು. ಹಿಂದೂ ಮಸೂದೆ ತಡವಾಗುವ ಕಾರಣವನ್ನು ಪ್ರತಿಭಟಿಸಿ ಡಾ। ಅಂಬೇಡ್ಕರ್ ತಮ್ಮ ಕಾನೂನು ಸಚಿವ ಸ್ಥಾನಕ್ಕೆ ರಾಜೀನಾಮೆ ಇತ್ತರು.

1956ರಲ್ಲಿ ಸಮಗ್ರ ಹಿಂದೂ ಉತ್ತರಾಧಿಕಾರದ ಮಸೂದೆ (Hindu sucession Act) ಬಂದರೂ ಹೆಣ್ಣು ಮಕ್ಕಳಿಗೆ ಪಿತ್ರಾರ್ಜಿತ ಆಸ್ತಿಯಲ್ಲಿ ಸಮಾನ ಹಕ್ಕು ಇರಲಿಲ್ಲ. ಆಸ್ತಿಯ ಹಕ್ಕು ಕೇವಲ ಗಂಡು ಮಕ್ಕಳಿಗೆ ಮಾತ್ರ ಮೀಸಲಾಗಿತ್ತು. ಹಿಂದೂ ಹೆಣ್ಣು ಮಕ್ಕಳಿಗೂ ಕುಟುಂಬದ ಪಿತ್ರಾರ್ಜಿತ ಆಸ್ತಿಯಲ್ಲಿ ಸಮಾನ ಹಕ್ಕು ಬರಲು 2005ರಲ್ಲಿ ಹಿಂದೂ ಮಸೂದೆಗೆ ತಂದ ತಿದ್ದುಪಡಿವರೆಗೆ ಕಾಯಬೇಕಾಯಿತು. ಅಂದರೆ ಒಂದು ಪ್ರಗತಿಪರ ಮಸೂದೆಯಲ್ಲಿ ಹೆಣ್ಣು ಮಕ್ಕಳಿಗೆ ಸಮಾನ ಹಕ್ಕು ಬರಲು ಸ್ವತಂತ್ರ ಭಾರತ 59 ವರುಷಗಳ ಕಾಲ ಕಾಯಬೇಕಾಯಿತು.

ಭೂಸುಧಾರಣೆ ಕಾನೂನು: ನಮ್ಮಲ್ಲಿ ಭೂಸುಧಾರಣೆ ಕಾನೂನಿನ ಅವಶ್ಯಕತೆ ಜಮೀನ್ದಾರಿ ಪದ್ಧತಿಯ ರದ್ದತಿ ಕಾಲದಿಂದಲೂ, ಅದಕ್ಕಿಂತ ಹಿಂದಿನಿಂದಲೂ, ಮನವರಿಕೆಯಾಗಿತ್ತು. ನಮ್ಮ ದೇಶದ ಸೋಶಿಯಲಿಸ್ಟ್, ಕಮ್ಯೂನಿಸ್ಟ್ ಹಾಗೂ ಪ್ರಗತಿಪರ ಶಕ್ತಿಗಳ ನಿರಂತರ ಹೋರಾಟದಿಂದ ಸಂವಿಧಾನ ತಿದ್ದುಪಡಿ ಹೊಸ ಕಾನೂನುಗಳ ಜಾರಿ ಮೂಲಕ ದಶಕಗಳ ಕಾಲ ಕಾದು ಈ ಮಸೂದೆ ಜಾರಿಯಾಯಿತು. 1974ರಲ್ಲಿ ಕರ್ನಾಟಕದಲ್ಲಿ ಈ ಭೂಸುಧಾರಣಾ ಕಾನೂನು ಜಾರಿಯಾಗುವ ಮೊದಲು 27 ವರುಷಗಳ ಹೋರಾಟವಾಗಿದೆ. ಕೇಶವಾನಂದ ಭಾರತಿ ಕೇಸಿನಲ್ಲಿ ಸುಪ್ರೀಂ ಕೋರ್ಟು ಸಂವಿಧಾನದ ಮೂಲಭೂತ ಅಂಶಗಳಲ್ಲಿ (Basic structure of the Constitution) ಆಸ್ತಿಯ ಹಕ್ಕು ಸೇರ್ಪಡೆಯಾಗುವುದಿಲ್ಲ ಎನ್ನುವಲ್ಲಿಗೆ ಒಂದು ಹಂತದ ಸಮರವಾದಂತಾಯಿತು.

ಎಷ್ಟು ವರುಷ ಕಾಯಬೇಕು?

ಈ ಮೇಲಿನ ಎರಡು ಉದಾಹರಣೆ ಪ್ರಗತಿಪರ ಮಸೂದೆಯೊಂದರ ಜಾರಿಗೆ ನಮ್ಮ ಪಾರ್ಲಿಮೆಂಟರಿ ಇತಿಹಾಸ ತೆಗೆದುಕೊಂಡ ಸಮಯವನ್ನು ಸೂಚಿಸುತ್ತದೆ. ಇಂದು ಭ್ರಷ್ಟಾಚಾರ ಬೃಹದಾಕಾರವಾಗಿ ಬೆಳೆಯುತ್ತಿರುವಾಗ (ರಾಷ್ಟ್ರದ ಪ್ರಧಾನ ಮಂತ್ರಿಗಳನ್ನೇ ಭ್ರಷ್ಟಾಚಾರ ಕೇಸಿನಲ್ಲಿ ಸಾಕ್ಷಿಯಾಗಿ ಕರೆಸುತ್ತೇವೆ ಎಂದು ಮಾಜಿ ಕೇಂದ್ರ ಮಂತ್ರಿಗಳು ಹೇಳುತ್ತಿರುವಾಗ) ನಾವು ಒಂದು ಕಾನೂನು ಬರುವುದಕ್ಕೆ ಎಷ್ಟು ವರುಷ ಕಾಯಬೇಕು ಎಂಬುದು ಪ್ರಶ್ನೆ.

ನೆಹರೂ – ಅಂಬೇಡ್ಕರ್ ಪತ್ರಗಳು:

ಇದಕ್ಕೆ ಪಂಡಿತ್ ನೆಹರೂ ಹಾಗೂ ಡಾ। ಅಂಬೇಡ್ಕರ್ ಅವರ ಪತ್ರ ವ್ಯವಹಾರಗಳಿಂದ ಉದಾಹರಣೆ ಕೊಡಬಹುದು. ಹಿಂದೂ ಕಾನೂನು ಸಂಹಿತೆ ಜಾರಿಗೆ ಬರಬೇಕೆಂದು ಡಾ। ಅಂಬೇಡ್ಕರ್ ಒತ್ತಾಯಿಸಿ ಸಚಿವ ಪದವಿಗೆ ರಾಜೀನಾಮೆ ನೀಡಲು ಮುಂದಾದಾಗ, ಪಂಡಿತ್ ನೆಹರೂ ಬರೆದ ಪತ್ರದಲ್ಲಿ (10–08–1951) ಡಾ। ಅಂಬೇಡ್ಕರ್ ಅವರಿಗೆ ಹೇಳುವ

ಮಾತುಗಳು; "ಹಿಂದೂ ಸಂಹಿತೆ ವಿಧೇಯಕದ ಬಗ್ಗೆ ಸದನದ ಒಳಗಷ್ಟೇ ಅಲ್ಲ ಹೊರಗೂ ಸಾಕಷ್ಟು ವಿರೋಧಿಗಳಿದ್ದಾರೆಂದು ನಿಮಗೆ ಗೊತ್ತಿದೆ. ಉದ್ದೇಶ ಎಷ್ಟೇ ಉದಾತ್ತವಾಗಿದ್ದರೂ, ಈ ವಿರೋಧಿಗಳನ್ನು ನಾವು ಪಕ್ಕಕ್ಕೆ ತಳ್ಳಿ ಹಾಕುವುದಕ್ಕೆ ಮತ್ತು ಅದು ಬೇಗ ಆಗುವಂತೆ ಮಾಡಲು ಸಾಧ್ಯವಾಗುವುದಿಲ್ಲ. ತುಂಬಾ ವಿಳಂಬ ಆಗುವಂತೆ ಮಾಡುವ ಶಕ್ತಿ ಅವರಲ್ಲಿದೆ. ಆದ್ದರಿಂದ, ಈ ಉದ್ದೇಶ ಈಡೇರಲು ನಾವು ಜಾಣ್ಮೆಯಿಂದ ಮುಂದುವರಿಯಬೇಕಾಗುತ್ತದೆ." (ನೋಡಿ: ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಸಮಗ್ರ ಬರಹಗಳು ಮತ್ತು ಭಾಷಣಗಳು– ಸಂಪುಟ – 15. ಕುವೆಂಪು ಭಾಷಾ ಭಾರತಿ ಪ್ರಾಧಿಕಾರ)

ಒಳಗೆ ಹಾಗೂ ಹೊರಗೆ ವಿರೋಧಿಗಳು:

ಪ್ರತಿಯೊಂದು ಪ್ರಗತಿಪರ ಮಸೂದೆ ಬಂದಾಗಲೂ ಸದನದ ಒಳಗಷ್ಟೇ ಅಲ್ಲ ಹೊರಗೂ ಸಾಕಷ್ಟು ವಿರೋಧಿಗಳಿರುತ್ತಾರೆ. ಇದು ಪ್ರಜಾಪ್ರಭುತ್ವದಲ್ಲಿ ಸಹಜ. ಜನಲೋಕಪಾಲ್ ಮಸೂದೆಯನ್ನು ಹಲ್ಲಿಲ್ಲದ ಹಾವಿನಂತೆ ಮಾಡಲು ಸರ್ಕಾರದ ಸಚಿವರು ಸ್ಟಾಂಡಿಂಗ್ ಕಮಿಟಿಯಲ್ಲಿ ಮಾಡಿದ ಪ್ರಯತ್ನಗಳೇ ಇದಕ್ಕೆ ಸಾಕ್ಷಿ. ಭ್ರಷ್ಟಾಚಾರದಿಂದ ಲಾಭ ಪಡೆಯುವ ಜನವರ್ಗವೂ ಸದನದ ಹೊರಗೆ ಇದೆ. ಅವರಿಗೂ ಇಂತಹ ಜನ ಲೋಕಪಾಲ ಮಸೂದೆ ಬೇಡವಾಗಿದೆ.

ಪಾರ್ಲಿಮೆಂಟಿನ ಬಲವರ್ಧನೆ:

ಈ ಹಿನ್ನೆಲೆಯಲ್ಲಿ ಒಂದು ಕಾನೂನು ಬರಬೇಕು. ಭ್ರಷ್ಟಾಚಾರವನ್ನು ಹಿಡಿತದಲ್ಲಿಡುವ ಶಕ್ತಿ ಆ ಮಸೂದೆಗೆ ಇರಬೇಕು ಎಂದು ಹೋರಾಟ ಮಾಡುವುದೂ ಪ್ರಜಾಪ್ರಭುತ್ವದಲ್ಲಿ ಸಹಜವೇ ಆಗಿದೆ. ಅಂತಹ ಹೋರಾಟ ಪಾರ್ಲಿಮೆಂಟಿನ ಮೂಲಕವೇ ಮಸೂದೆಯೊಂದನ್ನು ತರಬೇಕೆಂದು ಹೋರಾಡುವಾಗ ಅದು ಪಾರ್ಲಿಮೆಂಟಿನ ಪರಮಾಧಿಕಾರವನ್ನು ಪ್ರಶ್ನಿಸುವುದಿಲ್ಲ. ಜನರ ಆಶಯವನ್ನು ಪಾರ್ಲಿಮೆಂಟಿಗೆ ತುಂಬಿ ಸದನವನ್ನು ಬಲಪಡಿಸುತ್ತದೆ. ಆಗ ಪಾರ್ಲಿಮೆಂಟಿನ ಪ್ರತಿನಿಧಿಗಳು ಮತ್ತು ಪಾರ್ಲಿಮೆಂಟಿನಿಂದಲೆ ಪಡೆದ ಅಧಿಕಾರದಿಂದ ನಡೆಸುತ್ತಿರುವ ಸರ್ಕಾರದ ಪ್ರತಿನಿಧಿಗಳು ಜೊತೆಯಾಗಿ ಹೋರಾಡುತ್ತಿರುವ ಜನ ಪ್ರತಿನಿಧಿಗಳೊಡನೆ ಮಾತುಕತೆ ನಡೆಸಿ ಇಬ್ಬರಿಗೂ ಒಪ್ಪಿತವಾಗುವ ರಾಜಕೀಯ ನಿರ್ಣಯಗಳಿಗೆ ತಲುಪಬೇಕು. ಜನರನ್ನು ತಮ್ಮ ವಿರೋಧಿಗಳೆಂದು ಸರ್ಕಾರದ ಅಧಿಕಾರಿಗಳು ತಿಳಿಯಕೂಡದು. ಮುಂದೆ ಪ್ರತಿಯೊಬ್ಬರೂ ಈ ರೀತಿ ಹೋರಾಟಕ್ಕೆ ಇಳಿದರೆ ಏನಾಗಬಹುದು ಎಂಬ ಭಾವನಾತ್ಮಕ ಭಯಕ್ಕೆ ಪಕ್ಕಾಗುವುದು ಸಮಂಜಸವಾದ ಪ್ರಜಾಪ್ರಭುತ್ವದ ಮಾದರಿಯಲ್ಲ. ಮಾತುಕತೆ, ಚರ್ಚೆಗಳ ಮೂಲಕ ಜನರ ಆಶಯವನ್ನು ಅರಿಯುವುದೇ ಪ್ರಜಾಪ್ರಭುತ್ವದ ರಾಜಮಾರ್ಗ.

ಜನಲೋಕಪಾಲ ಮಸೂದೆಯ ಹೋರಾಟ ಸಂವಿಧಾನ ವಿರೋಧಿಯೆ?

ಈ ಪ್ರಶ್ನೆಗೆ ಉತ್ತರವನ್ನು ಎರಡು ನೆಲೆಗಳಲ್ಲಿ ಹುಡುಕಬೇಕು. ಮೊದಲನೆಯದು ಜನಲೋಕಪಾಲ ಕರಡು ಮಸೂದೆಯಲ್ಲಿರುವ ವಿಚಾರಗಳು. ಎರಡನೆಯದು ಹೋರಾಟದ ಸ್ವರೂಪ ಹಾಗೂ ಪಾರ್ಲಿಮೆಂಟಿನ ಮುಂದೆ ಮಂಡಿಸಿದ ಬೇಡಿಕೆಗಳು.

ಅವುಗಳನ್ನೀಗ ಒಂದೊಂದಾಗಿ ಪರೀಕ್ಷಿಸೋಣ.

ಸಂಚಯ

(1) ಜನಲೋಕ ಪಾಲ ಮಸೂದೆಯ ಕರಡು ಪ್ರತಿ ಉನ್ನತ ನ್ಯಾಯಾಧೀಶರು ಹಾಗೂ ನ್ಯಾಯಾಲಯಗಳೂ ಕೂಡಾ ಭ್ರಷ್ಟಾಚಾರ ನಡೆದಾಗ ಲೋಕಪಾಲ ಮಸೂದೆ ಅಡಿ ತನಿಖೆಗೆ ಒಳಗಾಗಬೇಕು ಎಂದು ಸೂಚಿಸುತ್ತದೆ.

ನಮ್ಮ ಸಂವಿಧಾನ ಎಲ್ಲಾ ಹಂತದಲ್ಲೂ ನ್ಯಾಯಾಲಯಗಳನ್ನು ಸ್ವಾಯತ್ತಗೊಳಿಸಿದೆ. ನ್ಯಾಯ ನಿರ್ಣಯದಲ್ಲಿ ನ್ಯಾಯಾಧೀಶರು ಸ್ವತಂತ್ರರು ಹಾಗೂ ಕಾಯಿದೆಗಳಿಗೆ ಬದ್ಧರು. ನ್ಯಾಯಾಧೀಶರ ಮೇಲೆ ಇನ್ನೊಂದು ಸಂಸ್ಥೆಯ ಕಡಿವಾಣ ಹಾಕುವುದು ನ್ಯಾಯಾಂಗದ ಸ್ವಾಯತ್ತತೆಗೆ ಭಂಗ ತರಲು ಕಾರಣವಾದೀತು. ಕರಡು ಪ್ರತಿಯ ತಯಾರಿಯಲ್ಲಿ ಸರಕಾರಿ ಹಾಗೂ ನಾಗರಿಕ ಪ್ರತಿನಿಧಿಗಳ ವಿಶ್ವಾಸಾರ್ಹ ಚರ್ಚೆ ನಡೆಯದ ಕಾರಣ ಇಂತಹ ಓರೆ ಕೋರೆಗಳು ಕಾನೂನಿನ ಕರಡು ಪ್ರತಿಯಲ್ಲಿ ಉಳಿದಿರಬಹುದು. ನ್ಯಾಯಾಲಯದ ಭ್ರಷ್ಟಾಚಾರವನ್ನು "ಜುಡಿಶಿಯಲ್ ಎಕೌಂಟೆಬಿಲಿಟಿ ಬಿಲ್" (ನ್ಯಾಯಾಲಯಗಳ ಉತ್ತರದಾಯಿತ್ವದ ಕಾನೂನು) ನಲ್ಲಿ ಸೇರಿಸಿ ನ್ಯಾಯಾಲಯಗಳ ಭ್ರಷ್ಟಾಚಾರದ ತಡೆಗೂ ಕಾನೂನು ತರಬಹುದು ಎಂದು ಸರ್ಕಾರ ಹೇಳಿತು. ಜುಡಿಶಿಯಲ್ ಎಕೌಂಟೆಬಿಲಿಟಿ ಬಿಲ್‌ನ್ನು ಜನಲೋಕಪಾಲ ಮಸೂದೆ ಜೊತೆ ಪಾರ್ಲಿಮೆಂಟಿನಲ್ಲಿ ಮಂಡಿಸುವ ಬಗ್ಗೆ ಒಪ್ಪಿಗೆ ಸೂಚಿಸಿದೊಡನೆ ಅಣ್ಣಾ ತಂಡ ಜನಲೋಕಪಾಲ ಮಸೂದೆಯಲ್ಲಿ ನ್ಯಾಯಾಂಗವೂ ಸೇರ್ಪಡೆಯಾಗಬೇಕು ಎಂಬ ತಮ್ಮ ಬೇಡಿಕೆಯನ್ನು ಹಿಂದೆ ಪಡೆಯಿತು. ಲೋಕಪಾಲ ಮಸೂದೆ ವ್ಯಾಪ್ತಿಯಿಂದ ನ್ಯಾಯಾಲಯಗಳನ್ನೂ ನ್ಯಾಯಾಧೀಶರನ್ನೂ ಮುಕ್ತಗೊಳಿಸಲು ಒಪ್ಪಿಗೆ ನೀಡಿತು.

ಯಾವುದೇ ಮೇಲ್‌ಮನವಿ ಇಲ್ಲದಿದ್ದರೂ ಮೂಲಭೂತ ಹಕ್ಕುಗಳ ಪ್ರಕಾರ ಲೋಕಪಾಲರ ತೀರ್ಪಿನ ವಿರುದ್ಧ ಪ್ರತಿಯೊಬ್ಬ ಪ್ರಜೆಗೂ ಸುಪ್ರೀಂ ಕೋರ್ಟಿನಲ್ಲಿ ರಿಟ್ ಪಿಟಿಷನ್ ಸಲ್ಲಿಸುವ ಹಕ್ಕು ಇದ್ದೇ ಇದೆ. ಆದುದರಿಂದ ಅಣ್ಣಾ ತಂಡ ನ್ಯಾಯಾಲಯಗಳನ್ನೂ, ನ್ಯಾಯಾಧೀಶರನ್ನೂ ಲೋಕಪಾಲ ವ್ಯಾಪ್ತಿಯಿಂದ ಹೊರಗಿಡಲು ಒಪ್ಪಿರುವುದರಿಂದ ಅಲ್ಲಿ ಯಾವುದೇ ಸಂವಿಧಾನ ವಿರೋಧ ಇರುವುದಿಲ್ಲ.

ಪ್ರಧಾನಮಂತ್ರಿಗಳು ಲೋಕಪಾಲ ವ್ಯಾಪ್ತಿಗೆ ಒಳಪಡಬೇಕೆ?

ಪ್ರಧಾನ ಮಂತ್ರಿಗಳು ಲೋಕಪಾಲ ವ್ಯಾಪ್ತಿ ಒಳಗೆ ಬರಬೇಕೆ? ಬೇಡವೆ? ಎಂಬುದು ಇನ್ನೊಂದು ಅಂಶ. ಪಾರ್ಲಿಮೆಂಟಿನಲ್ಲಿ ನಡೆದ ಚರ್ಚೆಯಲ್ಲಿ ಕಾನೂನು ತಜ್ಞರಾದ ಅರುಣ್ ಜೇಟ್ಲಿ ಮೊದಲಾದವರು ಈ ಬಗ್ಗೆ ಉತ್ತರಿಸಿದ್ದಾರೆ.

ಪ್ರಧಾನ ಮಂತ್ರಿಗಳು ಪಾರ್ಲಿಮೆಂಟಿಗೆ ಮಾತ್ರ ಬಾಧ್ಯರು ಎಂಬುದೊಂದು ಮತ. ಅದು ಸರಕಾರಿ ಮೂಲ ಬಾಧ್ಯತೆಗಳಿಗೆ ಮಾತ್ರ ಅನ್ವಯವಾಗುತ್ತದೆ. ಉಳಿದಂತೆ ಇತರ ಎಲ್ಲಾ ಕಾನೂನಿನ ಎದುರು ಪ್ರಧಾನ ಮಂತ್ರಿಗಳೂ ಇತರ ಪ್ರಜೆಗಳಂತೆ ಸಮಾನರು. ಉದಾಹರಣೆಗೆ ಕ್ರಿಮಿನಲ್ ಅಪರಾಧಗಳಲ್ಲಿ ಪ್ರಧಾನ ಮಂತ್ರಿಯೂ ಇತರ ಸಾಮಾನ್ಯ ಆರೋಪಿಯಂತೆ ವಿಚಾರಣೆಗೆ ಒಳಪಡಬೇಕು. ಇತರ ಕಾನೂನುಗಳ ಎದುರು ಪ್ರಧಾನಿ ಸಮಾನರಾದರೆ ಭ್ರಷ್ಟಾಚಾರಕ್ಕೆ ಸಂಬಂಧಿಸಿದ ಕಾನೂನಿನ ಎದುರು ಪ್ರಧಾನ ಮಂತ್ರಿಗಳಿಗೆ ಪ್ರತ್ಯೇಕ ರಕ್ಷಣೆ ಯಾಕೆ? ಆದರೆ ರಾಷ್ಟ್ರೀಯ ಭದ್ರತೆ, ಅಂತರರಾಷ್ಟ್ರೀಯ ವಿಚಾರ ಮೊದಲಾದ ಕೆಲವಾರು ವಿನಾಯಿತಿಗಳನ್ನು (ಮಾಹಿತಿ ಹಕ್ಕಿನ ಸಂದರ್ಭದಲ್ಲಿ ಮಾಡಿರುವಂತೆ) ಪ್ರಧಾನ ಮಂತ್ರಿಗಳ ಕೆಲಸ ಕಾರ್ಯಗಳನ್ನ ಆಡಳಿತದ ಅನುಕೂಲಕ್ಕಾಗಿ ನೀಡಬಹುದು.

ಪಾರ್ಲಿಮೆಂಟ್ ಸದಸ್ಯರು ಮುಕ್ತರೇ?

ಮತ್ತೊಂದು ಚರ್ಚೆಗೊಳಗಾದ ಅಂಶ ಪಾರ್ಲಿಮೆಂಟ್ ಸದಸ್ಯರ ಭ್ರಷ್ಟಾಚಾರ ನಿಯಂತ್ರಣಕ್ಕೆ ಸಂಬಂಧಿಸಿದ ವಿಚಾರ. ಪಾರ್ಲಿಮೆಂಟಿನ ಒಳಗೆ ಮಾತನಾಡುವುದು ಅಲ್ಲಿನ ಎಲ್ಲಾ ವಿದ್ಯಮಾನಗಳಲ್ಲೂ ಪಾರ್ಲಿಮೆಂಟ್ ಸದಸ್ಯರು ಸ್ವತಂತ್ರರು. ಆದರೆ ಪಾರ್ಲಿಮೆಂಟಿನ ಹೊರಗೆ ಅವರು ಭ್ರಷ್ಟಾಚಾರ ನಡೆಸಿದರೆ ಆ ಕೆಲಸಗಳು ಲೋಕಪಾಲರ ತನಿಖೆಗೆ ಅರ್ಹವಾಗುತ್ತದೆ. ಈ ವಿಚಾರವನ್ನು ಕಾನೂನು ತಜ್ಞರಾಗಿ ಅರುಣ್ ಜೇಟ್ಲಿ ಅನು ಮೋದಿಸುತ್ತಾರೆ. ಸಂವಿಧಾನದ 105ನೇ ವಿಧಿಯೊಳಗೆ ಈ ವಿಚಾರವನ್ನು ತರಬಹುದೆಂದು ಸೂಚಿಸುತ್ತಾರೆ. ಅನೇಕ ಕಾನೂನು ತಜ್ಞರು ಪಾರ್ಲಿಮೆಂಟ್ ಸದಸ್ಯರು ಪಾರ್ಲಿಮೆಂಟಿನ ಹೊರಗಿನ ಭ್ರಷ್ಟಾಚಾರದಲ್ಲಿ ತನಿಖೆಗೆ ಅರ್ಹರು ಎಂದೇ ಅಭಿಪ್ರಾಯ ಪಡುತ್ತಾರೆ. ಈ ನಿಟ್ಟಿನಲ್ಲಿ ಅಣ್ಣಾ ಚಳವಳಿ ಸಂವಿಧಾನ ವಿರೋಧಿ ಎನ್ನಲಾಗುವುದಿಲ್ಲ.

ನಿಯಂತ್ರಣ ಮತ್ತು ಸಮತೋಲ ತತ್ವ:

ನಮ್ಮ ಸಂವಿಧಾನ ಪ್ರತಿಪಾದಿಸುವ ಚೆಕ್ಸ್ ಅಂಡ್ ಬ್ಯಾಲನ್ಸ್ (Checks and Balance) ಅಂದರೆ ನಿಯಂತ್ರಣ ಮತ್ತು ಸಮತೋಲ ತತ್ವ ಎಲ್ಲಕ್ಕೂ ವಿಶೇಷವಾದುದು. ನಮ್ಮಲ್ಲಿ ನ್ಯಾಯಾಂಗ, ಶಾಸಕಾಂಗ ಮತ್ತು ಕಾರ್ಯಾಂಗಗಳು ಒಂದನ್ನೊಂದು ನಿಯಂತ್ರಿಸುತ್ತಾ ಎಲ್ಲೂ ಅಧಿಕಾರ ಪರಮಾಧಿಕಾರವಾಗಿ ದುರ್ಬಳಕೆ ಆಗದಂತೆ ಸಮತೋಲವನ್ನು ಕಾಯ್ದುಕೊಳ್ಳುತ್ತದೆ. ಈ ನಿಯಂತ್ರಣ ಮತ್ತು ಸಮತೋಲ ತತ್ವಕ್ಕೆ ಸಂವಿಧಾನವೂ ಹೊರತಾಗಿಲ್ಲ. ಅದು ಜನರ ಆಶಯದಿಂದ ಅಗತ್ಯಗಳಿಂದ ನಿಯಂತ್ರಿಸಲ್ಪಟ್ಟಿದೆ.

ಡಾ। ಅಂಬೇಡ್ಕರ್ ಅಭಿಪ್ರಾಯ:

ಇದರ ಸ್ಪಷ್ಟ ಚಿತ್ರಣ ಸಂವಿಧಾನದ ಮೊದಲನೇ ತಿದ್ದುಪಡಿ ವಿಧೇಯಕಕ್ಕೆ ನಡೆದ ಪಾರ್ಲಿಮೆಂಟರಿ ಚರ್ಚೆಯಲ್ಲಿ ಡಾ। ಅಂಬೇಡ್ಕರ್ ಅವರು ಹೇಳುವ ಮಾತುಗಳಲ್ಲಿ ಬಹಳ ಸ್ಪಷ್ಟವಾಗಿ ಪ್ರತಿಪಾದಿತವಾಗಿದೆ. ನಮ್ಮ ಸಂವಿಧಾನದ ರಚನೆಯಲ್ಲಿ ನಮ್ಮ ಮೂಲಭೂತ ಹಕ್ಕುಗಳನ್ನು ದಾಖಲಿಸುವಾಗ ಅಮೇರಿಕಾದ ಸಂವಿಧಾನವನ್ನು ಆಕರವಾಗಿ ಬಳಸಲಾಗಿದೆ. ಆದರೆ ನಮ್ಮ ಸಂವಿಧಾನ ಹಾಗೂ ಅಮೆರಿಕಾದ ಸಂವಿಧಾನಗಳ ಮೂಲಭೂತ ವ್ಯತ್ಯಾಸವೆಂದರೆ, ಡಾ। ಅಂಬೇಡ್ಕರ್ ಹೇಳುವಂತೆ "ಅಮೆರಿಕಾದ ಸಂವಿಧಾನ ಮೂಲಭೂತ ಹಕ್ಕುಗಳ ಮೇಲೆ ಯಾವುದೇ ಮಿತಿ ವಿಧಿಸಿಲ್ಲ. ನಮ್ಮ ಸಂವಿಧಾನದಲ್ಲಿ ಮೂಲಭೂತ ಹಕ್ಕುಗಳನ್ನು ನೀಡಲಾಗಿದ್ದರೂ ಅವುಗಳಿಗೆ ಮಿತಿ ವಿಧಿಸಲಾಗಿದೆ."

ಸಂವಿಧಾನದ ಮೊದಲ ತಿದ್ದುಪಡಿ ಸಂದರ್ಭದಲ್ಲಿ ಮೂಲಭೂತ ಹಕ್ಕುಗಳ ಮಿತಿಯ ಪರಿಣಾಮವೇನು ಎಂಬ ಮಹತ್ವದ ಚರ್ಚೆಯಾಗಿದೆ. ಆ ಚರ್ಚೆಯ ಮೂಲ ತತ್ವಗಳು ಇಂದಿಗೂ ಅನ್ವಯಿಕವಾಗಿದೆ. ಸಂವಿಧಾನದ ನಿರ್ದೇಶಕ ತತ್ವಗಳ ಪ್ರಕಾರ ರಾಜ್ಯಗಳಿಗೂ ಕರ್ತವ್ಯಗಳಿವೆ. ರಾಜ್ಯಕ್ಕೆ ಕರ್ತವ್ಯ ಇದೆ ಎಂದಾದರೆ ರಾಜ್ಯವು ಶಾಸನಗಳನ್ನು ಮಾಡದೆ ಅವುಗಳನ್ನು ನಿರ್ವಹಿಸುವುದು ಹೇಗೆ? ಎಂಬುದು ಪ್ರಶ್ನೆಯಾಗಿತ್ತು.

ಇದನ್ನು ಸರಳವಾಗಿ ಹೀಗೆ ಹೇಳಬಹುದು: ಸಂವಿಧಾನವು ಸರ್ವತಂತ್ರ ಸ್ವತಂತ್ರವಾದರೂ, ಕಾಲದ ಅವಶ್ಯಕತೆ ಹಾಗೂ ಜನರ ಆಶಯಗಳಿಗೆ ಅಗತ್ಯವಾಗಿ ತಿದ್ದುಪಡಿಗಳನ್ನು

ಮಾಡಬಹುದು. ರಾಜ್ಯದ ಕರ್ತವ್ಯಕ್ಕೆ ಅನುಸಾರವಾಗಿ ಜನರ ಆಶಯಗಳಿಗೆ ಅನುಗುಣವಾಗಿ ಶಾಸನಗಳನ್ನು ರಚಿಸುವುದು ಸಾಧ್ಯ. ಈ ಹಿನ್ನೆಲೆಯಲ್ಲಿ ತಮಗೆ ಇಂತಹ ಶಾಸನ ಬೇಕು. ನೀವು ಅದನ್ನು ಚರ್ಚಿಸಿ ಎಂದು ಜನರು ತಮ್ಮ ಪ್ರತಿನಿಧಿಗಳನ್ನು ಒತ್ತಾಯಿಸುವುದು ಸಂವಿಧಾನ ವಿರೋಧಿ ಅಲ್ಲ.

ಆಡಳಿತ ವ್ಯವಸ್ಥೆಗೆ ವಿರೋಧಿಯೆ?

ಹಾಗಾದರೆ ಅಣ್ಣಾ ಹಜಾರೆ ಆಂದೋಲನ ಹಾಗೂ ಜನಲೋಕ ಪಾಲ ಮಸೂದೆಗೆ ಆಗ್ರಹ ಸಂವಿಧಾನ ವಿರೋಧಿ ಎಂಬ ವಿಚಾರ ಯಾಕೆ ಬಂತು? ಅದು ಕೇವಲ ಆಡಳಿತ ವ್ಯವಸ್ಥೆಗೆ ಮಾತ್ರ ವಿರೋಧಿಯೆ? ಸಂವಿಧಾನಾತ್ಮಕ ಕಾನೂನು ವ್ಯವಸ್ಥೆ ಬೆಳೆದಾಗ ಎಲ್ಲವೂ ಒಂದು ವ್ಯವಸ್ಥೆಯಲ್ಲೇ ನಡೆಯಬೇಕು ಎಂಬ ಅಪೇಕ್ಷೆ ಬಲಿಯುತ್ತದೆ. ಜನರ ಹೋರಾಟ ನಿರಂತರವಾಗಿರಲು ಸಾಧ್ಯವಿಲ್ಲ. ಅದು ಸಾಮಾಜಿಕ, ರಾಜಕೀಯ ಬದುಕಿಗೆ ಒಂದು ಒಪ್ಪಿತ ವ್ಯವಸ್ಥೆಯನ್ನು ನಿರ್ಮಿಸಿಕೊಳ್ಳಬೇಕು. ಆಗ ಮಾತ್ರ ಜನ ಬೀದಿ ಹೋರಾಟ ಬಿಟ್ಟು ತಮ್ಮ ಕಚೇರಿಗಳಿಗೆ ಉದ್ಯೋಗಗಳಿಗೆ ಮನೆಗಳಿಗೆ ಹಿಂತಿರುಗಿ ಕೆಲಸ ಮಾಡಿಕೊಂಡಿರಲು ಸಾಧ್ಯ.

ಹೋರಾಟ ಹಾಗೂ ಕಾನೂನು ವ್ಯವಸ್ಥೆ – ಅಂಬೇಡ್ಕರ್ ನಿಲುವು:

ಅಹಿಂಸಾತ್ಮಕ ಹೋರಾಟದಿಂದ ಬ್ರಿಟಿಷರು ಭಾರತವನ್ನು ಬಿಟ್ಟು ದೇಶ ತನ್ನದೇ ಆದೊಂದು ಸಂವಿಧಾನಾತ್ಮಕ ವ್ಯವಸ್ಥೆ ಹೊಂದಲು ಸಾಧ್ಯವಾಯಿತು. ಸಂವಿಧಾನದ ಆಗಮನ ಹೊರಗಿನ ಹೋರಾಟದ ನಿರ್ಗಮನಕ್ಕೆ ಕಾರಣವಾಗಬೇಕು ಎಂಬುದು ಆಶಯ. ಸಂವಿಧಾನ ರಚನೆಯ ಮುಖ್ಯ ಕಾಯಕ ಮುಗಿದ ಬಳಿಕ ಸಂವಿಧಾನ ರಚನಾ ಸಭೆಯಲ್ಲಿ (1949 ನವಂಬರ್) ಡಾ। ಅಂಬೇಡ್ಕರ್ ಕಾನೂನಿನ ಈ ಆಶಯವನ್ನು ಸ್ಪಷ್ಟಪಡಿಸುತ್ತಾರೆ. ಆ ಭಾಷಣದಲ್ಲಿ ಡಾ। ಅಂಬೇಡ್ಕರ್, ನಾವಿನ್ನು ನಮ್ಮ ಸಾಮಾಜಿಕ ಹಾಗೂ ಆರ್ಥಿಕ ಸಾಧನೆಗಾಗಿ ಸಂವಿಧಾನಾತ್ಮಕ ಮಾರ್ಗವನ್ನು ಅನುಸರಿಸಬೇಕಾಗಿದೆ. ಅದರ ಅರ್ಥ ರಕ್ತ ಕ್ರಾಂತಿಗಳನ್ನು ಮಾತ್ರವಲ್ಲ ಅಸಹಕಾರ ಚಳವಳಿ, ಕರನಿರಾಕರಣೆ, ಸತ್ಯಾಗ್ರಹ ಮೊದಲಾದ ಕ್ರಮಗಳನ್ನೂ ಬಿಡಬೇಕಾಗುತ್ತದೆ ಎಂದು ಹೇಳಿದರು.

ಹೋರಾಟದಿಂದ ಸಂವಿಧಾನಾತ್ಮಕ ಕಾನೂನು ವ್ಯವಸ್ಥೆ ಜಾರಿಯಾಗಿ ನಾವು ಅದನ್ನು ಒಪ್ಪಿಕೊಂಡ ಬಳಿಕ ಜನರು ಅದೇ ಕ್ರಮದಲ್ಲಿ ನಡೆಯಬೇಕು. ಇಲ್ಲವಾದಲ್ಲಿ ಅದು ಅರಾಜಕತೆಗೆ ದಾರಿ ಮಾಡಿ ಮಾಡಿಕೊಡುತ್ತದೆ ಎಂಬ ಕಾನೂನು ತಜ್ಞನ ಅಭಿಪ್ರಾಯ ಅಂಬೇಡ್ಕರ್ ಅವರದಾಗಿತ್ತು. ಸಂವಿಧಾನ ರಚನೆಯನ್ನು ಮಾಡಿ ಮುಗಿಸಿದ ಯಾವುದೇ ಮಹಾನುಭಾವನ ಆಶಯ ಆ ಸಂದರ್ಭದಲ್ಲಿ ಹಾಗಿರುವುದು ಸಹಜವೂ ಆಗಿದೆ. ಅದೇ ಭಾಷಣದಲ್ಲಿ ಡಾ। ಅಂಬೇಡ್ಕರ್ ಜಾನ್ ಸ್ಟುಅರ್ಟ್ ಮಿಲ್ ಅನ್ನು ಉದ್ಧರಿಸಿ ಹೇಳುವಂತೆ ಪ್ರಜಾಪ್ರಭುತ್ವದ ಆರೋಗ್ಯಕ್ಕೆ ಯಾವುದೇ ಮಹಾತ್ಮನ ಪದತಲದಲ್ಲಿ ತಮ್ಮ ಸ್ವಾತಂತ್ರ್ಯವನ್ನು ಇರಿಸಿ ಜನರಿಂದ ರಚಿಸಲ್ಪಟ್ಟ ಸಾಂಸ್ಥಿಕ ವ್ಯವಸ್ಥೆಯನ್ನು ಧಿಕ್ಕರಿಸುವುದು ಸರಿಯಾದ ಮಾರ್ಗವಲ್ಲ.

ಚಳವಳಿಯಿಂದ ಪಡೆದ ಅಧಿಕಾರವನ್ನು ಚಳವಳಿಯಿಂದ ಹೊರಬಂದು ಸಂವಿಧಾನಾತ್ಮಕ ವ್ಯವಸ್ಥೆಯ ಮೂಲಕ ನಡೆಸುವ ಅವಶ್ಯಕತೆ ಆಗ ಇತ್ತು. ಜನರನ್ನು ಕಾನೂನು

ದೃಷ್ಟಿಯಿಂದ ಹೊಸ ವ್ಯವಸ್ಥೆಗೆ ಹೊಂದಿಕೊಳ್ಳುವಂತೆ ಮಾಡುವ ಅಗತ್ಯವೂ ಇತ್ತು. ಆದರೆ 65 ವರುಷಗಳಲ್ಲಿ ಹೊಸದಾಗಿ ಬಂದ ವ್ಯವಸ್ಥೆಯೇ ಜಡ್ಡುಗಟ್ಟಿ ಭ್ರಷ್ಟಾಚಾರ ವಿಚಾರದಲ್ಲಿ ಪರಸ್ಪರ ನಿಯಂತ್ರಣವನ್ನೂ ಆ ಮೂಲಕ ಸಮತೋಲನವನ್ನೂ ಬಿಟ್ಟುಕೊಟ್ಟು ಕಾರ್ಯಾಂಗ, ನ್ಯಾಯಾಂಗ, ಶಾಸಕಾಂಗ ಭ್ರಷ್ಟಗೊಂಡಾಗ ಜನತೆ ಏನು ಮಾಡಬೇಕು?

ಸಂವಿಧಾನದ ಆಶಯದ ಒಳಗೆ ಮಸೂದೆಗಳ ಮೂಲಕ ಕಾನೂನು ಕ್ರಮದಲ್ಲಿ ಭ್ರಷ್ಟಾಚಾರವನ್ನು ನಿಯಂತ್ರಿಸುವುದೇ ಸರಿಯಾದ ಮಾರ್ಗ ಎಂದು ಅಣ್ಣಾ ಹಜಾರೆ ಮತ್ತು ಅವರ ತಂಡ ನಿರ್ಧರಿಸಿತು. ಅವರ ಅಭಿಪ್ರಾಯವೇ ಜನರ ಆಶಯವೂ ಆಗಿ, ಜನ ಸಮುದಾಯ ಹಾಗೂ ಮಾಧ್ಯಮಗಳು ಬೆಂಬಲಿಸಿದವು. ಶಾಸನದ ಮೂಲಕವೇ ಕಾನೂನು ಬದ್ಧವಾಗಿ ಭ್ರಷ್ಟಾಚಾರವನ್ನು ನಿಯಂತ್ರಿಸುವ ಹೋರಾಟ ಇದಾದ್ದರಿಂದ ಅದು ಸಂವಿಧಾನ ವಿರೋಧಿಯಲ್ಲ. ಬದಲಾಗಿ ಪ್ರಜಾಪ್ರಭುತ್ವವನ್ನೂ ಸಂವಿಧಾನವನ್ನೂ ಬಲಪಡಿಸುವ ಕ್ರಮವೇ ಆಗುತ್ತದೆ.

ಭ್ರಷ್ಟಾಚಾರದ ಬಗ್ಗೆ ಹೊಸ ಆವೇಶವೆ?

ಹಾಗಿದ್ದರೆ ಭ್ರಷ್ಟಾಚಾರ ಬಹಳ ಹಿಂದಿನ ಕಾಲದಿಂದಲೂ ಇತ್ತಲ್ಲವೆ? ಇದೀಗ ಯಾಕೆ ಭ್ರಷ್ಟಾಚಾರದ ಬಗ್ಗೆ ಹೊಸ ಆವೇಶ? ಭ್ರಷ್ಟಾಚಾರವೆಂಬುದು ಮೂಲ ಕಾಯಿಲೆಯಲ್ಲ. ಅದು ಅಸಮಾನತೆ ಎಂಬ ಮೂಲ ಕಾಯಿಲೆಯ ಮೇಲ್ಮೈ ಲಕ್ಷಣ ಮಾತ್ರ ಎಂಬುದೊಂದು ಎಡ ಪಂಥದ ತಾತ್ವಿಕ ನಿಲುವು. ಬಹುತೇಕ ಎಡಪಂಥೀಯ ಚಿಂತಕರು ಈ ರೀತಿ ಯೋಚಿಸುತ್ತಾರೆ. (ನೋಡಿ; ಪ್ರಸನ್ನ ಅವರ ಚಿತ್ರಭಾನು ಅಂಕಣ, ವಿಜಯ ಕರ್ನಾಟಕ 4-09-2011) ಕಾನೂನು ಕಣ್ಣಿನಿಂದ ಕಾಣುವುದಾದರೆ, ಸಾರ್ವಜನಿಕವಾಗಿ ಮಾಡಿಕೊಂಡ ಶಾಸನವನ್ನು ವಯ್ಯಕ್ತಿಕ ಲಾಭಕ್ಕಾಗಿ ಮುರಿಯುವುದು ಭ್ರಷ್ಟಾಚಾರ. ಹಾಗೆಯೇ ಭ್ರಷ್ಟಾಚಾರದ ಬಗ್ಗೆ ನೈತಿಕ ನೆಲೆಯ ವ್ಯಾಖ್ಯಾನಗಳೂ ಇವೆ.

ಭಾರತದಲ್ಲಿ ಇಂದು ಬೃಹತ್ತಾದ ನಾನಾ ರೀತಿಯ ಹಣದ ಭ್ರಷ್ಟಾಚಾರ ದೊಡ್ಡ ಪಿಡುಗು. ಅದೇ ರೀತಿ ಎಲ್ಲಾ ಹಂತಗಳಲ್ಲಿ ಸರಕಾರಿ ಅಧಿಕಾರದ ದುರುಪಯೋಗವೂ ಭ್ರಷ್ಟಾಚಾರದ ಇನ್ನೊಂದು ಮೂಲ. ಅದರಲ್ಲಿ ದೊಡ್ಡ ಮೊತ್ತದ ಹಣದ ಭ್ರಷ್ಟಾಚಾರ ಆರ್ಥಿಕ ಉದಾರೀಕರಣಕ್ಕೆ ನೇರವಾಗಿ ತಳಕು ಹಾಕಿದೆ.

ಆರ್ಥಿಕ ಉದಾರೀಕರಣ ಮತ್ತು ಭ್ರಷ್ಟಾಚಾರ:

ಆರ್ಥಿಕ ಉದಾರೀಕರಣ ಹಾಗೂ ಜಾಗತೀಕರಣ ಹೇಗೆ ಭ್ರಷ್ಟಾಚಾರಕ್ಕೆ ಎಡೆ ಮಾಡಿತ್ತು? 1989ರ ಬಳಿಕ ಆರ್ಥಿಕ ಉದಾರೀಕರಣ ನೇರವಾಗಿ ಖಾಸಗಿ ಸಂಪತ್ತಿನ ಬೆಳವಣಿಗೆಗೆ ಹಾಗು ಖಾಸಗೀಕರಣಕ್ಕೆ ಉತ್ತೇಜನ ನೀಡಿತು. 1947ರಿಂದಲೂ ನಾವು ಸಂಪತ್ತನ್ನು ಸಮಾಜದ ಸಮೂಹ ಸೊತ್ತೆಂದು ಬೆಳೆಸುತ್ತಾ ಬಂದವರು. ನಮ್ಮ ಸಂವಿಧಾನದಲ್ಲೂ ನಾವು 'ಸೋಶಲಿಸ್ಟ್' ಪದವನ್ನು ಸೇರಿಸಿಕೊಂಡೆವು. ಬೃಹತ್ ಕೈಗಾರಿಕೆಗಳು, ಗಣಿಗಳು ಸಾರಿಗೆ, ಸಂಪರ್ಕ ಮೊದಲಾದ ಬೃಹತ್ ಲಾಭದಾಯಕ ಉದ್ಯಮಗಳು ಸರ್ಕಾರಿ ಸ್ವಾಮ್ಯಕ್ಕೆ ಒಳಪಟ್ಟು ಸಾರ್ವಜನಿಕವಾಗಿ ಪ್ರಜೆಗಳ ಒಡೆತನಕ್ಕೆ ಸೇರಿದ ಸಂಪತ್ತಾಗಿದ್ದವು. ಹೀಗೆ 1947ರಿಂದ 1989ರ

ವರೆಗೆ ಬೃಹತ್ತಾದ ಸಂಪತ್ತು ಸರಕಾರಿ ಒಡೆತನದ ಮೂಲಕ ಸಮಾಜಕ್ಕೆ ಸೇರಿತ್ತು.

1989ರಲ್ಲಿ ಆರ್ಥಿಕ ಉದಾರೀಕರಣ ಪ್ರಾರಂಭವಾಗಿ ಈ ಬೃಹತ್ ಸಾರ್ವಜನಿಕ ಸ್ವಾಮ್ಯದ ಸೊತ್ತುಗಳು ಖಾಸಗಿ ಒಡೆತನಕ್ಕೆ ಸೇರುವುದು ಸಹಜ ಕ್ರಿಯೆಯಾಯಿತು. ಉದಾರಣೆಗೆ ಗಣಿ ಉದ್ಯಮವನ್ನು ಸುಲಭವಾಗಿ ಖಾಸಗಿಯವರಿಗೆ ಲೈಸನ್ಸ್ ಫೀ ಒಂದರ ಮೂಲಕ ನೀಡಬಹುದು ಎಂಬುದಾಯಿತು. ಹೆಸರಿಗೆ ಮಾತ್ರ ಇರುವ ಲೈಸನ್ಸ್ ಅಥವಾ ಪರವಾನಗಿ ಶುಲ್ಕ ಶೇಕಡಾ ನಾಲ್ಕನ್ನು ಮೀರುತ್ತಿರಲಿಲ್ಲ. ಹೀಗಾಗಿ ಸಮಾಜಕ್ಕೆ ಸೇರಿದ ಗಣಿ ಪ್ರದೇಶ ಸರ್ಕಾರದ ವಶದಿಂದ ಖಾಸಗಿ ಮಾಲೀಕರ ಆಡಳಿತಕ್ಕೆ ಹೋಗುವುದು ಸುಲಭವಾಯಿತು. ಅದೇ ರೀತಿ ಸಾರ್ವಜನಿಕ ಸ್ವಾಮ್ಯದ ಕೈಗಾರಿಕೆಗಳ ಖಾಸಗೀಕರಣ, ಸಾರ್ವಜನಿಕ ಭೂಮಿಯ ಕೈಗಾರೀಕರಣ, ನಡೆಯುವುದು ಸುಲಭವಾಯಿತು. ಸಾರ್ವಜನಿಕ ಸ್ವಾಮ್ಯದಲ್ಲಿದ್ದ ಸಂಪರ್ಕ ವ್ಯವಸ್ಥೆಯನ್ನು ನಡೆಸುವ ಪರವಾನಗಿಯೂ ಖಾಸಗಿಯವರ ಪಾಲಿಗೆ ಸುಲಭವಾಗಿ ಹೋಯಿತು. ಟು–ಜಿ (2G) ಅಥವಾ ಸೆಕೆಂಡ್ ಜನರೇಶನ್ ಮೊಬೈಲ್ ಪರವಾನಗಿಯ 1.72 ಲಕ್ಷ ಕೋಟಿ ರೂಪಾಯಿಗಳ ಭ್ರಷ್ಟಾಚಾರದ ಆರೋಪವೂ ಹೀಗೆ ಖಾಸಗಿ ಪರವಾನಗಿ ನೀಡುವುದಕ್ಕೆ ಸಂಬಂಧಿಸಿದ್ದು.

ಸಮೂಹ ಸಂಪತ್ತು ಖಾಸಗಿಗೆ:

1947 ರಿಂದ 1989ರ ವರೆಗೆ ಸಾರ್ವಜನಿಕ ಸ್ವಾಮ್ಯಕ್ಕೆ ಸೇರಿ ಬೃಹತ್ತಾಗಿ ಬೆಳೆದ ಸಮಾಜದ ಸಮೂಹ ಸಂಪತ್ತನ್ನು ಖಾಸಗಿಯವರ ವಶಕ್ಕೆ ನೀಡಲು ಯಾವುದೇ ಕಾನೂನಿನ ಅವಶ್ಯಕತೆ ಉಂಟಾಗಲಿಲ್ಲ. ಕಾರ್ಯಾಂಗದ ಬಜೆಟ್ ಅನುಮೋದನೆ ಮೂಲಕವೇ ಅದೆಲ್ಲಾ ನಡೆಯಬಹುದಾಯಿತು. ಸಾರ್ವಜನಿಕ ಸೊತ್ತು ಖಾಸಗಿಯವರ ಪಾಲಾಗುವುದಕ್ಕೆ ಕಾರ್ಯಾಂಗದ ಅಂದರೆ ಸರ್ಕಾರದ ಆದೇಶ ಸಾಕಾಗುವಂತಾಯಿತು. ಪೆಟ್ರೋಲಿಯಂ ಉತ್ಪನ್ನ, ಸಂಪರ್ಕವ್ಯವಸ್ಥೆ (ಮೊಬೈಲ್ ಇತ್ಯಾದಿ ಫೋನುಗಳ ಸರ್ವಿಸ್) ಯಾವುದನ್ನು ಬೇಕಾದರೂ ಕಾನೂನು ಮಾಡದೆ ಸರ್ಕಾರಿ ಆದೇಶಗಳ ಮೂಲಕ ಖಾಸಗಿಯವರಿಗೆ ಹಸ್ತಾಂತರಿಸುವುದು ಸಾಧ್ಯವಾಯಿತು. ಅಂದರೆ ಭೂಮಿಯ ಮಿತಿಗೆ ಭೂ ಸುಧಾರಣೆ ಕಾನೂನು ಬಂದಂತೆ, ಸರ್ಕಾರಿ ಭೂಮಿಯನ್ನು ಖಾಸಗಿಯವರಿಗೆ ನೀಡಲು ಪ್ರತ್ಯೇಕ ಮಸೂದೆಯ ಅಗತ್ಯ ಬರಲಿಲ್ಲ. ಬದಲಾಗಿ ಸರ್ಕಾರಿ ಆದೇಶವೊಂದು ಸರ್ಕಾರಿ ಭೂಮಿಯ ಖಾಸಗೀಕರಣಕ್ಕೆ ಸಾಕಾಯಿತು.

ಇದನ್ನೊಂದು ಉದಾಹರಣೆಯಿಂದ ನೋಡಬಹುದು. ಬೆಂಗಳೂರಿನ ಮಲ್ಲೇಶ್ವರಂನ ಮಂತ್ರಿ ಮಾಲ್ ಬಳಿ ಮಂತ್ರಿಮೆಟ್ರೋ ಸ್ಟೇಷನ್ ಒಂದು ಖಾಸಗಿ ಸಹಭಾಗಿತ್ವದಲ್ಲಿ ನಿರ್ಮಾಣವಾಗುತ್ತಿದೆ. ನಿರ್ಮಾಣವಾಗುವ ಜಾಗ ಸರ್ಕಾರಕ್ಕೆ ಅಂದರೆ ಸಮೂಹ ಸಮಾಜಕ್ಕೆ ಸೇರಿದ್ದು. ಅದನ್ನು ಖಾಸಗಿಯವರಿಗೆ ವಹಿಸಲು ಸರ್ಕಾರಿ ಆದೇಶ ಒಪ್ಪಂದ ಸಾಕು. ಪತ್ಯೇಕ ಕಾನೂನಿನ ಅಗತ್ಯವಿಲ್ಲ. ಸರ್ಕಾರದ ಒಡೆತನದಲ್ಲಿರುವ ಎಲ್ಲರಿಗೂ ಸೇರಿದ ಸಮಾಜದ ಸಮೂಹ ಸಂಪತ್ತು ಸರಳ ಸರ್ಕಾರಿ ಆದೇಶದ ಮೂಲಕ ಖಾಸಗೀಕರಣಕ್ಕೆ ಒಳಗಾಗಬಲ್ಲ ಆರ್ಥಿಕ ಉದಾರೀಕರಣದ ಸರಳ ಪ್ರಕ್ರಿಯೆ ನಮ್ಮ ಬೃಹತ್ ಭ್ರಷ್ಟಾಚಾರದ ಮೂಲ. ದೊಡ್ಡದಾದ ಗಣಿ ಮೊದಲಾದ ವ್ಯವಹಾರಗಳಲ್ಲಿ ಪರವಾನಗಿ ಶುಲ್ಕ 4% ಯಾವುದೇ ರೀತಿಯ ಖರ್ಚು ವೆಚ್ಚವಾದರೂ ಉತ್ಪಾದನಾ ವೆಚ್ಚ 36%. ಉಳಿದ 60% ಕನಿಷ್ಟ ಲಾಭ.

ಇಷ್ಟು ದೊಡ್ಡ ಮೊತ್ತದ ಲಾಭದಲ್ಲಿ ಸರ್ಕಾರವನ್ನು ನಡೆಸುವ ರಾಜಕೀಯ ನಾಯಕರು ಹಾಗೂ ಅಧಿಕಾರ ಶಾಹಿಯ ಆಯ್ದ ಜನಗಳು ಬೃಹತ್ ಪಾಲು ಪಡೆದು ಖಾಸಗೀಕರಣಕ್ಕೆ ನೆರವಾಗುವುದರಲ್ಲಿ ನಮ್ಮ ಹೆಚ್ಚಿನ ಬೃಹತ್ ಭ್ರಷ್ಟಾಚಾರದ ಮೂಲವಿದೆ.

ಸರ್ಕಾರಿ ಕೆಲಸಕ್ಕೆ ಸೇರಲು ಹಣ:

ಸರ್ಕಾರದ ಕೆಳಹಂತಗಳಲ್ಲಿ ಸರ್ಕಾರಿ ಅಧಿಕಾರವನ್ನು ಬಳಸಿ ಜನರಿಂದ ಹಣ ವಸೂಲಿ ಮಾಡುವ ಮೂಲಕ ಭ್ರಷ್ಟಾಚಾರ ಬೆಳೆಯುತ್ತದೆ. ಉದಾಹರಣೆಗೆ ಜನನ ಪ್ರಮಾಣ ಪತ್ರ ಅಥವಾ ರೇಶನ್ ಕಾರ್ಡು ನೀಡಲು ಹಣ ವಸೂಲಿ ಭ್ರಷ್ಟಾಚಾರದ ಒಂದು ರೂಪ. ಸರ್ಕಾರಿ ನೌಕರರನ್ನು ನೇಮಿಸಿಕೊಳ್ಳಲು ಹಣ ವಸೂಲಿ ಮಾಡುವ ಭ್ರಷ್ಟಾಚಾರ ಪ್ರಾರಂಭವಾದರೆ, ಸರ್ಕಾರಿ ಕೆಲಸಕ್ಕೆ ಸೇರಿದವರು ಆ ಹಣವನ್ನು ಪುನಃ ಸಂಪಾದಿಸಲು ಸಾರ್ವಜನಿಕರಿಂದ ಹಣ ವಸೂಲಿಗೆ ಇಳಿಯುತ್ತಾರೆ. ಅದಕ್ಕಾಗಿ ಅಧಿಕಾರದ ದುರುಪಯೋಗ ಒಮ್ಮೆ ಅಭ್ಯಾಸವಾದರೆ ಅದೇ ರೋಗ ಮುಂದೆ ಬೆಳೆಯುತ್ತದೆ.

ತಬರನ ಕಥೆಯ ಅನುಭವ:

ಅಣ್ಣಾ ಹಜಾರೆಯವರ ಚಳವಳಿ ಜನಲೋಕಪಾಲ ಕಾಯಿದೆ ಮೂಲಕ ಈ ಎರಡೂ ಹಂತದ ಭ್ರಷ್ಟಾಚಾರಗಳಿಗೆ ಕಡಿವಾಣ ಹಾಕಲು ಹೊರಟಿತು. ಕೆಳಹಂತದ ಭ್ರಷ್ಟಾಚಾರ ಎಲ್ಲಾ ವರ್ಗದ ಜನರ ನಿತ್ಯ ನರಕವಾದ್ದರಿಂದ ಪ್ರತಿಯೊಬ್ಬರೂ, ಒಂದಲ್ಲ ಒಂದು ರೀತಿಯಲ್ಲಿ ಪೂರ್ಣಚಂದ್ರ ತೇಜಸ್ವಿಯ 'ತಬರನ ಕಥೆ'ಯ ರೀತಿಯಲ್ಲಿ ವ್ಯವಸ್ಥೆಯ ಬಲಿಪಶುಗಳು. ವ್ಯವಸ್ಥೆಯಲ್ಲಿ ಭ್ರಷ್ಟಾಚಾರ ಬಲಿತಾಗ ಬಲಿಯಾಗುವವರ ನೋವು, ಸಂಕಟಗಳು ಹೆಚ್ಚಾಗುತ್ತವೆ. ಸರ್ಕಾರದ ವ್ಯವಸ್ಥೆಯಿಂದ ಹೀಗೆ ಹಿಂಸೆಗೆ ಒಳಗಾದ ಪ್ರತಿಯೊಬ್ಬರೂ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಅಣ್ಣಾ ಹಜಾರೆಯವರ ಚಳವಳಿಯ ಬೆಂಬಲಿಗರೇ ಆದರು.

ಒಂದೇ ಕಲ್ಲಿಗೆ ಮೂರು ಹಣ್ಣು:

ಗಾಂಧೀಜಿ ಕರ ನಿರಾಕರಣೆಗೆ ಉಪ್ಪನ್ನು ಆರಿಸಿಕೊಂಡರು. ಅದಕ್ಕೆ ಕಾರಣ ಉಪ್ಪು ಪ್ರತಿಯೊಬ್ಬನಿಗೂ ಬೇಕು. ಹಾಗಾಗಿ ಪ್ರತಿ ಪ್ರಜೆಯನ್ನೂ ತಲುಪುವುದು ಉಪ್ಪಿನ ಮೂಲಕ ಸುಲಭ. ಕೆಳಹಂತದ ಸರ್ಕಾರಿ ಭ್ರಷ್ಟಾಚಾರ, ಹೇಳಿದ ದಿನ ಕೆಲಸ ಮಾಡದೆ ಹತ್ತು ಸಲ ಓಡಾಡಿಸಿ ಕೆಲಸ ಮಾಡಲು ದುಡ್ಡು ಕೇಳುವುದು ಇತ್ಯಾದಿಗಳು ಬಹು ಸಂಖ್ಯಾತರ ಅನುಭವ. ಕೆಲವೊಮ್ಮೆ ಅಧಿಕಾರಿಗಳ ಬಗ್ಗೆ ಕೇವಲ ದೂರು ಅಥವಾ ಗ್ರೀವೆನ್ಸ್ (grievance) ಆಗಬಲ್ಲ ಅಂಶವನ್ನು ಅಣ್ಣಾ ಹಜಾರೆ ಭ್ರಷ್ಟಾಚಾರದ ವ್ಯಾಖ್ಯಾನದ ಒಳಗೆ ತಂದರು. ಆದರಿಂದಾಗಿ ಗಾಂಧೀಜಿ ಉಪ್ಪಿನ ಮೂಲಕ ಮನೆ ಮನೆ ತಲುಪಿದಂತೆ, ಅಣ್ಣಾ ಹಜಾರೆ ಬಹು ಸಂಖ್ಯಾತ ಪ್ರಜೆಗಳ ಸಂಕಟಕ್ಕೆ ದನಿಯಾದರು. ಇದರಿಂದಾಗಿ ಅಣ್ಣಾ ಹಜಾರೆ ಒಂದೇ ಕಲ್ಲಿಗೆ ಮೂರು ಹಣ್ಣುಗಳನ್ನು ಉದುರಿಸಿದರು.

ಅದೆಂದರೆ, ಭ್ರಷ್ಟಾಚಾರದ ನಿಯಂತ್ರಣದ ಮೂಲಕ ಸರ್ಕಾರದ ಕೆಳ ಹಂತಗಳಲ್ಲಿ ಉತ್ತರದಾಯಿತ್ವ (Accountability) ಹಾಗು ಪಾರದರ್ಶಕತೆ (Transparency) ಮತ್ತು ದಕ್ಷತೆ (Effieiency). ಮೂರನ್ನೂ ಪರೋಕ್ಷವಾಗಿ ಒತ್ತಾಯಿಸುವುದರಲ್ಲೂ ಯಶಸ್ವಿಯಾದರು

ಆ ಮೂಲಕ ರಾಜ್ಯ ಪ್ರಭುತ್ವದಲ್ಲಿ ಜನರ ಮಾತಿಗೂ ಬೆಲೆ ಇದೆ ಎಂಬುದನ್ನು ಪುನಃ ನೆನಪಿಸಿಕೊಟ್ಟರು.

ರಾಷ್ಟ್ರ ಪ್ರಭುತ್ವ ಮತ್ತು ಬಹು ರಾಷ್ಟ್ರೀಯತೆ:

ಪ್ರಭುತ್ವದ ಪ್ರತಿಪಾದಕರೆ? ಮೊದಲಿಗೆ ಅವರ ಚಳವಳಿಗೆ ಬೆಂಬಲವಾಗಿ ಮಾತನಾಡಿದ್ದು ಅಮೆರಿಕಾ ಸಂಯುಕ್ತ ಸಂಸ್ಥಾನ. ಅವರು ಬಹುರಾಷ್ಟ್ರೀಯ ಕಂಪೆನಿಗಳ ಹಿತಾಸಕ್ತಿಯನ್ನು ಕಾಪಾಡುವವರಲ್ಲವೆ? ಇದು ಬಹಳ ಸಂಕೀರ್ಣ ವಿಚಾರ. ಕಳೆದ ಎರಡು ಶತಮಾನಗಳಿಂದ ರಾಷ್ಟ್ರ ಪ್ರಭುತ್ವ (Nation State) ಬೆಳೆಯುತ್ತಾ ಬಂದು ತನ್ನ ಅಧಿಕಾರ ಹಾಗೂ ವ್ಯವಸ್ಥೆಯನ್ನು ಸ್ಥಾಪಿಸಿಕೊಂಡಿತು. ಆ ಮೊದಲು ನಾಗರೀಕತೆ (civilization) ಎಂಬ ಕಲ್ಪನೆ ದೊಡ್ಡದಾಗಿತ್ತು. ಭಾರತದಾದ್ಯಂತ ಭಾರತೀಯ ನಾಗರಿಕತೆ ಹಾಗೂ ಸಂಸ್ಕೃತಿಗಳು ಸಮಾನ ಅಂಶವಾಗಿ ಒಟ್ಟು ಸೇರಿಸುತ್ತಿತ್ತು. ಭಾರತ ಒಂದು ರಾಷ್ಟ್ರ ಪ್ರಭುತ್ವವಾಗಿ ಅಧಿಕಾರ ಪಡೆದದ್ದು 1947ರಲ್ಲಿ. ಆ ಮೊದಲ ಅದು ಅನೇಕ ಸಣ್ಣ ಪುಟ್ಟ ರಾಜ್ಯಗಳಲ್ಲಿಯೂ ಪ್ರಾಂತಗಳಲ್ಲಿಯೂ ಹಂಚಿಕೊಂಡಿತ್ತು. ಜಗತ್ತಿನಾದ್ಯಂತ 1900ನೇ ಇಸವಿ ಮೊದಲು ಪಾಸ್‌ಪೋರ್ಟ್ ಎಂಬ ಈಗಿನ ದಾಖಲೆ ಪತ್ರದ ವ್ಯವಸ್ಥೆಯೇ ಇರಲಿಲ್ಲ. ಎಂಬುದು ರಾಷ್ಟ್ರ ಪ್ರಭುತ್ವದ ಕಲ್ಪನೆ ಆಗ ಹೇಗಿದ್ದಿರಬಹುದು ಎಂಬುದನ್ನು ಊಹಿಸಲು ಸಹಾಯ ಮಾಡುತ್ತದೆ.

ಕಳೆದ ಶತಮಾನದ ಉತ್ತರಾರ್ಧದಲ್ಲಿ ಬೆಳೆಯುತ್ತಾ ಬಂದ ತಂತ್ರಜ್ಞಾನ ಇಂಟರ್‌ನೆಟ್ ಹಾಗೂ ಕಂಪ್ಯೂಟರ್‌ಗಳ ವಿಸ್ತರಣೆಯಲ್ಲಿ ರಾಷ್ಟ್ರದ ಭೌಗೋಳಿಕ ಗಡಿಗಳನ್ನು ಸುಲಭವಾಗಿ ಮೀರಿಬಿಡುತ್ತದೆ. ನೆಟ್‌ವರ್ಕ್ ಟೆಕ್ನಾಲಜಿಯ ಮುಖ್ಯ ಪಠ್ಯ ಪುಸ್ತಕವೊಂದು ಸಂಪರ್ಕ ಜಾಲ (Net work) ಎಂಬುದು ಭೌಗೋಳಿಕ ಪೀಡಕ ಪ್ರವೃತ್ತಿಗೆ ಒಂದು ಉತ್ತರ ಎಂದು ಸಾರುತ್ತದೆ. (Net work is an answer to the tyranny of Geography). ಯಾವುದು ರಾಷ್ಟ್ರಗಳಿಗೆ ಸಹಜವಾದ ಭೌಗೋಳಿಕ ಗಡಿಗಳೋ, ಅಂತಹವು ತಂತ್ರಜ್ಞಾನ ಒದಗಿಸುವ ಸ್ವಾತಂತ್ರ್ಯದಲ್ಲಿ ಪೀಡಕ ಪ್ರವೃತ್ತಿಯಾಗಿ ಗೋಚರಿಸುತ್ತವೆ.

ತಂತ್ರಜ್ಞಾನ ಮತ್ತು ಭೌಗೋಳಿಕತೆ:

ಆದರೆ ರಾಷ್ಟ್ರ ಪ್ರಭುತ್ವದ ಸಾರ್ವಭೌಮತೆ ಇರುವುದು ಭೌಗೋಳಿಕ ಗಡಿಗಳ ಒಳಗಿನ ಅದರ ಸಂಪೂರ್ಣ ಅಧಿಕಾರದಲ್ಲಿ ನ್ಯಾಯದಾನ, ಹಣಕಾಸು ವ್ಯವಹಾರ, ನೆಲ, ಜಲ ವಾಯು ಮಂಡಲದ (ಆಕಾಶದ)ಸ್ವಾಯತ್ತತೆ, ತಮಗೆ ಬೇಕಾದ ಕಾನೂನು ಮಾಡುವ ಸ್ವಾತಂತ್ರ್ಯ ಮೊದಲಾದವುಗಳಲ್ಲಿ ಈ ಸಾರ್ವಭೌಮತೆ ಪ್ರತಿಪಾದನೆಯಾಗುತ್ತದೆ.

ಆದರೆ ಇಂದಿನ ಇಂಟರ್‌ನೆಟ್ ತಂತ್ರಜ್ಞಾನ ಮಾಹಿತಿ ರಂಗದಲ್ಲಿ ಅಂತಹ ನಿಯಂತ್ರಣ ಸಾಧ್ಯವಿಲ್ಲವೆಂದು ಸಾಬೀತು ಪಡಿಸಿದೆ. ಹಾಗೆಯೇ ಹಣಕಾಸು ವ್ಯವಹಾರದ ಸಂಪೂರ್ಣ ನಿಯಂತ್ರಣ ಸಾಧ್ಯವಿಲ್ಲದಾಗಿದೆ. ಕ್ರೆಡಿಟ್ ಕಾರ್ಡುಗಳ ಮೂಲಕ ವಿದೇಶದಲ್ಲಿ ವ್ಯಾಪಾರ ಮಾಡಿ ಸ್ವದೇಶದಲ್ಲಿ ಹಣ ಸಂದಾಯ ಮಾಡಬಹುದು. ಹಾಗೆಯೇ ವೆಬ್(web)ನ ಟೂಲ್‌ಗಳ ಉಪಯೋಗದಿಂದ ಅಥವಾ ಟೆಲಿಫೋನ್ ಮೂಲಕ ನಮ್ಮ ನೆಲದಲ್ಲೇ ಇದ್ದು ಇನ್ನೊಂದು ದೇಶದಲ್ಲಿ ಕೆಲಸ ಮಾಡಬಹುದು. ನಮ್ಮ ಬಹುತೇಕ ಬಿ.ಪಿ.ಒ. (Business Proecss outsourcing) ಕಂಪನಿಗಳ ಕೆಲಸ ಅದೇ ತರದ್ದು.

ದ್ವಿ ಪೌರತ್ವ: ಇದಕ್ಕೆ ಪೂರಕವಾಗಿ ಬಹುರಾಷ್ಟ್ರೀಯ ಕಂಪೆನಿಗಳ ವ್ಯಾಪಾರ ವ್ಯವಹಾರಗಳು ಜಾಗತೀಕರಣದ ಅರ್ಥವ್ಯವಸ್ಥೆಯಲ್ಲಿ ಬೆಳೆಯುತ್ತಿವೆ. ಅಂತಹ ಜಾಗತೀಕರಣದ ವಿಸ್ತರಣೆ ಒಂದು ಅರ್ಥದಲ್ಲಿ ರಾಷ್ಟ್ರೀಯತೆಗೂ, ರಾಷ್ಟ್ರ ಪ್ರಭುತ್ವಕ್ಕೂ ಅದರ ಮಿತಿಗಳನ್ನು ತೋರಿಸಿಕೊಡ ತೊಡಗಿವೆ. ದ್ವಿ–ಪೌರತ್ವ (Dual citizenship) ಮೊದಲಾದ ತಾತ್ವಿಕತೆಗಳನ್ನು ಹಾಗೂ ಎನ್ ಆರ್ ಐ (Non Residential Indian) ಮಹತ್ವವನ್ನು ಒಪ್ಪಿಕೊಳ್ಳುವ ಮೂಲಕ ರಾಷ್ಟ್ರ ಪ್ರಭುತ್ವಗಳೂ ಇಂತಹ ಬದಲಾವಣೆಗಳನ್ನು ಸ್ವೀಕರಿಸತೊಡಗಿವೆ.

ರಾಷ್ಟ್ರೀಯತೆಯ ಪುನರ್ ವ್ಯಾಖ್ಯಾನ:

ಇಂತಹ ಒಂದು ಸಂಕ್ರಮಣ ಹಂತದಲ್ಲಿ 'ಭಾರತ ಮಾತಾಕೀ ಜೈ' 'ವಂದೆ ಮಾತರಂ' 'ಇಂಕ್ವಿಲಾಬ್ ಜಿಂದಾಬಾದ್' ಘೋಷಣೆಗಳು ಹಾಗೂ ರಾಷ್ಟ್ರ ಧ್ವಜದ ಪ್ರದರ್ಶನ ಹಾರಾಟಗಳಲ್ಲಿ ಅಣ್ಣಾ ಹಜಾರೆ ಎರಡನೇ ಸ್ವಾತಂತ್ರ್ಯ ಸಂಗ್ರಾಮ ಎಂದು ಕರೆದ ಹೋರಾಟದ ಮೊದಲ ಹಂತ ನಡೆದಿದೆ. ಆದುದರಿಂದ ಮೂಲದಲ್ಲಿ ಇದು ರಾಷ್ಟ್ರೀಯತೆಯನ್ನು ಛಪ್ರಗೊಳಿಸುವ ಉದ್ದೇಶ ಹೊಂದಿದೆ. ತಮ್ಮ ಘೋಷಣೆಗಳ ಮೂಲಕ ರಾಷ್ಟ್ರೀಯತೆಯ ಪುನರ್ ವ್ಯಾಖ್ಯಾನಕ್ಕೆ ತೊಡಗಿದೆ. ಮತ್ತು ಸಮಾಜಕ್ಕೆ ಒಂದು ನೈತಿಕ ನೆಲೆಗಟ್ಟು ಕೂಡಾ ಇರಬೇಕೆಂದು ಪ್ರತಿಪಾದಿಸಿದೆ.

ಸಂಪತ್ತು ಮತ್ತು ನೈತಿಕತೆ:

ಜಾಗತೀಕರಣ ಸಂಪತ್ತಿನ ಉತ್ಪಾದನೆಗೆ ಮಹತ್ವ ನೀಡಿತು. ಅಂತಹ ಸಂಪತ್ತಿನ ಉತ್ಪಾದನೆ (generation of wealth) ಯಾವ ನೈತಿಕ ಮೌಲ್ಯಗಳ ಆಧಾರದಲ್ಲಿ ಆಗಬೇಕು ಎಂಬುದರ ಬಗ್ಗೆ ವಿಶೇಷ ಒತ್ತು ನೀಡಲಿಲ್ಲ. ಅಂತಹ ಸಂಪತ್ತಿನ ಉತ್ಪಾದನೆಯ ಪರಿಣಾಮಗಳ ಬಗ್ಗೆ ಯೋಚಿಸಲಿಲ್ಲ. ಆದ್ದರಿಂದ ವೇಗವಾದ ಸಂಪತ್ತಿನ ಉತ್ಪಾದನೆ ಪರಿಣಾಮದಲ್ಲಿ ಶ್ರೀಮಂತರು ಹಾಗೂ ಬಡವರ ನಡುವಿನ ಕಂದರವನ್ನು ಅತಿ ವೇಗವಾಗಿ ಹೆಚ್ಚು ಮಾಡಿತು.

ಜಾಗತೀಕರಣದ ಉತ್ಪಾದನಾ ವ್ಯವಸ್ಥೆ ನೈತಿಕತೆಯನ್ನು ಕೇವಲ ಕಾನೂನಿನ ಪಾಲನೆಯಾಗಿ ಮಾತ್ರ ಕಾಣುತ್ತದೆ. ನೈತಿಕತೆ ಸಂಸ್ಕೃತಿ. ಸಮಾಜ. ನಾಗರೀಕತೆ ಹಾಗೂ ವ್ಯಕ್ತಿಗಳಿಗೆ ಅನುಗುಣವಾಗಿ ಬದಲಾಗಬಲ್ಲ ಸ್ವಭಾವ ಹೊಂದಿದೆ. ಅನೇಕ ದೇಶಗಳಲ್ಲಿ ಕೆಲಸ ಮಾಡುವ ಬಹುರಾಷ್ಟ್ರೀಯ ಕಂಪೆನಿಗಳಿಗೆ ಆಯಾ ದೇಶಗಳ ನೈತಿಕ ಸೂಕ್ಷ್ಮಗಳಿಗೆ ಇಳಿಯುವ ಬದಲು ರಾಷ್ಟ್ರದ ಕಾನೂನುಗಳನ್ನು ಪಾಲಿಸುವುದೇ ನೈತಿಕತೆ ಎಂಬ ವ್ಯಾಖ್ಯಾನಕ್ಕೆ ಹೊಂದಿಕೊಳ್ಳುವುದು ಸುಲಭ.

ಕಾನೂನು ಮತ್ತು ನೈತಿಕತೆ:

ಆದರೆ ಭಾರತದಂತಹ ದೇಶವಲ್ಲಿ ಎರಡು ಸಾವಿರ ವರುಷಗಳಿಗೂ ಅಧಿಕವಾದ ಜನ ಜೀವನ ಹಾಗೂ ಸಾಮಾಜಿಕ ಹಾಗೂ ರಾಜ್ಯಾಡಳಿತ ವ್ಯವಸ್ಥೆಯ ಚರಿತ್ರೆ ಇದೆ. ಅದರ ಜೊತೆ ಅದಕ್ಕಿಂತಲೂ ಪುರಾತನವಾದ ಧಾರ್ಮಿಕ ತಾತ್ವಿಕತೆಯ ಚರಿತ್ರೆ ಇದೆ. ಇಂತಹ ಕಡೆ ಕೆಲವಾರು ವರುಷಗಳ ಹಿಂದೆ ಬಂದ ಕಾನೂನು ಒಂದೇ ನೈತಿಕ ನೆಲೆ ಆಗುವುದಿಲ್ಲ. ಉದಾಹರಣೆಗೆ. ಅಶಕ್ತರಾದ ತಂದೆ ತಾಯಿಗಳನ್ನು ಮಕ್ಕಳು ನೋಡಿಕೊಳ್ಳಬೇಕೆಂದು ಯಾವ ಕಾನೂನು ಹೇಳುವುದಿಲ್ಲ. ವಯಸ್ಕರಾದ ಬಳಿಕ ಮಕ್ಕಳ ಜವಾಬ್ದಾರಿ ಹೊರಬೇಕು. ಅದರ

ವಿದ್ಯಾಭ್ಯಾಸಕ್ಕೆ ಖರ್ಚು ಮಾಡಬೇಕು ಎಂದು ಯಾವುದೇ ಕಾನೂನು ವಿಧಿಸುವುದಿಲ್ಲ. ಆದರೆ ನಮ್ಮ ನೈತಿಕ ಚಿಂತನೆ ಕಾನೂನಿನ ವಿಧಿಗಳಿಗೆ ಬದ್ಧವಾಗಿದೆಯೆ?

ದಿನೇಶ ಅಮೀನಮಟ್ಟು (ಪ್ರಜಾವಾಣಿ 5–09–2011) ತಮ್ಮ ಅಂಕಣದಲ್ಲಿ ಅಣ್ಣಾ ಹಜಾರೆ ಚಳವಳಿ ಬಗ್ಗೆ ಬರೆಯುತ್ತಾ ವಯಸ್ಕರಾದ ತಂದೆ ತಾಯಿಯರನ್ನು (ರಾಂಪಣ್ಣನವರನ್ನು) ನೋಡಲು ಮಂಗಳೂರಿಗೆ ಬಾರದೆ ಐಟಿ ಉದ್ಯೋಗದಲ್ಲಿರುವ ಅವರ ಮಕ್ಕಳು ಅಣ್ಣಾ ಹಜಾರೆಯ ಪ್ರತಿಭಟನೆಗೆ ಹೋಗುವ ಬಗ್ಗೆ ನೈತಿಕ ಪ್ರಶ್ನೆ ಎತ್ತುತ್ತಾರೆ.

ದಿನೇಶ ಅಮೀನಮಟ್ಟು ಅವರ ಚರ್ಚೆಗೆ ಉತ್ತರ ನೀಡುವುದು ನನ್ನ ಉದ್ದೇಶವಲ್ಲ. ಸಂಪತ್ತಿನ ಸೃಷ್ಟಿ, ಪ್ರತಿಭಟನೆ, ಸಾರ್ವಜನಿಕ ನಿಲುವು ಮೊದಲಾದ ಅನೇಕ ಹಂತಗಳಲ್ಲಿ ನೈತಿಕ ಪ್ರಶ್ನೆ ಯಾವ ಎಲ್ಲಾ ರೀತಿಯಲ್ಲಿ ತಲೆ ಎತ್ತಬಹುದು ಎಂಬುದನ್ನು ಸೂಚಿಸುವುದಕ್ಕಾಗಿ ಮಾತ್ರ ಈ ಉದಾಹರಣೆ ನೀಡಿದೆ.

ಅಣ್ಣಾ ಹಜಾರೆ ಜನಲೋಕಪಾಲ ಮಸೂದೆ ಮೂಲಕ ಭ್ರಷ್ಟಾಚಾರ ನಿಯಂತ್ರಣಕ್ಕೆ ಕಾನೂನು ರಚಿಸಲು ಹೊರಟು ಅವರು ಕೂಡಾ ನೈತಿಕ ನೆಲೆಗಳನ್ನು ಕೇವಲ ಕಾನೂನಿನ ಮೂಲಕವೇ ಕಾಣುತ್ತಾರೇನೋ ಎಂಬ ತಪ್ಪು ಕಲ್ಪನೆ ಬರಲು ಕಾರಣವಾಗಲೂ ಬಹುದು. ಆದರೆ ಅವರ ವ್ಯಕ್ತಿತ್ವ ಹಾಗೂ ಚಳವಳಿಯ ರೂಪುರೇಷೆ ಮೇಲ್ ನೋಟಕ್ಕೆ ಕಾಣಿಸುವುದಕ್ಕಿಂತ ಹೆಚ್ಚು ಸಂಕೀರ್ಣವಾಗಿದೆ. ಭ್ರಷ್ಟಾಚಾರದ ನಿಯಂತ್ರಣಕ್ಕೆ ರಾಷ್ಟ್ರ ಪ್ರಭುತ್ವದ ಆಯುಧವಾಗಿ ಅವರು ಮಸೂದೆಯನ್ನು ಸೂಚಿಸುತ್ತಾರೆ. ಆದರೆ ಅದು ಹೊರಗಿನ ನಿಯಂತ್ರಣ ಮಾತ್ರ.

ಭ್ರಷ್ಟಾಚಾರ ನಮ್ಮ ಒಳಗಿನಿಂದಲೂ ನಾವು ಮಾಡುವ ಎಲ್ಲಾ ರೀತಿಯ ಕೆಲಸಗಳಿಂದಲೂ ದೂರವಾಗಬೇಕು ಎಂಬುದೂ ಅವರ ಚಳವಳಿಯ ಆಶಯವೇ ಆಗಿದೆ. ಆಧುನಿಕ ಯುಗ ಆಸೆಯನ್ನು ಹೆಚ್ಚಿಸುತ್ತದೆ. ಬಯಕೆಯನ್ನು ಕೆರಳಿಸುತ್ತದೆ. ಹೆಚ್ಚು ಉತ್ಪಾದನೆ ಮತ್ತಷ್ಟು ಹೆಚ್ಚಿನ ಮಾರಾಟವೇ ಸಂಪತ್ತಿನ ಉತ್ಪಾದನೆಯ ಮೂಲಮಂತ್ರ. ಅದನ್ನು ಎದುರಿಸಲು ಕೇವಲ ಹೊರಗಿನ ಕಾನೂನು ಸಾಕಾಗುವುದಿಲ್ಲ. ಅದಕ್ಕಾಗಿ "ಮಾತು ಮತ್ತು ಕೃತಿಗಳ ನಡುವೆ ಅಂತರ ಕಡಿಮೆಯಾಗಬೇಕು" ಎಂದು ನುಡಿದಂತೆ ನಡೆವ ಚಾರಿತ್ರ್ಯವೇ ಭ್ರಷ್ಟಾಚಾರವನ್ನುಎದುರಿಸುವ ಮುಖ್ಯ ನೆಲೆ ಎಂಬುದನ್ನವರು ಸೂಚಿಸುತ್ತಾರೆ.

ಹೀಗೆ ವೈಯುಕ್ತಿಕ ನೆಲೆಯಲ್ಲಿ ಚಾರಿತ್ರ್ಯದ ಅಂಶಕ್ಕೆ ಮತ್ತು ನಿಯಂತ್ರಣ ಶಕ್ತಿಗೆ ಅವರು ಮಹತ್ವ ನೀಡುತ್ತಾರೆ. ಆ ಮೂಲಕ ಕಾನೂನಿನ ಶಕ್ತಿಗಿಂತಲೂ ಅಧಿಕವಾದ ಸಮುದಾಯದ ನಂಬುಗೆ ಶಕ್ತಿಗಳಿಂದ ಹುಟ್ಟುವ ಪಂಚ ಸೂತ್ರಗಳು ಅವರ ಮೂಲ ಮಂತ್ರಗಳಾಗಿವೆ. ಅವರ ಪಂಚ ಸೂತ್ರಗಳೆಂದರೆ:

* ಶುದ್ಧ ಆಹಾರ ಸೇವನೆ
* ಪರಿಶುದ್ಧ ವಿಚಾರ ಚಿಂತನೆ
* ತ್ಯಾಗ ಗುಣ
* ಅವಮಾನ ಸಹಿಸುವ ಶಕ್ತಿ, ಮತ್ತು ನಿಷ್ಕಾಪಂತ ಜೀವನ.

ಸಮುದಾಯ ಶಕ್ತಿಯ ಪ್ರತೀಕವಾದ ರಾಷ್ಟ್ರ ಪ್ರಭುತ್ವದ ಶಕ್ತಿಯಾದ ಶಾಸನ ಹಾಗೂ ಸಮುದಾಯ ಶಕ್ತಿಯ ಪ್ರತೀಕವಾದ ನೈತಿಕತೆ ಎರಡನ್ನೂ ಸಮತೋಲನದಲ್ಲಿ ಸಾರ್ವಜನಿಕ ಚಳವಳಿಗಳಲ್ಲಿ ಸ್ಥಾಪಿಸುವುದು

ಸುಲಭದ ಕೆಲಸವಲ್ಲ. ಗಾಂಧೀಜಿ ಚಳವಳಿಯನ್ನು ಆಧರಿಸಬೇಕಾದ ನೈತಿಕ ತಾತ್ವಿಕತೆಗಾಗಿ ತಮ್ಮನ್ನು ತಾವೇ ಪರೀಕ್ಷೆಗೆ ಒಡ್ಡಿಕೊಳ್ಳುತ್ತಾರೆ. ಅರ್ಧಶತಮಾನದ ಅಹಿಂಸಾ ವ್ರತ ಭಾರತ ವಿಭಜನೆಯ ಹಿಂಸೆಯ ಸಂದರ್ಭದಲ್ಲಿ ಪರೀಕ್ಷೆಗೆ ಒಳಗಾಯಿತು. ಹೀಗಿರುವಾಗ ಧಾರ್ಮಿಕ ಭಾವನೆಗಳಿಗೆ ಸುಲಭವಾಗಿ ಹತ್ತಿರವಾಗುವ "ವಂದೇ ಮಾತರಂ" ಘೋಷಣೆ ಧರ್ಮ ನಿರಪೇಕ್ಷತತ್ವಕ್ಕೆ ಪೂರಕವೆ? ಎಂಬ ಪ್ರಶ್ನೆಯನ್ನು ಕೇಳಲಾಗಿದೆ.

ವಿವೇಕಾನಂದರ ಪ್ರಭಾವ ಮತ್ತು ಧಾರ್ಮಿಕತೆ:

ನಮ್ಮಲ್ಲಿ ನೈತಿಕತೆ ಹಾಗೂ ಧರ್ಮದ ಸಂಬಂಧಗಳ ಕುರಿತಾದ ಬಹಳ ಚರ್ಚೆಗಳಾಗಿವೆ. ಅಣ್ಣಾ ಹಜಾರೆ ಸೂಚಿಸುವ ಪಂಚ ಸೂತ್ರಗಳಿಗೆ ಹಾಗೂ ನೈತಿಕ ನೆಲೆಗಳಿಗೆ ಭಾರತದಲ್ಲಿ ಬಹಳ ಕಾಲದಿಂದ ಬೆಳೆದು ಬಂದ ಧಾರ್ಮಿಕ ವಿಚಾರಗಳ ಹಾಗೂ ಸಂಸ್ಕೃತಿ ಚಿಂತನೆಗಳ ಪ್ರಭಾವ ಇದೆ ಎಂಬುದರಲ್ಲಿ ಅನುಮಾನವಿಲ್ಲ. ಭಾರತೀಯ ಪುನರುತ್ಥಾನ ಚಿಂತನೆಗಳು ಮುಖ್ಯವಾಗಿ ಸ್ವಾಮಿ ವಿವೇಕಾನಂದ, ಮಹರ್ಷಿ ಅರಬಿಂದೋ, ಕವಿ ರವೀಂದ್ರನಾಥ ಠಾಕೂರ್ ಹಾಗೂ ಚಿಂತಕ ಡಾ। ಆನಂದ ಕುಮಾರ ಸ್ವಾಮಿ ಇವರುಗಳ ವಿಚಾರಗಳಿಂದ ಪ್ರಭಾವಿತವಾಗಿದೆ.

ಅಣ್ಣಾ ಹಜಾರೆ ತಾವೇ ತಿಳಿಸಿರುವಂತೆ ಸ್ವಾಮಿ ವಿವೇಕಾನಂದರ ಪುಸ್ತಕಗಳ ಓದಿನಿಂದ ಪ್ರಭಾವಿತರಾಗಿದ್ದಾರೆ. ಆದುದರಿಂದ ಅವರ ನೈತಿಕ ಚಿಂತನೆಯಲ್ಲಿ ಧಾರ್ಮಿಕ ಪ್ರಭಾವ ಇದೆ ಎಂಬುದು ಹಿಂದೂ ಹಾಗೂ ಭಾರತೀಯ ಚಿಂತನೆಗಳ ಪ್ರಾಥಮಿಕ ಜ್ಞಾನ ಇರುವವನಿಗೂ ತಿಳಿಯದೆ ಇರದು. ಆದರೆ, ಇಂತಹ ನೈತಿಕ ನಿಲುವುಗಳು ಸಾರ್ವಜನಿಕ ಕ್ಷೇತ್ರದಲ್ಲಿ ಧರ್ಮನಿರಪೇಕ್ಷ ನಂಬುಗೆಗೆ ಅಡ್ಡಿ ಬರಬೇಕಾಗಿಲ್ಲ. ಲೋಕಪಾಲ ಮಸೂದೆಗಾಗಿ ಒತ್ತಾಯದ ಹಿಂದೆ ನೈತಿಕ ಶಕ್ತಿಯ ಧೈರ್ಯ ಇರುತ್ತದೆಯೇ ಹೊರತು ಮಸೂದೆಯ ಅಂಗೀಕಾರ, ಅನುಷ್ಠಾನ ಹಾಗೂ ಪರಿಣಾಮಗಳು ಕಾನೂನಿನ ಆಡಳಿತವನ್ನೇ (Rule of Law). ಬೆಂಬಲಿಸುವಂತಹದು. ಆದ್ದರಿಂದ ಧಾರ್ಮಿಕ ಪ್ರಭಾವಕ್ಕೆ ಒಳಗಾದ ನೈತಿಕ ನಿಲುವುಗಳು ಪ್ರೇರೇಪಣೆ ಆಗಬಹುದೇ ಹೊರತು ಪರಿಣಾಮವಾಗಲಾರದು. ಅಣ್ಣಾ ಹಜಾರೆ ಚಳವಳಿ ಕಾಲದ ಇನ್ನೊಂದು ಘೋಷಣೆ.

"ಅಣ್ಣಾ ಹಜಾರೆ ಚಾರ್ ಸಿಪಾಯಿ: ಹಿಂದೂ ಮುಸ್ಲಿಂ ಸಿಖ್ ಇಸಾಯಿ" (ಅಣ್ಣಾ ಹಜಾರೆಯವರ ನಾಲ್ವರು ಸೈನಿಕರು: ಹಿಂದೂ, ಮುಸ್ಲಿಂ, ಸಿಖ್ ಹಾಗೂ ಕ್ರಿಶ್ಚಿಯನರು)

ಈ ಘೋಷಣೆಯಂತೂ ಚಳವಳಿ ಚಿಂತನೆಯ ಮಟ್ಟದಲ್ಲಿ ಯಾವುದೇ ಧರ್ಮಕ್ಕೆ ಸೇರಿದ ಕೆಲಸವಲ್ಲ ಎಂಬುದನ್ನು ಸೂಚಿಸುತ್ತದೆ. ಅದೇ ರೀತಿ ಸಿವಿಲ್ ಸೊಸೈಟಿ ಕಾರ್ಯಕರ್ತರು ಒಟ್ಟಾದ ಕ್ರಮವೂ ಯಾವುದೇ ರಾಜಕೀಯ ಪಕ್ಷಕ್ಕೂ ಅವಕಾಶ ನೀಡಲಿಲ್ಲ. ಎಲ್ಲಾ ಪಕ್ಷ ಮತ್ತು ಎಲ್ಲಾ ಧರ್ಮಗಳಿಗೆ ಸೇರಿದ ಜನರ ವಿಚಾರ, ಆಶಯಗಳನ್ನೆ ಜನಲೋಕಪಾಲ ಮಸೂದೆಯ ಬೇಡಿಕೆ ಪ್ರತಿನಿಧಿಸಬೇಕು ಎಂಬ ಸ್ಪಷ್ಟ ಕಲ್ಪನೆ ಚಳವಳಿಗೆ ಇದೆ.

ಎಲ್ಲಾ ಜನ ಪ್ರಾತಿನಿಧ್ಯ ಇದೆಯೆ?

ಈ ವಾದ ಕೇಳಲು ಚೆನ್ನಾಗಿರುತ್ತದೆ. ಆದರೆ ನಿಜವಲ್ಲಿ ಅಣ್ಣಾ ಹಜಾರೆ ಜನಲೋಕಪಾಲ ಮಸೂದೆಗಾಗಿ ನಡೆಸಿದ ಆಂದೋಲನ ಭಾರತದ ಎಲ್ಲಾ ಜನರನ್ನು ಪ್ರತಿನಿಧಿಸಿದೆಯೆ? ಇದೊಂದು ಮಾಧ್ಯಮ ನಿರ್ಮಿತ ಚಳವಳಿಯಲ್ಲವೆ? ಈ ಚಳವಳಿಯಲ್ಲಿ ಇದ್ದುದು ಆರ್ ಎಸ್ ಎಸ್‌ನ ಜನರಲ್ಲವೆ? ಇದೊಂದು ನಗರ ಕೇಂದ್ರಿತ ಮೊಬೈಲ್ ಫೋನುಗಳನ್ನು ಹಾಗೂ

ಇಂಟರ್ ನೆಟ್‌ಗಳನ್ನು ಬಳಸುವ ಐಟಿ ಬಿಟಿ ಸಾಫ್ಟ್‌ವೇರ್ ಉದ್ಯಮಕ್ಕೆ ಸೇರಿದ ಮಧ್ಯಮ ವರ್ಗದ ಚಳವಳಿ ಅಲ್ಲವೆ? ಈ ಚಳವಳಿಯಲ್ಲಿ ಕಾರ್ಮಿಕರು, ದಲಿತರು, ಕೃಷಿಕರು ಸೇರಿದ ಎಲ್ಲಾ ಜನರ ನಿಜವಾದ ಭಾರತದ ಜನ ಪ್ರಾತಿನಿಧ್ಯವಿತ್ತೆ?

ಇಂತಹ ಪ್ರಶ್ನೆಗಳಿಗೆ ಸುಲಭದ ಉತ್ತರಗಳಿಲ್ಲ. ನೀಡಲಾಗುವ ಉತ್ತರಗಳನ್ನು ತೀರಾ ವೈಜ್ಞಾನಿಕವಾಗಿ ಸಾಬೀತು ಪಡಿಸುವುದೂ ಸಾಧ್ಯವಿಲ್ಲ. ಇಂತಹ ಚಳವಳಿಗಳಲ್ಲಿ ಜನಶಕ್ತಿಯ ಒತ್ತಡವನ್ನು ಕೇವಲ ಪರಿಣಾಮಗಳಲ್ಲಿ ಮಾತ್ರ ಕಾಣಬಹುದು. ಅಣ್ಣಾ ಹಜಾರೆಯನ್ನು ಜೈಲಿಗೆ ಹಾಕಿದ ಸರಕಾರ ಒಂದೆರಡು ದಿನಗಳಲ್ಲಿ ಚಳವಳಿ ತನ್ನಷ್ಟಕ್ಕೆ ತಾನೇ ತಣ್ಣಗಾಗಿ ಮುಗಿಯುತ್ತದೆ. ಎಂದು ತಿಳಿದಿತ್ತು. ಬೇಹುಗಾರಿಕೆಯಿಂದ ಪ್ರತಿದಿನ ವರದಿ ಪಡೆಯುವ ಸರಕಾರ ಚಳವಳಿ ತಣ್ಣಗಾಗುವ ಬದಲು ಬೆಳೆಯುತ್ತಾ ಹೋಗುವುದನ್ನು ಕಂಡಿತು. ಕೊನೆಗೂ ಹನ್ನೊಂದನೆ ದಿನ ಹಜಾರೆಯವರ ಆಗಲೇ ಬೇಕಾದ ಮೂರು ಬೇಡಿಕೆಗಳಿಗೆ ಒಪ್ಪಿ ಪಾರ್ಲಿಮೆಂಟಿನಲ್ಲಿ ಠರಾವು ಪಾಸು ಮಾಡಿತು. ಸ್ಟಾಂಡಿಗ್ ಕಮಿಟಿಯಲ್ಲಿ ಸಾಧ್ಯವೇ ಇಲ್ಲ ಎಂದ ಸರಕಾರ ಕೊನೆಗೂ ಜನಲೋಕಪಾಲ ಮಸೂದೆಯ ಆಗಲೇ ಬೇಕಾದ ರಾಜಿ ಇಲ್ಲದ ಮೂರು ಮುಖ್ಯ ತತ್ವಗಳಿಗೆ ಒಪ್ಪಿದುದು ಈ ಚಳವಳಿಯ ಪರಿಣಾಮ. ಈ ಚಳವಳಿಯನ್ನು ಅದರ ಪರಿಣಾಮದಿಂದ ಅಳೆಯುವುದಾದರೆ, ಜನಪ್ರಾತಿನಿಧ್ಯ ಇತ್ತು. ಇಲ್ಲವಾದಲ್ಲಿ ಸರ್ಕಾರ ಬಾಗುತ್ತಿರಲಿಲ್ಲ. ಇಂತಹ ಎಷ್ಟೋ ಚಳುವಳಿಗಳನ್ನು ಸಕಾರ ಬಗ್ಗುಬಡಿದಿದೆ. ಇಲ್ಲವಾದಲ್ಲಿ ಸರ್ಕಾರ ಕೆಲವು ವಾರಗಳ ಮೊದಲಷ್ಟೆ ಬಾಬಾ ರಾಮದೇವರ ಚಳುವಳಿಯನ್ನು ಬಗ್ಗು ಬಡಿದಿತ್ತು. ಜನ ಪ್ರಾತಿನಿಧ್ಯದ ಬಲದಿಂದಾಗಿ ಮಾತ್ರ ಅಣ್ಣಾ ಹಜಾರೆ ಚಳವಳಿಯನ್ನು ಬಗ್ಗು ಬಡಿಯಲು ಸಾಧ್ಯವಾಗಿಲ್ಲ.

ಆರ್ ಎಸ್ ಎಸ್‌ನ ಛದ್ಮ ವೇಷವೇ?

ಈ ಹೋರಾಟ ಆರ್ ಎಸ್ ಎಸ್‌ನ ಛದ್ಮ ವೇಶದ ಚಳವಳಿ ಎಂಬುದನ್ನು ಸೂಚಿಸುವಂತೆಪ್ಪೊ! ಚಂದ್ರಶೇಖರ ಪಾಟೀಲರು. "ಹಜಾರೆ ಅವರು ಗಾಂಧಿ ಟೋಪಿ ಬದಲಾಗಿ ಕರೀ ಟೋಪಿ ಹಾಕಲಿ" ಅಂತ ಜಿ.ಕೆ. ಹರಿಪ್ರಸಾದರ ಹೇಳಿಕೆಯ ನೆವದಲ್ಲಿ ಟೀಕೆ ಮಾಡಿದರು. (ವಿಜಯ ಕರ್ನಾಟಕ 31-08-2011) ಹಿಂದೆ ಜೆ.ಪಿ. ಚಳವಳಿ ಸಮಯದಲ್ಲಿ ಚಂಪಾ ಬಹುದೊಡ್ಡ ಸಭೆಗಳನ್ನು ಉದ್ದೇಶಿಸಿ ಮಾತನಾಡುವುದನ್ನು ವಿದ್ಯಾರ್ಥಿಯಾಗಿದ್ದ ನಾನು ಕೇಳಿದ್ದೇನೆ. ಆಗ ಮೈದಾನದಲ್ಲಿ ಸೇರಿದ ಸಾವಿರಾರು ಜನರಲ್ಲಿ ಎಲ್ಲಾ ಬಗೆಯ ಜನರೂ ಇದ್ದರು. ಆ ಬಳಿಕದ ಎಮರ್ಜೆನ್ಸಿ ವಿರುದ್ಧದ ಹೋರಾಟದಲ್ಲೂ ಆರ್ ಎಸ್ ಎಸ್ ನವರು ಇದ್ದರು. ಆದರೆ ಆಗ ನಾಯಕತ್ವ ಯಾರ ಕೈಯಲ್ಲಿ ಇತ್ತು, ಯಾವ ಉದ್ದೇಶಕ್ಕಾಗಿ ಹೋರಾಟ ನಡೆಯುತ್ತಿತ್ತು ಮತ್ತು ಅದರ ಪರಿಣಾಮಗಳೇನು? ಎಂಬುದು ನಮಗೆ ಮುಖ್ಯವಾಗಿತ್ತು.

ಜೆ.ಪಿ. ಚಳವಳಿ ಮತ್ತು ಬಿ.ಜೆ.ಪಿ.

ಜೆ.ಪಿ. ಚಳವಳಿಯ ಮೊದಲು ಪಾರ್ಲಿಮೆಂಟಿನಲ್ಲಿ ಕೇವಲ ಇಬ್ಬರು ಮಾತ್ರ ಪ್ರತಿನಿಧಿಗಳಿದ್ದ ಭಾರತೀಯ ಜನತಾ ಪಕ್ಷದ ಮೂಲ ಘಟಕ. ಚಳವಳಿ ಬಳಿಕ 89 ಸದಸ್ಯರನ್ನು ಪಡೆಯುವ ಮಟ್ಟಕ್ಕೆ ಏರಿತು. ಇದು ಪಕ್ಷ ರಾಜಕೀಯದ ಪ್ರಜಾಪ್ರಭುತ್ವದಲ್ಲಿ ಕೇವಲ ಒಂದು ಚಳವಳಿಯ ಕಾರಣದಿಂದ ಮಾತ್ರವಾಗುವುದಿಲ್ಲ. ಅದಕ್ಕೆ ಇತರ ಪಕ್ಷಗಳ ವೈಫಲ್ಯ ನಾನಾ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಹಾಗೂ ಆರ್ಥಿಕ ಕಾರಣಗಳೂ ಸಹಾಯ ಮಾಡುತ್ತದೆ.

ಅಣ್ಣಾ ಹಜಾರೆ ಚಳವಳಿ ಮೊದಲು ಬಾಜಪಕ್ಕೆ ಅಧಿಕಾರವಿಲ್ಲ. ಆದರೆ ಭ್ರಷ್ಟಾಚಾರದ

ಕರ್ಮಕಾಂಡಗಳಿಂದ ತತ್ತರಿಸಿರುವ ಕಾಂಗ್ರೆಸ್ ಸರ್ಕಾರದ ಜನಪ್ರಿಯತೆ ಇಳಿಮುಖವಾಗುತ್ತಿದೆ. ದಿ ಹಿಂದೂ ಪತ್ರಿಕೆಯ ಸಮೀಕ್ಷೆಯೂ ಇದನ್ನೇ ಹೇಳುತ್ತಿದೆ. ಮುಂದಿನ ಚುನಾವಣೆಯಲ್ಲಿ ಕಾಂಗ್ರೇಸ್ ಅಧಿಕಾರ ಕಳಕೊಂಡು ಬಿ.ಜೆ.ಪಿ. ಅಧಿಕಾರಕ್ಕೆ ಬರಲು ಅಣ್ಣಾ ಹಜಾರೆ ಚಳವಳಿ ಕಾರಣವಾದೀತೆ? ಎಂದು ಈಗಲೇ ಹೇಳಲು ಸಾಧ್ಯವಿಲ್ಲ. ದೊಡ್ಡ ಫೀಸು ಪಡೆದು ಹೆಸರು ಮಾಡಿದ ವಕೀಲರುಗಳ ಸಲಹೆಯನ್ನೇ ನಂಬುತ್ತಾ ಹೋದರೆ ಕಾಂಗ್ರೆಸ್‌ನ ರಾಜಕೀಯ ನಾಯಕತ್ವದ ಶಕ್ತಿ ಕಮ್ಮಿಯಾಗುತ್ತಾ ಹೋಗುವುದರಲ್ಲಿ ಸಂಶಯವಿಲ್ಲ. ಯುವ ನಾಯಕನೆಂದು ಬಿಂಬಿಸಲ್ಪಟ್ಟ ರಾಹುಲ ಗಾಂಧಿಯನ್ನು ಬಿಟ್ಟು ಯುವಕರು ಅಣ್ಣಾ ಹಜಾರೆ ಹಿಂದೆ ನಿಂತಿದ್ದಾರೆ. ಪಕ್ಷ ಪ್ರಜಾಪ್ರಭುತ್ವದಲ್ಲಿ ಕಾಂಗ್ರೆಸ್ ಮುಂದಿನ ಚುನಾವಣೆಯಲ್ಲಿ ಸೋತರೆ ಅದಕ್ಕೆ ಅಣ್ಣಾ ಹಜಾರೆ ಚಳವಳಿ ಒಂದೇ ಕಾರಣ ಎಂದು ಹೇಳುವುದೂ ಸರಿಯಲ್ಲ. ಇಂತಹ ಚಳವಳಿಯಲ್ಲಿ ಎಲ್ಲಾ ತರದ ಜನರೂ ಇರುತ್ತಾರೆ. ಇಂತಹವರು ಮಾತ್ರ ಬನ್ನಿ, ಅಂತಹವರು ಬರಬೇಡಿ ಎನ್ನಲು ಸಾಧ್ಯವಿಲ್ಲ.

ಜಾತ್ಯಾತೀತ ತತ್ವದ ಭವಿಷ್ಯವೇನು?

ಬಿ.ಜೆ.ಪಿ. ಮೂಲಭೂತವಾದವನ್ನು ಬೆಂಬಲಿಸುತ್ತಾ ಕೋಮು ಪಕ್ಷವಾಗಿ ಬೆಳೆದಾಗ ಧರ್ಮನಿರಪೇಕ್ಷ ತತ್ವಕ್ಕೆ ಆಸರೆಯಾಗಿ ನಿಂತ ಪಕ್ಷ ಕಾಂಗ್ರೆಸ್. ಅಣ್ಣ ಹಜಾರೆ ಹೋರಾಟ ಭ್ರಷ್ಟಾಚಾರ ವಿರೋಧಕ್ಕೆ ಸಂಬಂಧಪಟ್ಟದ್ದು. ರಾಮ ಲೀಲಾ ಮೈದಾನಕ್ಕೆ ಹೋಗಿ ರಾಹುಲ್‌ಗಾಂಧಿ ಅಣ್ಣ ಹಜಾರೆ ಬೆಂಬಲಿಗರ ಜೊತೆ ಭ್ರಷ್ಟಾಚಾರ ವಿರುದ್ಧ ಧರಣಿ ಕೂತರ ಯಾರೂ ಏನೂ ಹೇಳುವಂತಿಲ್ಲ. ಆದರೆ ಅತಿ ಬುದ್ಧಿವಂತರಾದ ಕೇವಲ ಆಡಳಿತ ಮಾತ್ರ ಅರ್ಥವಾಗುವ ವಕೀಲ ಮಂತ್ರಿಗಳ ಮಾತು ಕೇಳಿ ಸರ್ಕಾರ ಈ ಚಳವಳಿಯನ್ನು ತಮ್ಮ ವಿರುದ್ಧವೆ ತಿರುಗಿಸಿಕೊಂಡಿತು. ಧರ್ಮನಿರಪೇಕ್ಷ ಅಥವಾ ಜಾತ್ಯಾತೀತ ತತ್ವಕ್ಕೆ ಬದ್ಧವಾದ ಒಂದು ಪಕ್ಷ ಭ್ರಷ್ಟಾಚಾರ ವಿರುದ್ಧದ ಚಳವಳಿಯನ್ನು ತನ್ನ ವಿರುದ್ಧ ತಿರುಗಿಸಿಕೊಂಡಾಗ ಒಂದಷ್ಟು ಜನ ಮುಂದೇನು ಎಂದು ಗಲಿಬಿಲಿ ಗೊಂಡಿದ್ದಾರೆ. ಕಾಂಗ್ರೆಸ್ ಸರ್ಕಾರ ಮಾಡಿದ ತಪ್ಪಿಗಾಗಿ ಧರ್ಮನಿರಪೇಕ್ಷ ಜಾತ್ಯಾತೀತ ತತ್ವ ಪಾಲನೆಯ ಭರವಸೆಗೆ ಇನ್ನೇನು ಎಂಬ ಗೊಂದಲವಾಗಿದೆ.

ಆಕ್ಟಿವಿಸ್ಟರ ಸಕ್ರಿಯತೆ:

ಇದರ ಅರ್ಥ ಅಣ್ಣಾ ಹಜಾರೆ ಚಳವಳೀಯಲ್ಲಿ ಆರ್ ಎಸ್ ಎಸ್ ನವರು ಇರಲೇ ಇಲ್ಲ ಎಂದಲ್ಲ. ಬೆಂಗಳೂರಿನ ಫ್ರೀಡಂ ಪಾರ್ಕಿನ ಪ್ರತಿಭಟನೆಗೆ ನಾನು ಹೋದಾಗಲೆಲ್ಲಾ ಅಲ್ಲಿ ಎಲ್ಲಾ ವರ್ಗದ ಎಲ್ಲಾ ರೀತಿಯ ಜನಗಳನ್ನೂ ನೋಡುತ್ತಿದ್ದೆ. ಕಾರ್ಮಿಕರ ಪ್ರತಿನಿಧಿಗಳು, ಅಧ್ಯಾಪಕರು, ವಿದ್ಯಾರ್ಥಿಗಳು, ನಾನಾ ರೀತಿಯ ಎನ್‌ಜಿಒ ಸಂಘಟನೆಗಳು, ಸಾಮಾನ್ಯ ಉದ್ಯೋಗಿಗಳು ಎಲ್ಲರೂ ಇದ್ದರು. ಎಲ್ಲಾ ಪಕ್ಷಗಳ, ಸಂಘಟನೆಗಳ ಜನಗಳೂ ಇದ್ದರು. ಆದರೆ, ಸಕ್ರಿಯವಾಗಿ ಎದುರಿಗೆ ಕಾಣುತ್ತಿದ್ದವರು ಬುದ್ಧಿ ಜೀವಿಗಳಲ್ಲದ ಆಕ್ಟಿವಿಸ್ಟ್ ಜನರು. ಒಂದು ದಿನವಂತೂ ಡಾ। ದೇವಿಪ್ರಸಾದ ಶೆಟ್ಟಿ ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ಅವರು ತಮ್ಮ ನೈತಿಕ ಬೆಂಬಲ ಸೂಚಿಸುವುದಕ್ಕಾಗಿ ಬಂದಿದ್ದರು. ಡಾ। ದೇವಿ ಪ್ರಸಾದ್ ಶೆಟ್ಟಿ, ಮೆಡಿಕಲ್ ಕೌನ್ಸಿಲ್ ಆಫ್ ಇಂಡಿಯಾದಲ್ಲಿ ನಡೆಯುತ್ತಿದ್ದ ಅತಿ ದೊಡ್ಡ ಪ್ರಮಾಣದ ಭ್ರಷ್ಟಾಚಾರದ ವಿರುದ್ಧ ದನಿ ಎತ್ತಿದವರು. ನಾನಾ ಕಾರಣಗಳಿಗೆ ನಾನಾ ಜನರು ಅಲ್ಲಿದ್ದರು.

ಪಕ್ಷಾತೀತವಾಗಿ ಬೆಳೆದ ಈ ಚಳವಳಿಯನ್ನು ಪಕ್ಷವೊಂದು ಬಳಸಿಕೊಳ್ಳದಂತೆ

ಚಳವಳಿಯ ನಾಯಕರೂ, ಚಳವಳಿಯನ್ನು ಬೆಂಬಲಿಸಿದ ಜನರೂ ಎಚ್ಚರ ವಹಿಸಬೇಕು. ಇಂತಹ ಚಳವಳಿಯನ್ನು ಇಂತಹ ಸಂಘಟನೆಗೆ ಸೇರಿದವರು ಮಾತ್ರ ನಡೆಸುತ್ತಾರೆ ಎಂದು ಭಾವಿಸುವುದು ಸಂಕುಚಿತ ಅಭಿಪ್ರಾಯವಾದೀತು.

ಕೃಷಿಭೂಮಿ ಪರಿವರ್ತನೆ:

ಇದಲ್ಲದೆ ಇನ್ನೊಂದು ಮಾತನ್ನೂ ನಾವು ನೆನಪಿಡಬೇಕು. ಕಾರ್ಮಿಕರು, ದಲಿತರು, ಕೃಷಿಕರು, ಹಳ್ಳಿ, ನಗರ ಇತ್ಯಾದಿ ಪ್ರಾತಿನಿಧ್ಯ ನಮ್ಮ ದೇಶದಲ್ಲಿ ವರ್ಗೀಕರಣಗೊಳಿಸಿ ಇಂತಹವರ ಪ್ರಾತಿನಿಧ್ಯ ಈ ರೀತಿಯಲ್ಲಿ ಎನ್ನುವಷ್ಟು ಸರಳವಾಗಿರುವುದಿಲ್ಲ. ಕಾರ್ಲ್ ಮಾರ್ಕ್ಸ್‌ನ ತತ್ವವನ್ನು ಆಧರಿಸಿ ಹೇಳುವುದಿದ್ದರೆ, ನಮ್ಮಲ್ಲಿ ಕೃಷಿಭೂಮಿ ಪಾಳೇಗಾರಿ ವ್ಯವಸ್ಥೆಯಿಂದ ನೇರವಾಗಿ ಬಂಡವಾಳ ಶಾಹಿಯ ಹಿಡಿತಕ್ಕೆ ಹೋಗಲಿಲ್ಲ. ನಮ್ಮಲ್ಲಿ ಕೃಷಿ ಭೂಮಿ ಮೊದಲಿಗೆ ವಸಾಹತುಶಾಹಿ ಬಂಡವಾಳದ ಹಿಡಿತಕ್ಕೆ ಹೋಯಿತು. ಬ್ರಿಟಿಷರ ಕಾಲದಲ್ಲಾದ ಅಂತಹ ಪರಿವರ್ತನೆ ಬಳಿಕ ಅದು ವ್ಯಾಪಾರೀ ಬಂಡವಾಳದ ವಶವಾಗಿ ಅಲ್ಲಿಂದ ಕೈಗಾರಿಕಾ ಬಂಡವಾಳದ ವಶವಾಯಿತು. (ಹೆಚ್ಚಿನ ವಿವರಕ್ಕೆ ಪ್ರೊಫೆಸರ್ ಮುಜಾಫರ್ ಅಸ್ಸಾದಿ, ಕೆ.ಎಸ್. ಪಾರ್ಥಸಾರಥಿ ಮೊದಲಾದವರ ಬರಹಗಳನ್ನು ನೋಡಿ) ಯುರೋಪಿನಲ್ಲಿ ಕೈಗಾರಿಕಾ ಕ್ರಾಂತಿ ನಡೆದು ಬಂಡವಾಳ ಶಾಹಿಯ ಬೆಳವಣಿಗೆ ಪ್ರಾರಂಭವಾದಾಗ ಆದಂತೆ ಕೃಷಿ ಭೂಮಿ ಪರಿವರ್ತನೆ ನಮ್ಮಲ್ಲಿ ಆಗಲಿಲ್ಲ. ನಮ್ಮಲ್ಲಿ ಇದೀಗ ಕೃಷಿ ಭೂಮಿ ಬಂಡವಾಳ ಶಾಹಿಯ ಹಿಡಿತಕ್ಕೆ ಜಾರುತ್ತಿದೆ. ಒಂದು ಸಮೀಕ್ಷೆ ಪ್ರಕಾರ 2020ನೇ ಇಸವಿಯಲ್ಲಿ ಭಾರತದ 60% ಜನ ಸಂಖ್ಯೆ ನಗರ-ಪಟ್ಟಣಗಳಲ್ಲಿ ವಾಸಿಸುತ್ತದೆ. ಈಗ ಭಾರತ ವೇಗವಾಗಿ ನಗರೀಕರಣಗೊಳ್ಳುವ (Urbanization) ಚಲನೆಯಲ್ಲಿದೆ.

ಹೀಗೆ ಬದಲಾವಣೆಯ ಸಂಕ್ರಮಣ ಸ್ಥಿತಿಯಲ್ಲಿರುವ ಸಮಾಜ/ದೇಶದ ಜನ ಪ್ರಾತಿನಿಧ್ಯವನ್ನು ಕೇವಲ ವರ್ಗೀಕರಣದಲ್ಲಿ ಹಿಡಿದು ಹೇಳುತ್ತೇನೆಂಬುದು ತೋರುಗಾರಿಕೆಯ ತಾತ್ವಿಕತೆ ಆದೀತೇ ಹೊರತು ಸಂದರ್ಭದ ನಿಜವಾದ ವರದಿಯಾಗಲಾರದು. ಹಳ್ಳಿ, ನಗರ ಹಾಗೂ ಎಲ್ಲಾ ವರ್ಗದ ಜನರೂ ಭ್ರಷ್ಟಾಚಾರ ವಿರೋಧಿಗಳೇ ಆಗಿರುವುದರಿಂದ ಜನರ ಆಶಯವಂತೂ ಚಳವಳಿಯ ಹಿಂದಿದೆ. ಅವರ ಮುಂದಿನ ಲಾಭ ಪಟ್ಟ ಭದ್ರ ಹಿತಾಸಕ್ತಿಗಳ ಕೈಗೆ ಹೋಗದಂತೆ ಕಾಯುವುದೇ ಮುಖ್ಯ ಮಾತಾಗಬೇಕೇ ವಿನಹ ಜನ ಪ್ರಾತಿನಿಧ್ಯದ ಹೆಸರಿನಲ್ಲಿ ತಿರಸ್ಕರಿಸುವುದಲ್ಲ.

ತಂತ್ರಜ್ಞಾನ ಕೇವಲ ಕೆಲವರ ಸೊತ್ತೆ?

ಇದರ ಜೊತೆ ಕೆಲವು ತಂತ್ರಜ್ಞಾನ ಕೇವಲ ಕೆಲವರ ಸೊತ್ತು ಎಂದು ತಿಳಿಯುವುದು ಸರಿಯಲ್ಲ. ಮೊಬೈಲ್ ಫೋನಿನ ಬಳಕೆ ತೀರಾ ಸಾಮಾನ್ಯ ಜನರಲ್ಲೂ ಹೆಚ್ಚಾಗಿದೆ. ಮೊದಲ ಹಂತದಲ್ಲು ಜನ ಬೆಂಬಲವನ್ನು ಪರೀಕ್ಷಿಸುವುದಕ್ಕಾಗಿ ಮಾಡಿದ ಸಮೀಕ್ಷೆಯಲ್ಲಿ 50 ಸಾವಿರ ಮಿಸ್‌ಡ್ ಕಾಲ್‌ಗಳನ್ನು ಪಡೆದ ಚಳವಳಿಗಾರರು ವಾಲಂಟಿಯರ್‌ಗಳಿಗಾಗಿ ಆ 50ಸಾವಿರ ಜನರನ್ನು ಎಸ್ ಎಮ್ ಎಸ್ ಮೂಲಕ ಕೇಳುತ್ತಾರೆ. ಅವರಲ್ಲಿ ಎಂಟುನೂರು ಜನ ವಲಂಟೀಯರ್ ಆಗಿ ಕೆಲಸ ಮಾಡಲು ಮೊದಲ ಹಂತದಲ್ಲಿ ಮುಂದೆ ಬಂದರು ಎಂದು ಅರವಿಂದ ಕೇಜ್ರಿವಾಲ್ ಒಂದು ಸಂದರ್ಶನದಲ್ಲಿ ಹೇಳಿದರು. (ದಿ ಹಿಂದೂ 31-08-2001) ಈ 50 ಸಾವಿರ ಮೊದಲ ಹಂತದ ಮೊಬೈಲ್ ಫೋನುಗಳು ಕೇವಲ ಮಧ್ಯಮ ವರ್ಗದವರು ಅಥವಾ ಸಾಫ್ಟ್‌ವೇರ್ ಉದ್ಯೋಗಿಗಳು ಮಾತ್ರ ಎನ್ನಲು ಕಾರಣವಿಲ್ಲ. ಅವರಲ್ಲಿ

ಎಲ್ಲಾ ವರ್ಗದವರೂ ಇರುತ್ತಾರೆ ಅದು ಸ್ವಯಂಪ್ರೇರಿತರಾಗಿ ನೀಡಿದ ಬೆಂಬಲಿತ ಮಿಸ್ಡ್ ಕಾಲ್. ಇದೊಂದು ತಂತ್ರಜಾಲ ನಿರ್ಮಿತ ಆಯ್ಕೆಯ ವಿಧಾನ ಮಾತ್ರ.

ಚಳವಳಿಯಲ್ಲಿ ಬದಲಾಗುವ ವ್ಯಕ್ತಿ:

ಇಂತಹ ಸಂದರ್ಭದಲ್ಲಿ ನಾವು ಇನ್ನೂ ಒಂದು ವಿಚಾರವನ್ನು ನೆನಪಿಡಬೇಕು. ಯಾವುದೇ ಹಂತದಿಂದ ಬಂದ ವ್ಯಕ್ತಿಯೇ ಆಗಲಿ ಚಳವಳಿಯಲ್ಲಿ ಬದಲಾಗುತ್ತಾನೆ. ಆ ಚಳವಳಿಯಲ್ಲಿ ಭಾಗವಹಿಸುವ ಮೊದಲಿದ್ದ ವ್ಯಕ್ತಿತ್ವದಿಂದ ತುಸುವಾದರೂ ಪರಿವರ್ತನೆ ಹೊಂದುತ್ತಾನೆ ಎಂಬುದನ್ನು ನಾವು ಮರೆಯಬಾರದು. ವ್ಯಕ್ತಿಗಳಲ್ಲೂ, ಸಮಾಜದಲ್ಲೂ ಅಂತಹ ಚಳವಳಿಗಳಿಂದ ಆಗುವ ಪರಿವರ್ತನೆಯನ್ನು ನಾವು ಗುರುತಿಸದಿದ್ದಲ್ಲಿ ಜನ ಪ್ರಾತಿನಿಧ್ಯದ ಬಗ್ಗೆ ಅದೊಂದು ಸಿದ್ಧ ವಿಚಾರದ ಅನ್ವಯಿಕ ಹೇಳಿಕೆಯಾದೀತೆ ವಿನಃ ವಾಸ್ತವದ ಸತ್ಯವಾಗಲಾರದು.

ಯೇಟ್ಸ್‌ನ ಒಂದು ಕವನ:

ಇದನ್ನು ಕವಿ ಡಬ್ಲ್ಯು.ಬಿ. ಯೇಟ್ಸ್‌ನ 'Easter 1916' ಎಂಬ ಕವನವೊಂದರ ಮೂಲಕ ಅರ್ಥ ಮಾಡಿಕೊಳ್ಳಬಹುದು. ತೀರಾ ಸಾಮಾನ್ಯವಾಗಿದ್ದ ಸ್ಥಿತಿ ಕ್ರಾಂತಿಯ (ಚಳವಳಿಯ) ಮೂಲಕ ಬದಲಾವಣೆಗೊಳ್ಳುತ್ತದೆ.

All changed, changed utterly:
A terrible beauty is born.

ಆ ಕವನದಲ್ಲಿ ಕವಿಗೆ ಅತ್ಯಂತ ಬೇಕಾದವರಿಗೆ ದೊಡ್ಡ ಅಪರಾಧವೆಸಗಿಸಿದ ಒಬ್ಬ ಕ್ರಾಂತಿಕಾರಿ ಕುಡುಕನಾದ ಸ್ವಪ್ರತಿಷ್ಠೆಯ ಅಹಂಕಾರಿ ಆದರೆ ಕ್ರಾಂತಿಯಲ್ಲಿ ಅವನೂ ಬದಲಾಗುತ್ತಾನೆ.

ಚಳವಳಿಯೊಂದರಲ್ಲಿ ಭಾಗವಹಿಸುವ ಜನ ಪ್ರಾತಿನಿಧ್ಯ ಒಂದು ಮುಖ್ಯ ಅಂಶ ನಿಜ. ಆದರೆ ಭಾಗವಹಿಸುವ ಜನರಲ್ಲಾಗುವ ಪರಿವರ್ತನೆಯನ್ನು ಗಮನಿಸುವುದು ಕೂಡಾ ಅಷ್ಟೇ ಮುಖ್ಯವಾದ ಅಂಶ ಎಂಬುದನ್ನು ನಾವು ಮರೆಯಬಾರದು. ಒಂದು ಚಳವಳಿಯಲ್ಲಿ ಎಲ್ಲಾ ರೀತಿಯ ಜನರೂ ಇರುತ್ತಾರೆ. ಗಾಂಧಿ ಕಾಲದಲ್ಲೂ ಹಾಗೆಯೇ ಇತ್ತು. 1921ರ ಮಹಾತ್ಮಾಗಾಂಧಿ ನೇತೃತ್ವದ ಅಸಹಕಾರ ಚಳವಳಿಯ ವಸ್ತುವನ್ನಿಟ್ಟುಕೊಂಡು ಡಾ। ಶಿವರಾಮ ಕಾರಂತರು "ಔದಾರ್ಯದ ಉರುಳಲ್ಲಿ" ಎಂಬ ಕಾದಂಬರಿ ರಚಿಸಿದ್ದಾರೆ. ಅದರಲ್ಲಿ ಕಾದಂಬರಿಯ ಆದರ್ಶವಾದಿ ನಾಯಕ ರಾಧಾಕೃಷ್ಣನ ಸಂದರ್ಭದಲ್ಲಿ ಅವನ ತಂದೆಯೇ ಹೇಳುವ ಮಾತು. "ಈ ಅಣ್ಣಪ್ಪ ಕಮ್ತಿಯವರು. ಅನಂತರಾಯರು. ನಾರಾಯಣಯ್ಯ ಇವರೆಲ್ಲಾ ಈ ಮಕ್ಕಳಿಗೆ ಗಾಳಿ ಹಾಕಿ. ತಿಲಕ ಫಂಡು (ತಿಲಕ ಸ್ವರಾಜ್ಯ ನಿಧಿ) ಕೂಡಿಸುತ್ತಿದ್ದಾರಲ್ಲ. ಈ ಹಣ ಆ ತಿಲಕನ ವರೆಗೆ ಮುಟ್ಟುವುದುಂಟೇ? ಹೆದ್ದಾರಿನ ಜಾತಿಯವು ಇವು." ಲಕ್ಷಾಂತರ ಜನರು ಸೇರುವ ಚಳವಳಿಯಲ್ಲಿ ನಾನಾ ತರದ ವಿಚಾರಗಳು ಇರುತ್ತವೆ. ಅವು ಮೂಲ ಉದ್ದೇಶಕ್ಕೆ ಧಕ್ಕೆ ಉಂಟು ಮಾಡದಂತೆ ನೋಡಿಕೊಳ್ಳುವುದು ಮುಖ್ಯ. ಯಾರೋ ಒಬ್ಬ ಹನುಮಂತನ ವೇಷ ಹಾಕಿ ಕುಣಿಯುತ್ತಾನೆ ಇನ್ಯಾರೋ ನಾಲ್ಕು ಜನ ಕುಡಿದು ಬಂದಿರಬಹುದು. ತಲೆಗೆ

ಹೆಲ್ಮೆಟ್ ಹಾಕದೆ ಬೈಕ್ ರೈಡ್ ಮಾಡಿರಬಹುದು. ಅದು ತಪ್ಪು. ಆದರೆ ಜನ ತಂತಾನೆ ಸೇರಿದಾಗ ಅವುಗಳ ನಿಯಂತ್ರಣ ಸುಲಭದ ಕೆಲಸವಲ್ಲ. ಚೌರಿ ಚೌರಾದಲ್ಲಿ ಪೋಲೀಸರನ್ನು ಸುಟ್ಟು ಹಿಂಸೆಯಾದಾಗ ಚಳವಳಿಯನ್ನೇ ನಿಲ್ಲಿಸಿ ಜನರಿಗೆ ಅಹಿಂಸೆಯ ನೈತಿಕ ಪಾಠಕ್ಕೆ ಗಾಂಧೀಜಿ ಮುಂದಾದರು. ಸುದೈವದಿಂದ ಅಣ್ಣಾ ಹಜಾರೆಯವರಿಗೆ ಅಂತಹ ಪರೀಕ್ಷೆ ಈ ಬಾರಿ ಒದಗಲಿಲ್ಲ. ಗಾಂಧೀಜಿಯ ಚೌರಿಚೌರಾದ ಪರೀಕ್ಷೆಯೂ ಸುಲಭದ ವಿಚಾರವಾಗಿರಲಿಲ್ಲ. ಪಂಡಿತ್ ನೆಹರೂ ತಮ್ಮ ಆಟೋಬಯಾಗ್ರಫಿಯಲ್ಲಿ (ನೋಡಿ: Non-violence and the doetrine of the sword ಎಂಬ ಅಧ್ಯಾಯ). 1930ರ ಚಳವಳಿಯಲ್ಲಿ ಅಲ್ಲಲ್ಲಿ ಬಿಡಿಬಿಡಿಯಾಗಿ ನಡೆಯಬಹುದಾದ ಘಟನೆಯಿಂದ ಚಳವಳಿಯನ್ನು ನಿಲ್ಲಿಸಬಾರದು ಎಂಬ ನಿರ್ಣಯಕ್ಕೆ ಗಾಂಧೀಜಿ ತಲುಪಿದ್ದರು ಎಂದು ಬರೆಯುತ್ತಾರೆ. ಇದು ಚಳವಳಿಯ ಜನ ಪ್ರಾತಿನಿಧ್ಯದ ಸಂಕೀರ್ಣತೆಯನ್ನು ಸಂಘಟನೆಯ ಸಂಕಷ್ಟಗಳನ್ನೂ ಅರಿಯಲು ಸಹಕಾರಿ.

ರಾಷ್ಟ್ರೀಯತೆ, ಸಂಸ್ಕೃತಿ, ಬಂಡವಾಳಶಾಹಿ:

ಇಲ್ಲಿ ಭ್ರಷ್ಟಾಚಾರದ ವಿರುದ್ಧದ ಆಶಯದಲ್ಲಿ ಎಲ್ಲಾ ಜನ ಸಮೂಹವೂ ಪ್ರತಿನಿಧಿಸಲ್ಪಟ್ಟಿದೆ ಎಂಬುದು ಸ್ಪಷ್ಟವಾಗಿದೆ. ಆದರೆ ಅದು ರಾಷ್ಟ್ರೀಯತೆಯ ರೂಪ ತಾಳಿದೆ. ರಾಷ್ಟ್ರೀಯತೆ ಹೆಚ್ಚಿನ ಒತ್ತು ಕೊಡುವುದು ಸಂಸ್ಕೃತಿಯ ನಿರ್ಮಿತಿಗೆ ಹಾಗೂ ಬಂಡವಾಳ ಶಾಹಿ ಬೆಳವಣಿಗೆಗೆ ಎಂಬುದು ಬೆನೆಡಿಕ್ಟ್ ಆ್ಯಂಡರ್‌ಸನ್ ಎಂಬ ವಿದ್ವಾಂಸನ ವಾದ. ಇದನ್ನು ಅನೇಕ ಪ್ರಗತಿಪರ ಚಿಂತಕರೂ ಒಪ್ಪಿಕೊಳ್ಳುತ್ತಾರೆ. ಆದುದರಿಂದ ರಾಷ್ಟ್ರೀಯತೆಯ 'ಸಂಸ್ಕೃತಿ'ಯ ಪ್ರಶ್ನೆ ಮೂಲಭೂತವಾದಿಗಳನ್ನು ಹಾಗೂ ಬಂಡವಾಳಶಾಹಿಯ ಲಾಭ ಪಟ್ಟಭದ್ರ ಹಿತಾಸಕ್ತಿಗಳ ಶೋಷಣೆಯ ಮಾರ್ಗವನ್ನು ಸುಲಭಗೊಳಿಸದಂತೆ ಎಚ್ಚರವಹಿಸಬೇಕಾದ ಚರ್ಚೆ ಅಣ್ಣಾ ಹಜಾರೆಯವರ ಚಳವಳಿಯನ್ನು ವಿರೋಧಿಸುವ ಚರ್ಚೆಗಿಂತ ಹೆಚ್ಚು ಮುಖ್ಯವಾದ್ದು ಎಂದು ನನಗನ್ನಿಸುತ್ತದೆ.

ಯಾರೇ ಏನೇ ಹೇಳಿದರೂ ಚಳವಳಿಗಳೂ ತತ್‌ಕ್ಷಣದ ಅಗತ್ಯಕ್ಕಾಗಿ ಹುಟ್ಟುತ್ತದೆ. ಭ್ರಷ್ಟಾಚಾರದ ವಿರುದ್ಧದ ಹೋರಾಟ ಅಂತಹ ಒಂದು ಜರೂರು. ಇಂತಹ ಚಳವಳಿಗಳನ್ನು "ಅನುಮಾನದಿಂದ ನೋಡಬೇಕಾದ್ದಿಲ್ಲ. ಈ ಚಳವಳಿಯೂ ತಕ್ಷಣದ ಜರೂರನ್ನು ಮೀರಿ ಮೂಲ ಬಾಯಿಲೆಯತ್ತ ಗಮನ ಹರಿಸಬಾರದು ಎಂದೇನಿಲ್ಲ. ಅನೇಕ ಚಳವಳಿಗಳು ಹಾಗೆ ಬೆಳೆದ ಉದಾಹರಣೆಗಳು ನಮ್ಮ ಮುಂದಿವೆ" ಎಂಬ ನಾಟಕಕಾರ, ಪ್ರಸನ್ನ ಅವರ ಮಾತುಗಳು (ನೋಡಿ: ವಿಜಯ ಕರ್ನಾಟಕ 'ಚಿತ್ರಭಾನು' ಅಂಕಣ 4-09-2001) ಹೆಚ್ಚು ಪ್ರಸ್ತುತ ಅನಿಸುತ್ತವೆ.

ಕನ್ನಡ ಸಾಹಿತ್ಯ ವಲಯದ ಪ್ರತಿಕ್ರಿಯೆ:

ಹಾಗಾದರೆ ಬುದ್ಧಿಜೀವಿಗಳು, ಸಾಹಿತಿಗಳೂ ಹಾಗೆಯೋಚಿಸುತ್ತಾರೆಯೆ? "ಕರ್ನಾಟಕದ ಬುದ್ಧಿಜೀವಿಗಳು, ಸಾಹಿತಿಗಳ ಪ್ರತಿಕ್ರಿಯೆ ಅಣ್ಣಾ ಹಜಾರೆಯವರನ್ನು ಅನುಮಾನದಿಂದಲೂ, ವಿರೋಧದಿಂದಲೂ ಕಾಣುತ್ತಿದೆಯಲ್ಲ? ಕರ್ನಾಟಕದ ಬುದ್ಧಿ ಜೀವಿಗಳು ಇಂತಹ ಪ್ರತಿಕ್ರಿಯೆಗಳು ಸ್ವೀಕಾರಾರ್ಹವಲ್ಲವೆ? "ಜ್ಞಾನ ವಿಚಾರಶಕ್ತಿ ಹಾಗೂ ಚಿಂತನೆ ಪರಸ್ಪರ ಚರ್ಚೆ, ವಿಚಾರ ಮಂಥನ ಹಾಗೂ ವಾಗ್ವಾದಗಳಲ್ಲಿ ಬೆಳೆಯುತ್ತದೆ ಎಂಬ ನಂಬಿಕೆ ಉಳ್ಳವರೆಲ್ಲ

ಇಂತಹ ಪ್ರಶ್ನೆಗಳನ್ನು ಕೇಳಿಕೊಂಡು ಅದಕ್ಕೆ ಉತ್ತರ ಹುಡುಕಲು ಪ್ರಯತ್ನಿಸಬೇಕು. ಚಳವಳಿ ಸಂದರ್ಭದಲ್ಲಿ ಬಂದ ಕನ್ನಡ ಬುದ್ಧಿ ಜೀವಿಗಳ ಚಿಂತನೆಯ ಗುಣ ಹೇಗೆ ಇರಲಿ ಅಂತಹ ಚರ್ಚೆ ಸಾರ್ವಜನಿಕ ಆರೋಗ್ಯಕ್ಕೆ ಮುಖ್ಯ."

ಮೊದಲನೆಯದಾಗಿ ನಾವು ಯಾವೆಲ್ಲಾ ಬುದ್ಧಿಜೀವಿಗಳು ಏನೆಲ್ಲಾ ಹೇಳಿದರು ಎಂಬುದನ್ನು ಗಮನಿಸಿ ಅವರ ವಿಚಾರಗಳನ್ನು ಹೇಗೆ ಅರ್ಥ ಮಾಡಿಕೊಳ್ಳಬೇಕು ಎಂಬುದನ್ನ ಗಮನಿಸಬಹುದು. ಡಾ। ಯು.ಆರ್. ಅನಂತಮೂರ್ತಿ ಪ್ರೊ। ಚಂಪಾ, ದೇವನೂರು ಮಹಾದೇವ, ಡಾ। ಕೆ. ಮರುಳಸಿದ್ಧಯ್ಯ, ಪ್ರಸನ್ನ, ವೈದೇಹಿ. ಕೆ.ವಿ. ಅಕ್ಷರ, ರಾಮಚಂದ್ರ ಗುಹಾ ಅವರ ಅನುವಾದಿತ ಅಂಕಣ, ಟಾಬ್ಲೋಡ್ ದಿನಪತ್ರಿಕೆಗಳು ಮೊದಲಾದೆಡೆ ಬಂದ ಇನ್ನೂ ಅನೇಕ ಬರಹಗಳನ್ನು ನಾವು ಗಮನಿಸಬಹುದು. ಟೆಲಿವಿಷನ್ ಸಂವಾದಗಳನ್ನೂ ಸೇರಿಸಿಕೊಂಡರೆ ಈ ಪಟ್ಟಿ ಇನ್ನಷ್ಟು ಉದ್ದವಾಗಿ ಅದೊಂದು ಪಿ.ಎಚ್.ಡಿ. ಸಂಶೋಧನೆಗೆ ಸಾಕಾಗುವಷ್ಟು ವಸ್ತುವಾದೀತು. ಅನುಮಾನ, ಆತಂಕ, ವಿರೋಧ ಹಾಗೂ ಒಪ್ಪಿಗೆಗಳ ಮಿಶ್ರ ಪ್ರತಿಕ್ರಿಯೆ ಬುದ್ಧಿಜೀವಿಗಳಿಂದ ಬಂದಿದೆ. ಪ್ರೊ। ಚಂಪಾ ಹಾಗೂ ನಾಟಕಕಾರ ಪ್ರಸನ್ನ ಅವರ ವಿಚಾರಗಳನ್ನು ಈಗಾಗಲೆ ಲೇಖನದಲ್ಲಿ ಪ್ರಸ್ತಾಪ ಮಾಡಿ ಆಗಿದೆ. ಹಾಗಾಗಿ ಅದರ ಪುನರಾವರ್ತನೆ ಅಗತ್ಯವಿಲ್ಲ. ಪ್ರಾತಿನಿಧಿಕವಾಗಿ ಅವುಗಳು ಸೂಚಿಸುವ ಪ್ರತ್ಯೇಕ ಗುಣಗಳಿಗಾಗಿ ಕೆ.ವಿ. ಅಕ್ಷರ, ದೇವನೂರು ಮಹಾದೇವ, ವೈದೇಹಿ ಹಾಗೂ ಯು.ಆರ್. ಅನಂತಮೂರ್ತಿ ಈ ಸಂದರ್ಭದಲ್ಲಿ ಹೇಳಿದ ವಿಚಾರಗಳನ್ನು ಚರ್ಚಿಸಬಹುದೆಂದು ತೋರುತ್ತದೆ.

ಪ್ರೇಕ್ಷಕ ಮತ್ತು ವೀಕ್ಷಕ

ಕೆ.ವಿ. ಅಕ್ಷರ 'ಮಯೂರ' ಪತ್ರಿಕೆಯ ತಮ್ಮ ಅಂಕಣದಲ್ಲಿ ನಾಟಕ ನೋಡುವವರನ್ನು ಪ್ರೇಕ್ಷಕ ಹಾಗೂ ವೀಕ್ಷಕ ಎಂಬ ಎರಡು ವಿಭಾಗಗಳಲ್ಲಿ ಗುರುತಿಸುತ್ತಾರೆ. ಪ್ರೇಕ್ಷಕರು ನಾಟಕದಲ್ಲಿ ಭಾಗವಹಿಸುವವರು ಅಥವಾ ನೋಡುತ್ತಾ ತೊಡಗಿಕೊಳ್ಳುವವರು. ವೀಕ್ಷಕರು ಕೇವಲ ಮನರಂಜನೆಯ ಉದ್ದೇಶದಿಂದ ನೋಡುವವರು. ಗಂಭೀರ ಪ್ರೇಕ್ಷಕರಲ್ಲ. ಅಕ್ಷರ ಹೇಳುವ ಪ್ರಕಾರ ಅಣ್ಣಾ ಹಜಾರೆ ಚಳವಳಿ ಟಿ.ವಿ. ಮೊದಲಾದ ಮಾಧ್ಯಮಗಳ ಮೂಲಕ ವೀಕ್ಷಕರಾಗಿ ಭಾಗವಹಿಸಿದವರ ಚಳವಳಿ. ಒಂದು ರೀತಿಯಲ್ಲಿ ಮಾಧ್ಯಮದ ಕೃತಕ ಸೃಷ್ಟಿ.

ಅಕ್ಷರ ಅವರ ಈ ವಿಚಾರವನ್ನು ಒಪ್ಪುವುದು ಕಷ್ಟ. ನಿಜದಲ್ಲಿ ಪ್ರಜಾಪ್ರಭುತ್ವ ಅಷ್ಟು ಸರಳವಾಗಿ ಇರುವುದಿಲ್ಲ. ದೊಡ್ಡ ಚಳವಳಿಯಲ್ಲಿ ಬಹು ಸಂಖ್ಯಾತರು ಏಕಕಾಲಕ್ಕೆ ಪ್ರೇಕ್ಷಕರೂ ವೀಕ್ಷಕರೂ ಆಗಿರುತ್ತಾರೆ. ತಮ್ಮ ನಿತ್ಯ ಜೀವನದಲ್ಲಿ ಇದ್ದುಕೊಂಡೇ ತೊಡಗಿಕೊಳ್ಳುವವರ ಸಂಖ್ಯೆ ದೊಡ್ಡದಿರುತ್ತದೆ. ಅವರ ಕ್ರಿಯೆ ಮತದಾನದ ಆಯ್ಕೆಯಲ್ಲಿ ಪ್ರಕಟಗೊಳ್ಳುತ್ತದೆ. ಇನ್ನು ಕೆಲವೊಮ್ಮೆ ಅಣ್ಣಾ ಹಜಾರೆ ಸಂದರ್ಭದಲ್ಲಿ ಆದಂತೆ.ಸ್ವಲ್ಪ ಹೊತ್ತಾದರೂ ಬೀದಿಗಿಳಿದು ಪ್ರತಿಭಟಿಸುವುದರಲ್ಲಿ ಕ್ರಿಯೆಯಾಗಿ ಮಾರ್ಪಡುತ್ತದೆ. ಅಭಿಪ್ರಾಯ ಸ್ವಾತಂತ್ರ್ಯವುಳ್ಳ ದೇಶದಲ್ಲಿ ಜನ ಪರಸ್ಪರ ಮಾತನಾಡುವುದು ನಾನಾ ರೀತಿಯಲ್ಲಿ ಅಭಿಪ್ರಾಯ ವ್ಯಕ್ತ ಪಡಿಸುವುದು ಮಾಧ್ಯಮಗಳ ಚರ್ಚೆಗಳನ್ನು ಕೇಳುವುದು. ಇಂಟರ್‌ನೆಟ್ ಮೊದಲಾದ ಮಾಧ್ಯಮಗಳಲ್ಲಿ ಪ್ರತಿಕ್ರಿಯೆ ನೀಡುವುದು. ತಂತ್ರಜ್ಞಾನವನ್ನು ಬಳಸಿ ಪ್ರತಿಕ್ರಿಯೆ ನೀಡುವುದು (ಉದಾ. ಮಿಸ್‌ಡ್ ಕಾಲ್. ಎಸ್‌ಎಮ್‌ಎಸ್ ಇತ್ಯಾದಿ) ಕೂಡಾ ಸಂಕೀರ್ಣವಾದ ಕ್ರಿಯೆಯೇ ಆಗುತ್ತದೆ. ಅವೆಲ್ಲವೂ ಪ್ರತಿಭಟನೆಯಲ್ಲಿ ಭಾಗವಹಿಸುವ ವಿವಿಧ ರೂಪಗಳಷ್ಟೆ. ಬೀದಿಗಿಳಿದು ಘೋಷಣೆ ಕೂಗುವಷ್ಟೆ

ಮಹತ್ವವಾದ್ದು ಪ್ರತಿ ಜಗತ್ತಿನಲ್ಲಿ (ಇಂಟರ್‌ನೆಟ್ ಸೃಷ್ಟಿಸಿರುವ Virtual worldನಲ್ಲಿ) ಕ್ರಿಯೆಗಳು ನಡೆಯುತ್ತವೆ. ಕೆಲಸಗಳಾಗುತ್ತವೆ. ಅಲ್ಲಿಯೂ ಅಭಿಪ್ರಾಯ ಹಾಗೂ ವಿಚಾರ ಸೃಷ್ಟಿ ನಡೆಯುತ್ತದೆ. ಹೆಚ್ಚು ಜನರಿಗೆ ಮಾತು ಕೇಳಿಸಲು ಧ್ವನಿ ವರ್ಧಕದ ಬಳಕೆಯಾದಂತೆ ಮತ್ತಷ್ಟು ಜನರಿಗೆ ತಲುಪಲು ಇನ್ನೊಂದು ತಂತ್ರಜ್ಞಾನವಾದ ಇಂಟರ್‌ನೆಟ್ ಬಳಕೆಯಾಗುತ್ತದೆ. ಅದೊಂದು ಹೊಸ ಮಾಧ್ಯಮವಷ್ಟೆ. ಅದನ್ನು ಬಳಸುವ ವರ್ಗ ಸಮುದಾಯಗಳ ಗುಣ ಲಕ್ಷಣಗಳು ಬೇರೆ. ಸಂಪಾದಕರಿಗೆ ಬರೆದ ಪತ್ರಗಳಂತೆ ಇದೂ ಒಂದು ಜನಾಭಿಪ್ರಾಯ ಸೂಚಿ.

ಚಳವಳಿಕಾರರ ಮಾಧ್ಯಮಗಳು ಬೇರೆ ಎಂಬ ಕಾರಣಕ್ಕೆ ಅವರನ್ನು ಮನರಂಜನೆಯ ವೀಕ್ಷಕರೆಂದು ತಿಳಿಯುವುದು ಸರಿಯಾಗಲಾರದು. ಮಾಧ್ಯಮಗಳು ಅಣ್ಣಾ ಹಜಾರೆ ಅವರ ಚಳವಳಿಯನ್ನು ಜಾಹೀರಾತಿನ ರೂಪದಲ್ಲಿ ಮಾರಾಟದ ವಸ್ತುವಾಗಿ ನೀಡಿದ್ದಲ್ಲ. ಜನರ ಆಶಯವನ್ನು ಪ್ರತಿಫಲಿಸುವ ರೂಪದಲ್ಲಿ ಪ್ರಚಾರ ಪಡಿಸಿದ್ದು. ಇಷ್ಟಕ್ಕೂ ಮಾಧ್ಯಮಗಳು ಪ್ರಜಾಪ್ರಭುತ್ವದ ನಾಲ್ಕನೇ ಅಂಗ ಎಂಬುದನ್ನೂ ನಾವು ಮರೆಯಬಾರದು.

ಮಾಧ್ಯಮಗಳ ಭಾಗವಹಿಸುವಿಕೆ:

ಅಷ್ಟೇ ಅಲ್ಲದೆ ಮಾಧ್ಯಮಗಳು ಈ ರೀತಿ ಭ್ರಷ್ಟಾಚಾರದ ವಿರುದ್ಧದ ಚಳವಳಿಯಲ್ಲಿ ಭಾಗವಹಿಸುವುದಕ್ಕೂ ಒಂದು ಕಾರಣವಿದೆ. ಕಳೆದ ಕೆಲವಾರು ವರುಷಗಳಲ್ಲಿ ಅನೇಕ ಮಾಧ್ಯಮ ನಾನಾ ರೀತಿಯಲ್ಲಿ ಮುಖ್ಯವಾದ ಅನೇಕ ಭ್ರಷ್ಟಾಚಾರ ಕರ್ಮಕಾಂಡಗಳನ್ನು ಹೊರಗೆಡವಿದವು. ಎಷ್ಟೋ ದೊಡ್ಡ ಹಗರಣಗಳು ಮಾಧ್ಯಮಗಳ ಮೂಲಕ ಹೊರಬಂದು ಜನರಿಗೆ ತಲುಪಿದೆ. ಕೆಲವಾರು ಪ್ರಕರಣಗಳಲ್ಲಿ ಭ್ರಷ್ಟಾಚಾರದ ಬಗ್ಗೆ ಸರಕಾರ ಕಾನೂನಿನ ಕ್ರಮ ಕೈಗೊಳ್ಳಲೂ ಮಾಧ್ಯಮಗಳ ಕೊಡುಗೆ ದೊಡ್ಡದಿದೆ. ಅದು ಮಾಧ್ಯಮಗಳ ಜನಾಭಿಪ್ರಾಯ ಸೃಷ್ಟಿಯ ಪಾತ್ರ.

ಆದರೆ, ಪ್ರತಿಯೊಂದು ಮುಖ್ಯ ಭ್ರಷ್ಟಾಚಾರವನ್ನೂ ಹಿಂಬಾಲಿಸಿ ಅದರ ಬಗ್ಗೆ ತೆಗೆದುಕೊಂಡ ಕ್ರಮಗಳನ್ನೆಲ್ಲಾ ಮತ್ತೆ ಜನರ ಮುಂದೆ ತಂದು ಸಂಪೂರ್ಣವಾದ ಕ್ರಿಯಾಪ್ರೇರಿತ ಒತ್ತಡ ತರುವುದು ಮಾಧ್ಯಮಗಳಿಗೆ ಸಾಧ್ಯವಾಗಲಿಲ್ಲ. ನಿತ್ಯದ ವರ್ತಮಾನಗಳಲ್ಲಿ ಹಾರಾಡುತ್ತಾ ದೊಡ್ಡ ಭ್ರಷ್ಟಾಚಾರಗಳತ್ತ ಗಮನ ಸೆಳೆಯುವುದು ಮಾತ್ರ ಸಾಧ್ಯವಾಗಿತ್ತು. ಅಂದರೆ, ಭ್ರಷ್ಟಾಚಾರವನ್ನು ಜನರಿಗೆ ತಿಳಿಸುವ ಒಂದು ಕೆಲಸ ಮಾಡುವುದು ಮಾತ್ರ ಮಾಧ್ಯಮಗಳಿಗೆ ಸಾಧ್ಯವಾಯಿತು. ಅದರ ವಿರುದ್ಧದ ಕಾರ್ಯಾಚರಣೆಗೆ ಬೇಕಾದ ಕ್ರಿಯೆಯನ್ನು ನಿರ್ಮಿಸುವುದು ಮಾಧ್ಯಮಗಳಿಗೆ ಸಾಧ್ಯವಾಗಿರಲಿಲ್ಲ. ಅಂದರೆ ಒಂದು ಚಳವಳಿಯನ್ನು ಹುಟ್ಟು ಹಾಕುವುದು ಮಾಧ್ಯಮಗಳಿಗೆ ಸಾಧ್ಯವಿರಲಿಲ್ಲ.

ಇಂತಹ ಸಂದರ್ಭದಲ್ಲಿ ಅಣ್ಣಾ ಹಜಾರೆಯವರ ನಾಯಕತ್ವದಲ್ಲಿ ಭ್ರಷ್ಟಾಚಾರದ ವಿರುದ್ಧ ಒಂದು ಚಳವಳಿ ಹುಟ್ಟಿತು. ಅದರ ಬೀಜರೂಪ ಮಾಧ್ಯಮಗಳ ಹಿಂದಿನ ಅನೇಕ ವರದಿಗಳಲ್ಲಿ ಇತ್ತು. ಆ ತಾತ್ವಿಕತೆ ಗಿಡವಾಗಿ ಚಳವಳಿ ರೂಪದಲ್ಲಿ ಬೆಳೆದಾಗ ಮಾಧ್ಯಮಗಳ ಮೂಲ ವರದಿಗಳು ಜನರ ಆಶಯವಾಗಿ ಪರಿವರ್ತನೆ ಹೊಂದಿದ್ದವು. ಟು-ಜಿ (2G) ಪ್ರಕರಣ, ಬೋಫೋರ್ಸ್ ಪ್ರಕರಣ ಮೊದಲಾದ ವರದಿಗಳ. ಪ್ರಜಾಪ್ರಭುತ್ವ ಮಾದರಿಯ ಪರಿವರ್ತನೆ ಚಳವಳಿಯ ರೂಪದಲ್ಲಿ ನಡೆಯತೊಡಗಿತ್ತು ಎಂಬುದು ಕೂಡಾ ವಿಶ್ಲೇಷಿಸಬಹುದಾದ

ಒಂದು ಕ್ರಮವೇ ಆಗಿದೆ. ಆದುದರಿಂದ ಅಣ್ಣಾ ಹಜಾರೆ, ಚಳವಳಿ ಹಾಗೂ ಮಾಧ್ಯಮಗಳನ್ನು ಪ್ರತ್ಯೇಕವೆಂದು ಪರಿಗಣಿಸುವುದು ನಮ್ಮ ಪ್ರಜಾಪ್ರಭುತ್ವದ ಹಾಗೂ ಸಾರ್ವಜನಿಕ ಲೋಕದ ಸಮಂಜಸವಾದ ತಿಳುವಳಿಕೆ ಎನ್ನಲಾಗುವುದಿಲ್ಲ.

ಇನ್ನೊಂದು ಮೇಲಾಂಗ:

ದೇವನೂರು ಮಹಾದೇವ ಅವರ ವಿಚಾರ ಪತ್ರಿಕಾ ವರದಿಗಳ ಮೂಲಕ ತಿಳಿಯಿತು. ಅಣ್ಣಾ ಚಳವಳಿ ಬಗ್ಗೆ "ಪ್ರಜಾಸತ್ತಾತ್ಮಕ ವ್ಯವಸ್ಥೆಯ ಮೇಲೆ ಸವಾರಿ. ಪ್ರಗತಿಪರ ಸಂಘಟನೆಗಳ ಒಕ್ಕೂಟದ ಖಂಡನೆ" ಎಂಬ ವರದಿ ಪತ್ರಿಕೆಗಳಲ್ಲಿ ಪ್ರಕಟವಾಗಿದೆ. (ನೋಡಿ: ಪ್ರಜಾವಾಣಿ, ಬೆಂಗಳೂರು ಆವೃತ್ತಿ, ದಿನಾಂಕ 25-08-2001) ಆ ವರದಿಯಲ್ಲಿ ನಮ್ಮ ಮುಖ್ಯ ಚಿಂತಕರಲ್ಲಿ ಒಬ್ಬರಾದ ದೇವನೂರು ಮಹಾದೇವ "ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗಕ್ಕೆ 'ಮೇಲಾಂಗ'ವಾಗಿ ಈ ಮಸೂದೆಯೇನಾದರೂ ಜಾರಿಯಾದರೆ ಕಾರ್ಪೊರೇಟ್ ಸಂಸ್ಥೆಗಳು, ಬಹುರಾಷ್ಟ್ರೀಯ ಕಂಪೆನಿಗಳಿಗೆ ಕಡಿವಾಣ ಇಲ್ಲದಂತಾಗುತ್ತದೆ. ದೇಶ ಇಡುತ್ತಿರುವ ಹೆಜ್ಜೆಯಿಂದಾಗಿ ಪ್ರಜಾಪ್ರಭುತ್ವದ ಆಧಾರ ಸ್ತಂಭಗಳು ಇಕ್ಕಟ್ಟಿಗೆ ಸಿಲುಕಿ ಯಾರದೋ ಗುಲಾಮರಾಗಬೇಕಾಗುತ್ತದೆ" ಎಂದು ಹೇಳಿದರೆಂದು ವರದಿಯಾಗಿದೆ.

ಪ್ರಭುತ್ವದ ಶಕ್ತಿಯು ನ್ಯಾಯಾಂಗ, ಕಾರ್ಯಾಂಗ, ಶಾಸಕಾಂಗಗಳಲ್ಲಿ ಹಂಚಿಕೊಂಡು ಒಂದು ಇನ್ನೊಂದನ್ನು ನಿಯಂತ್ರಿಸುತ್ತಾ ಸಮತೋಲನವನ್ನು ಕಾಯ್ದುಕೊಂಡು ಯಾವುದೇ ಒಂದು ಅಂಗ ಇನ್ನೊಂದನ್ನು ಸರ್ವಾಧಿಕಾರಿ ಶಕ್ತಿ ಸಂಚಯ ಮಾಡಿಕೊಳ್ಳಲು ಬಿಡಬಾರದು ಎಂಬುದು ನಮ್ಮ ಆಶಯ. ಕಾರ್ಯಾಂಗ ಎಮರ್ಜೆನ್ಸಿ ಮೂಲಕ ತುರ್ತುಪರಿಸ್ಥಿತಿ ಕಾಲದಲ್ಲಿ ಸರ್ವಾಧಿಕಾರ ಸ್ಥಾಪನೆಗೆ ಹೊರಟಾಗ ಶಾಸಕಾಂಗದ ಆಯ್ಕೆಯ ನಿಯಂತ್ರಕ ಶಕ್ತಿಯಿಂದಾಗಿ ಸರ್ವಾಧಿಕಾರಿ ಪ್ರಯತ್ನಕ್ಕೆ ಸೋಲಾಗಿ ಪುನಃ ಸಂವಿಧಾನದ ಸಮತೋಲ ಆಶಯ ಸ್ಥಾಪಿತವಾಯಿತು. ಇದು ನಮ್ಮ ಸಂವಿಧಾನ ಕರ್ತೃಗಳಿಗೆ ಸಂದ ಅತ್ಯಂತ ದೊಡ್ಡ ಗೌರವ.

ದೇವನೂರು ಮಹಾದೇವ ಜನಲೋಕಪಾಲ ಮಸೂದೆಯನ್ನು 'ಮೇಲಾಂಗ' ಎಂದಾಗ ಇತರ ಮೂರು ಅಂಗಗಳನ್ನು ನಿಯಂತ್ರಿಸುವ ಪ್ರತ್ಯೇಕ ಶಕ್ತಿಯಾಗಿ ಸಮತೋಲ ತತ್ವಕ್ಕೆ ವಿರುದ್ಧವಾದ ಮಸೂದೆ ಎಂಬ ಕಲ್ಪನೆ ಇದೆ. ನ್ಯಾಯಾಂಗವೂ ಲೋಕಪಾಲ ನಿಯಂತ್ರಣಕ್ಕೆ ಒಳಪಟ್ಟಿದ್ದರೆ ಅಂತಹ ಅಪಾಯ ಉಂಟಾಗುತ್ತಿತ್ತೋ ಏನೋ? ಆದರೆ 'ಮೇಲಾಂಗ' ಕಲ್ಪನೆ ಸಂವಿಧಾನದ ಮೂಲಭೂತ ಸ್ವರೂಪಕ್ಕೆ ವಿರೋಧವಾದಲ್ಲಿ ಅಂತಹ ಎಲ್ಲಾ ಸೆಕ್ಷನ್‌ಗಳನ್ನೂ ಸಂವಿಧಾನ ವಿರೋಧಿ ಎಂದು ನಮ್ಮ ನ್ಯಾಯಾಂಗ ರದ್ದು ಗೊಳಿಸುತ್ತಿತ್ತು. ನ್ಯಾಯಾಂಗದ ಬಗ್ಗೆ ಅಂತಹ ವಿಶ್ವಾಸ ಇನ್ನೂ ನನ್ನಲ್ಲಿ ಉಳಿದಿದೆ.

ಗೊಂದಲಗಳಿಗೆ ಕಾರಣ:

ಇಂತಹ ಕೆಲವು ಗೊಂದಲಗಳು ಜನಲೋಕ ಪಾಲ ಮಸೂದೆಯಲ್ಲಿ ಉಳಿಯಲು ಸರ್ಕಾರವೇ ಕಾರಣ. ಏಪ್ರಿಲ್ ತಿಂಗಳಲ್ಲಿ ಅಣ್ಣಾ ಹಜಾರೆಯವರ ಉಪವಾಸ ಸತ್ಯಾಗ್ರಹವನ್ನು ನಿಲ್ಲಿಸಲು ಮಸೂದೆಯನ್ನು ರಚಿಸುವ ಸ್ಟಾಂಡಿಗ್ ಕಮಿಟಿಯಲ್ಲಿ ನಾಗರಿಕ ವೇದಿಕೆಗೆ ಅವಕಾಶ ನೀಡಲಾಯಿತು. ಆದರೆ ನಾಗರಿಕ ಸದಸ್ಯರ ಅಭಿಪ್ರಾಯವನ್ನು ಸ್ಟಾಡಿಂಗ್ ಕಮಿಟಿಯು

ವಕೀಲ ಮಂತ್ರಿಗಳು ಸಂಪೂರ್ಣ ಕಡೆಗಣಿಸಿ ಮಾತುಕತೆಯೇ ಸಾಧ್ಯವಾಗದೆ ಹೋಯಿತು. ಇದರಿಂದಾಗಿ ಸ್ಟಾಂಡಿಂಗ್ ಕಮಿಟಿಯಲ್ಲಿ ಸಹಮತ ಮೂಡದೆ ಸಂಘರ್ಷದ ವಾತಾವರಣ ಉಂಟಾಯಿತು.

ಯಾವತ್ತೂ ಪ್ರಜಾಪ್ರಭುತ್ವದ ಸಂಘರ್ಷ ಕೊಡು ಕೊಳೆಯ ಮಾರ್ಗ. ಪ್ರಭುತ್ವದ ಶಕ್ತಿಯನ್ನು ಧಿಕ್ಕರಿಸಿ ನೂರು ಕೇಳಿದಾಗ ಐವತ್ತು ಸಿಗುತ್ತದೆ. ಹತ್ತು ಹೆಜ್ಜೆ ಮುಂದೆ ಹೋಗಿ ಆರೋ ಏಳೋ ಹೆಜ್ಜೆ ಹಿಂದೆ ಬರಬೇಕಾಗುತ್ತದೆ. ಅಣ್ಣಾ ಹಜಾರೆ ಚಳವಳಿಯಲ್ಲೂ ಆಗಿರುವುದು ಹಾಗೆಯೇ. ಕೊನೆಗೂ ರಾಜಿ ಇಲ್ಲದ ಮೂರು ಅಂಶಗಳಿಗೆ ಅಣ್ಣಾ ಇಳಿಯಬೇಕಾಯಿತು. ಅವೆಂದರೆ ರಾಜ್ಯದಲ್ಲೂ ಲೋಕಾಯುಕ್ತ ನಾಗರಿಕ ಸಂಹಿತೆ (Citizens charter ಅಂದರೆ ಪ್ರಜೆಗಳ ಆಕ್ಷೇಪಕ್ಕೆ ಉತ್ತರದಾಯಿತ್ವ) ಹಾಗೂ ಕೆಳಹಂತದ ಸರ್ಕಾರಿ ಅಧಿಕಾರಿಗಳು ಭ್ರಷ್ಟಾಚಾರ ಕಾನೂನಿಗೆ ಒಳಪಡಬೇಕು.

ರಾಜಿ ಇಲ್ಲದ ಮೂರು:

ರಾಜಿ ಇಲ್ಲದ ಮೂರರಲ್ಲಿ ನ್ಯಾಯಾಂಗ ಹಾಗೂ ಪ್ರಧಾನ ಮಂತ್ರಿ ಸೇರಲಿಲ್ಲ. ಕೆಳಹಂತದ ಸರ್ಕಾರಿ ನೌಕರ ಸೇರಿರುತ್ತಾನೆ ಎಂಬುದೇ ಬಹಳ ಮುಖ್ಯ. ಸರ್ಕಾರಿ ನೌಕರನ ಜೊತೆ ಪ್ರಜೆಯೊಬ್ಬ ತನ್ನ ಹಕ್ಕಿಗಾಗಿ ಹೋರಾಟಕ್ಕೆ ಇಳಿದಾಗ (ಉದಾಹರಣೆಗೆ ಒಂದು ತಿಂಗಳ ಒಳಗೆ ಪಡಿತರ ಚೀಟಿಯನ್ನು ಕೊಡದೇ ಇದ್ದಾಗ) ಪ್ರಜೆ ತನ್ನ ಖಾಸಗಿ ಹಣ, ಶಕ್ತಿ, ಸಮಯ ವಿನಿಯೋಗಿಸಿ ಹೋರಾಡಬೇಕು. ಸರ್ಕಾರಿ ನೌಕರನ ಹಿಂದೆ ಪ್ರಭುತ್ವದ ಶಕ್ತಿ ನಿಂತು ಪ್ರಜೆಯನ್ನು ದಮನ ಮಾಡುತ್ತಿರುತ್ತದೆ. ಸರ್ಕಾರಿ ನೌಕರನಿಗೆ ಸರಕಾರಿ ವಕೀಲರು, ಸಂಬಳ ಸಹಿತ ಕೆಲಸದ ಸಮಯ, ಸರ್ಕಾರಿ ಖರ್ಚಿನಲ್ಲಿ ಪ್ರಜೆ ವಿರುದ್ಧ ಹೋರಾಟಕ್ಕೆ ಪ್ರಯಾಣ ಭತ್ಯೆ ಎಲ್ಲವೂ ಸಿಗುತ್ತಿರುತ್ತದೆ.ಭ್ರಷ್ಟಾಚಾರದ ಹೋರಾಟದ ನ್ಯಾಯದ ಎದುರು ಸರ್ಕಾರವನ್ನೂ ಪ್ರಜೆಯನ್ನೂ ಹೋರಾಟದಲ್ಲಿ ಸಮಾನವಾಗಿ ಕಾಣಬಲ್ಲ ಸಮಾನ ಹೋರಾಟದ ಕಣವನ್ನು (Equal playing ground) ಜನ ಲೋಕಪಾಲ ಮಸೂದೆ ಸ್ಥಾಪಿಸಲು ಪ್ರಯತ್ನಿಸುತ್ತದೆ. ಕೆಳಹಂತದಲ್ಲಿ ಸರ್ಕಾರಿ ನೌಕರನ ಉತ್ತರದಾಯಿತ್ವದ ಭಾಗವಾಗಿ ಶಿಕ್ಷೆಯಲ್ಲಿ ನೌಕರನ ಸಂಬಳದಿಂದ ಹಣ ಹಿಡಿಯುವ ಅವಶ್ಯಕತೆಯನ್ನು ಮಸೂದೆ ಸ್ಥಾಪಿಸುತ್ತದೆ. ಆ ತತ್ವಕ್ಕೆ ಪೂರಕವಾದ ಅನೇಕ ತೀರ್ಪುಗಳನ್ನು ನಮ್ಮ ನ್ಯಾಯಾಲಯಗಳು ಈಗಾಗಲೆ ಕೆಲವು ವ್ಯಾಜ್ಯಗಳಲ್ಲಿ ನೀಡಿವೆ ಎಂಬುದನ್ನು ನಾವು ಗಮನಿಸಿದರೆ, ಜನಲೋಕಪಾಲ ಮಸೂದೆಯ ಈ ತತ್ವ ನ್ಯಾಯತತ್ವಕ್ಕೆ ವಿರೋಧವಾಗಿ ಇಲ್ಲ ಎಂಬುದನ್ನು ನಾವು ಗಮನಿಸಬಹುದು.

ನಮ್ಮ ಸಂವಿಧಾನ ವ್ಯವಸ್ಥೆ 'ಮೇಲಾಂಗ' ತತ್ವ ಮೊದಲ ಭಾಗದಲ್ಲೂ ಪ್ರಸ್ಥಾಪಿಸಿರುವುದರಿಂದ ಅದರ ಪುನರ್ ವ್ಯಾಖ್ಯಾನ ಇನ್ನೊಮ್ಮೆ ಅಗತ್ಯವಿಲ್ಲ. ಇನ್ನು ಭ್ರಷ್ಟಾಚಾರದ ವಿರೋಧದ ಈ ಶಾಸನ ಲೋಕಪಾಲರ ಕೈಯಲ್ಲಿ ಕಾರ್ಯಾಂಗದ (ವಿಚಾರಣೆ ಮಾಡುವ) ಹಾಗೂ ನ್ಯಾಯಾಂಗದ (ಶಿಕ್ಷೆ ವಿಧಿಸುವ) ಅಧಿಕಾರವನ್ನು ಒಟ್ಟಾಗಿ ನೀಡುವುದರಿಂದ ಅದು ಪ್ರಜಾಪ್ರಭುತ್ವದ ಆಧಾರ ಸ್ತಂಭವನ್ನು ಇಕ್ಕಟ್ಟಿಗೆ ಸಿಲುಕಿಸುತ್ತದೋ ಎಂಬುದು ಇನ್ನೊಂದು ಪ್ರಶ್ನೆ. ಈ ವಿಚಾರ ಆಡಳಿತ ಹಾಗೂ ಕಾನೂನು ತಜ್ಞರ ನೆಲೆಯಲ್ಲಿ ದೀರ್ಘ ಅಧ್ಯಯನ ವಸ್ತುವಾಗಬಲ್ಲದು. ಆದರೆ ನಮ್ಮ ಮೂಲಭೂತ ಹಕ್ಕಿನ ಪ್ರಕಾರ ನಮಗೆ ಲೋಕಪಾಲರ ನಿರ್ಣಯದ ಮೇಲೆ ನ್ಯಾಯಾಂಗಕ್ಕೆ ರಿಟ್ ಅರ್ಜಿ ಸಲ್ಲಿಸುವ ಅಧಿಕಾರ

ಸಂವಿಧಾನ ನೀಡುವುದರಿಂದ ಎಂತಹ ಲೋಕಪಾಲ ಮಸೂದೆಯಾದರೂ ಪ್ರಜಾಪ್ರಭುತ್ವದ ಆಧಾರಸ್ತಂಭ ಮುರಿದು ಬೀಳಲು ಸಾಧ್ಯವಿಲ್ಲ. ನಮ್ಮ ಪ್ರಜಾಪ್ರಭುತ್ವದಲ್ಲಿ ಪ್ರಜೆಗಳ ರಕ್ಷಣೆ ಹಾಗೂ ಕಾರ್ಯಾಂಗದ ದಕ್ಷತೆ ಎರಡಕ್ಕೂ ಅವಕಾಶ ನೀಡಿರುವ ನಮ್ಮ ಸಂವಿಧಾನ ರಚನೆಯ ಬಗ್ಗೆ ನಾವು ಎಷ್ಟು ಕೃತಜ್ಞರಾದರೂ ಸಾಲದು.

ಇನ್ನು ಭ್ರಷ್ಟಾಚಾರ ವಿರೋಧಿ ಕಾನೂನು ತಾತ್ವಿಕವಾಗಿ ಕಾರ್ಪೊರೇಟ್ ಸಂಸ್ಥೆಗಳು ಹಾಗೂ ಬಹುರಾಷ್ಟ್ರೀಯ ಕಂಪೆನಿಗಳಿಗೆ ಕಡಿವಾಣ ಇಲ್ಲದಂತೆ ಮಾಡುತ್ತದೆ ಎಂಬ ವಾದ ದೇವನೂರು ಮಹಾದೇವರು ಹೇಳಿದ್ದೋ ಅಥವಾ ವರದಿಗಾರರ ತಪ್ಪು ಗ್ರಹಿಕೆಯೋ ಹೇಳಲು ಸಾಧ್ಯವಿಲ್ಲ. ನಿಜದಲ್ಲಿ ಅಂತಹ ಒಂದು ಮಸೂದೆ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಬೇಕು. ಭ್ರಷ್ಟಾಚಾರಿಗಳು ಅಥವಾ ಅದಕ್ಷರು ಲೋಕಪಾಲರಾಗಿ ಆಯ್ಕೆಯಾದಾಗ ಮಾತ್ರ ತಪ್ಪುಗಳಾಗಬಹುದು. ಲೋಕಪಾಲರೇ ಭ್ರಷ್ಟಾಚಾರಿಗಳಾದರೆ ಆಗ ಇನ್ನೊಂದು ಹೋರಾಟ ಅನಿವಾರ್ಯ. ಹೆಚ್ಚೆಂದರೆ ಇಂತಹ ಒಂದು ಶಾಸನ ಕುರುಡಾದ ಕಾನೂನಿನ ಆಡಳಿತ(Blind Rule of Law)ವನ್ನು ಭ್ರಷ್ಟಾಚಾರದ ವಿರುದ್ಧ ಸ್ಥಾಪಿಸಿ ಸಾಮಾಜಿಕ ಕಳಕಳಿಗೆ ವಿಮುಖವಾಗಬಹುದೆಂದು ವಾದಿಸಬಹುದೇ ಹೊರತು ಕಾರ್ಪೊರೇಟ್ ಸಂಸ್ಥೆಗಳ ಕಡಿವಾಣ ಲೋಕಪಾಲರಿಂದಾಗಿ ತಪ್ಪುತ್ತದೆ ಎಂಬುದು ಸಮಂಜಸವಾದ ವಾದವಾಗಲಾರದು.

ಇಲಿಬೋನು ಸಮಸ್ಯೆ:

ಇದೀಗ ನಾವು ಲೇಖಕಿ ವೈದೇಹಿ ಅವರ ವಿಚಾರವನ್ನು ಗಮನಿಸೋಣ. ಅವರ 'ಹರಿವ ನೀರು' ಅಂಕಣದಲ್ಲಿ (ಪ್ರಜಾವಾಣಿ ಸಾಪ್ತಾಹಿಕ ಪುರವಣಿ 28-08-2011) ಅವರು ಅಣ್ಣಾ ಹಜಾರೆ ಚಳವಳಿಯನ್ನು ತಪ್ಪಿಸಿಕೊಂಡ ಇಲಿ ಹಾಗೂ ಬೋನಿಗೆ ಹೋಲಿಸುತ್ತಾರೆ (ಅಂಕಣದ ಶೀರ್ಷಿಕೆಯೇ 'ಇಲಿಬೋನು'). "ಗ್ಲಾನಿಗೆ ತಕ್ಕಂತೆ 'ಅಣ್ಣಾನಂತಹ ಶ್ರೀಸಾಮಾನ್ಯ ರೂಪಿ' ಅವತರಿಸುವುದು ಸಹಜ ತಾನೆ?" ಎಂದು ವೈದೇಹಿ ಅಣ್ಣಾ ಹಜಾರೆಯವರನ್ನು ಮಾಸ್ಟರ್ ಹಿರಣ್ಣಯ್ಯ ಅವರ ಲಂಚಾವತಾರ ಮತ್ತು ಭ್ರಷ್ಟಾಚಾರ ನಾಟಕಗಳಿಂದ ಪ್ರತ್ಯೇಕಿಸಲು ಕೇಳುತ್ತಾರೆ. "ಯದಾಯದಾಹಿ ಧರ್ಮಸ್ಯ, ಗ್ಲಾನಿರ್ಭವತಿ ಭಾರತ" ಎಂಬ ವಾಕ್ಯವನ್ನು ನೆನಪಿಸಿಕೊಂಡರೆ ವೈದೇಹಿ ಅವರ "ಗ್ಲಾನಿಗೆ ತಕ್ಕಂತೆ" ಪದಪ್ರಯೋಗದ ಹಿಂದಿರುವ ಮನೋಭಾವವನ್ನು ವಿವರಿಸಬೇಕಾಗಿಲ್ಲ. ಡಾ। ಅನಂತಮೂರ್ತಿ ಆ ಮೊದಲೇ 'ಅವತಾರ' ಎಂದು ಕರೆದ ಅಣ್ಣಾ ಕಲ್ಪನೆಯನ್ನು ತಮ್ಮ ಸಂದರ್ಭದಲ್ಲಿ ಅನ್ವಯಿಸಿ "ಸಹಜ ತಾನೆ?" ಎಂಬ ರೆಟರಿಕ್ ಪ್ರಶ್ನೆ ಕೇಳಿದ್ದಾರೆ.

ವೈದೇಹಿಯವರಿಗೆ "ನಮ್ಮ ಭ್ರಮೆ ಹರಿಯಲಿಕ್ಕಾದರೂ" ಸಧ್ಯ ಜನಲೋಕಪಾಲ ಮಸೂದೆ ಸಂಸತ್ತಿನಲ್ಲಿ ಮಂಡನೆಗೆ ಬರಲಿ ಎಂಬುದು ಆಶಯ. ಆದರೆ ಅದರಿಂದ ಆಗುವುದು ಏನು? ಎಂಬುದರ ಬಗ್ಗೆ ಅವರಿಗೆ ಸ್ಪಷ್ಟಕಲ್ಪನೆ ಇದೆ. ಬೋನಿಗೆ ಬಿದ್ದ ಇಲಿ ಮಾಯಕದ ರೀತಿಯಲ್ಲಿ ತಪ್ಪಿಸಿಕೊಳ್ಳುವಂತೆ ಭ್ರಷ್ಟಾಚಾರಿಗಳೆಲ್ಲರೂ ತಪ್ಪಿಸಿಕೊಂಡಾರು. "ಆದರೂ ಬೋನು ಅಂತ ಒಂದು ಇರಲಿ" ಇನ್ನೊಂದು ಇಲಿಯಾದರೂ ಬಿದ್ದೀತು. ವೈದೇಹಿಯವರ ರೂಪಕ ಚಿಂತನೆಯಲ್ಲಿ ಅಣ್ಣಾ ಹಜಾರೆ ಖಾಲಿಯಾದ ಇಲಿಬೋನು. ಹೆದರಿಕೆಗಾದರೂ ಅದೊಂದು ಇರಲಿ ಎಂಬುದಷ್ಟೆ ಆಶಯ.

ಪ್ರಭುತ್ವ ಶಕ್ತಿಯ ಬಗ್ಗೆ ಸಮಗ್ರ ಚಿಂತನೆ ಇಲ್ಲದ ಮುಗ್ಧವಾದೊಂದು ಪ್ರತಿಕ್ರಿಯೆ ಇದು. ಆದರೂ ವೈದೇಹಿಯವರ ಅಭಿಪ್ರಾಯವನ್ನು ಮಾನವಿಕ ಶಾಸ್ತ್ರಗಳ ವಿಚಾರದಲ್ಲಿ ಸಾಹಿತಿಗಳ ರೂಪಕ ನಿಷ್ಠ ಚಿಂತನೆಯ ಮಿತಿಗಳನ್ನು ತೋರಿಸುವುದಕ್ಕಾಗಿ ಆಯ್ದುಕೊಂಡಿದ್ದೇನೆ. ಪ್ರಭುತ್ವದ ರಾಜ್ಯವ್ಯವಸ್ಥೆ, ಆರ್ಥಿಕತೆ, ಪ್ರಜೆಗಳ ಸ್ವಾತಂತ್ರ್ಯ, ಅಧಿಕಾರದ ನಿಯಂತ್ರಣ, ಜಾಗತೀಕರಣದ ಪ್ರಭಾವ ಮೊದಲಾದ ಹಿನ್ನೆಲೆಯಲ್ಲಿ ಸಂಕೀರ್ಣವಾಗಿದೆ. ಅಂತಹ ಸಂದರ್ಭದ ಚಳವಳಿಯೊಂದನ್ನು ಇಲಿಬೋನಿನ ಹೋಲಿಕೆ ಮೂಲಕ ರೂಪಕವಾಗಿ ಪರಿವರ್ತಿಸುವುದು ಅನುಭವ ಹಾಗೂ ವಿಚಾರಗಳನ್ನು ಅನುಭವವಾಗಿ ಮಾರ್ಪಡಿಸುವುದಕ್ಕೆ ಸಹಕಾರಿಯಾಗುವುದಿಲ್ಲ. ಬದಲಾಗಿ ಸಂಕೀರ್ಣವಾದ ವಿಚಾರ ಚಿಂತನೆಯಿಂದ ತಪ್ಪಿಸಿಕೊಂಡು, ಅತ್ತ ಚಳವಳಿಯ ಪರವೂ ಅಲ್ಲದೆ ಇತ್ತ ವಿರೋಧವೂ ಇಲ್ಲದೆ, ಅನುಭವದ ನೆಪದಲ್ಲಿ ಏನನ್ನೋ ತೋರ್ಪಡಿಸಲು ರೂಪಕದ ಬಳಕೆ ಆದಂತಾಗುತ್ತದೆ. ಇದರಿಂದಾಗಿ ಚಳವಳಿಯ ಬಗೆಗಿನ ಚಿಂತನೆಗೆ ಹೊಸದೇನೂ ಸೇರ್ಪಡೆ ಆದಂತೆ ಅನಿಸುವುದಿಲ್ಲ.

ವಿಸ್ಮಯದ ವಿಶ್ಲೇಷಣೆ:

ಡಾ। ಯು.ಆರ್.ಅನಂತಮೂರ್ತಿ 'ಅಣ್ಣಾ ಎಂಬ ವಿಸ್ಮಯ' ಎಂಬ ತಲೆಬರಹದ ಲೇಖನದಲ್ಲಿ ಮೊದಲಿಗೆ ತಮ್ಮ ವಿಚಾರವನ್ನು ಹೇಳಿದರು. (ನೋಡಿ ವಿಜಯ ಕರ್ನಾಟಕ). ಆ ಬಳಿಕ ದಿನೇಶ ಅಮೀನ ಮಟ್ಟು ಅವರ ಅಂಕಣಕ್ಕೆ ನೀಡಿದ ಪ್ರತಿಕ್ರಿಯೆ ರೂಪದಲ್ಲೂ ತಮ್ಮ ಅಭಿಪ್ರಾಯಗಳನ್ನು ಸ್ಪಷ್ಟಪಡಿಸಿದರು. (ಪ್ರಜಾವಾಣಿ...) ಅಣ್ಣಾ ಚಳವಳಿ ಬಗ್ಗೆ 'ವಿಸ್ಮಯ'ಗೊಂಡ ಡಾ। ಅನಂತಮೂರ್ತಿ ಅವರು "ಸಾಮಾನ್ಯ ಜನತೆಯ ಆಶೋತ್ತರಗಳನ್ನು ಸಾಂಕೇತಿಸುವ ಇಂದಿನ ಘಟನೆಯನ್ನು ಅವತಾರ ಎಂದು ಕರೆಯುವುದೇ ಸೂಕ್ತವೆನಿಸುತ್ತದೆ" ಎಂದು ಪ್ರತಿಕ್ರಿಯಿಸಿದರು.

ಅಣ್ಣಾ ಚಳವಳಿ ಉದ್ದಕ್ಕೂ ರಾಷ್ಟ್ರೀಯತೆಯ ಭಾವ ಪ್ರಾಧಾನ್ಯ ಎದ್ದು ಕಾಣುತ್ತಿತ್ತು. ಚಳವಳಿಯಿಂದ ನಿರ್ಮಾಣವಾದ ಭಾವ ಪ್ರಪಂಚದ ಪ್ರಭಾವದಲ್ಲೆ ಡಾ। ಅನಂತಮೂರ್ತಿ ಕೂಡಾ ಪ್ರತಿಕ್ರಿಯಿಸಿದರು. ಅವರ ವೈಚಾರಿಕ ಎಚ್ಚರಿಕೆ ಲೇಖನದಲ್ಲಿ ಅಲ್ಲಲ್ಲಿ ಹರಿದಾಡಿದರೂ ಬರಹದ ಉದ್ದಕ್ಕೂ ಭಾವ ಪ್ರೇರಣೆ ಗೋಚರಿಸದಿರದು. ಸರ್ಕಾರವನ್ನು ಅರ್ಥಮಾಡಿಕೊಳ್ಳುವ ಹಾಗೂ ಚಳವಳಿಯನ್ನು ಅರಿಯುವ ದ್ವಂದ್ವ ನಿಲುವಿಗೆ ಇಲ್ಲೂ ಕೊರತೆ ಇರಲಿಲ್ಲ.

'ವಿಸ್ಮಯ' ಎಂದಾಗ ಬೆರಗಿನಲ್ಲಿ ಮೂಡುವ ಮುಗ್ಧತೆ ಗೋಚರಿಸುತ್ತದೆ. ಈ ಮುಗ್ಧತೆ ಮುಕ್ತ ಮನೋಭಾವವನ್ನು ಸೂಚಿಸುತ್ತದೆ. ಚಳವಳಿಯಿಂದ ಏನೋ ಅನಾಹುತವಾಗುತ್ತದೆಂಬ ಆತಂಕದಿಂದ ಅವರು ಪ್ರವೇಶಿಸಲಿಲ್ಲ ಎಂಬುದೇ ನನಗೆ ಇತ್ಯಾತ್ಮಕ ಗುಣವಾಗಿ ತೋರುತ್ತದೆ. 'ಅವತಾರ' ಎಂಬ ಅವರ ಪದ ಪ್ರಯೋಗ ದುಷ್ಟಶಿಕ್ಷೆಯ ಆಶಾವಾದವೇ ಹೊರತು ಧರ್ಮನಿರ್ದೇಶಿತ ವಿಚಾರವಲ್ಲ. (ವೈದೇಹಿ ಅವರು 'ಗ್ಲಾನಿ' ಎಂಬ ಪದವನ್ನು 'ಅವತಾರ'ದ ಮೊದಲು ಬಳಸಿ 'ಧರ್ಮ' ಸಂದರ್ಭವನ್ನು ಸೃಷ್ಟಿಸುತ್ತಾರೆ). ಇದರ ಜೊತೆ 'ಅವತಾರ' ಪದದ ಮೂಲಕ ಡಾ। ಅನಂತಮೂರ್ತಿ ಚಳವಳಿಯ ಮಿತಿಯಗಿ ತಮ್ಮ ಅನುಮಾನವನ್ನು ಸೂಚಿಸುತ್ತಾರೆ. 'ಅವತಾರ' ಎಂಬ ಒಂದು ಶಬ್ದಕ್ಕೆ ಕನ್ನಡ ಬಳಕೆಯಲ್ಲಿ 'ನಾಟಕ' ಎಂಬ ಒಂದು ಅರ್ಥವೂ ಇದೆ. 'ಅಬ್ಬಾ ಅವನ ಅವತಾರವೆ'. 'ನಿನ್ನ ಅವತಾರ ಸಾಕು. ಇನ್ನು ಊಟ ಮಾಡು' ಇತ್ಯಾದಿ ಪ್ರಯೋಗಗಳಲ್ಲಿ ಆ ಅರ್ಥ ಸ್ಪಷ್ಟವಾಗಿದೆ. 'ಸಾಕುಬಿಡಿ ಅವತಾರ' ಎಂಬುದು

ಅನಂತಮೂರ್ತಿಯವರದೇ ಕವನ ಒಂದರ ಸಾಲು ಕೂಡಾ. ಕೆ.ವಿ. ಅಕ್ಷರ ನಾಟಕದ ಮೂಲಕ ಬಳಸುವ 'ಪೀಕ್ಷಕ' ಪದಕ್ಕೂ ಡಾ। ಅನಂತಮೂರ್ತಿ ಉಪಯೋಗಿಸುವ 'ಅವತಾರ' ಪದಕ್ಕೂ ಇರುವ ವ್ಯತ್ಯಾಸ ಗಮನಿಸಿದರೆ ಅನಂತಮೂರ್ತಿಗಳ ಸೂಕ್ಷ್ಮ ಅರ್ಥವಾದೀತು. ಹೀಗೆ ಚಳವಳಿಯ ಮಿತಿಗಳ ಬಗ್ಗೆ ಎಚ್ಚರವಿದ್ದು ಒಟ್ಟು ಚಳವಳಿ ಬಗ್ಗೆ ಅನಂತಮೂರ್ತಿಯವರದ್ದು ಇತ್ಯಾತ್ಮಕ ಪ್ರತಿಕ್ರಿಯೆ.

ನಿರೀಕ್ಷೆ ಬೇರೆ:

ಆದರೆ, ಸಾಮಾಜಿಕ ಚಳವಳಿ, ರಾಜಕೀಯ ತತ್ವ ಚಿಂತನೆ ಹಿನ್ನೆಲೆಗಳಲ್ಲಿ 'ಅವಸ್ಥೆ'ಯಂತಹ ಕಾದಂಬರಿಯನ್ನು ಬರೆದ ಅನಂತಮೂರ್ತಿಗಳ ಚಿಂತನೆಯ ಬಗ್ಗೆ ನನ್ನ ನಿರೀಕ್ಷೆ ಬೇರೆಯಾಗಿತ್ತು. ಅವರಿಗಿರುವ ರಾಜಕೀಯ, ಸಾಮಾಜಿಕ ಹೋರಾಟ ಹಾಗೂ ತತ್ವ ಚಿಂತನೆಗಳ ಹಿನ್ನೆಲೆಯಲ್ಲಿ ಅವರಿಂದ ಇನ್ನೂ ಹೆಚ್ಚು ನೇರವಾದ ಪರ್ಯಾಯ ಹಾಗೂ ಪರಿಹಾರ ಚಿಂತನೆಗಳಿಗೆ ಪೂರಕವಾಗಬಲ್ಲ ವಿಚಾರಗಳನ್ನು ನಾನು ನಿರೀಕ್ಷಿಸಿದೆ.

ಉದಾಹರಣೆಗೆ, ಈ ಚಳವಳಿ ತನ್ನ ಘೋಷಿತ ಆಶಯಗಳಲ್ಲಿ ವರ್ಗ ಹಾಗೂ ಜಾತಿಯ ಪ್ರಾತಿನಿಧಿಕ ಬೇಡಿಕೆಗಳನ್ನು ಹೊಂದಿಲ್ಲ. ಈ ಚಳವಳಿಯ ಮುಖ್ಯ ಕೇಂದ್ರ ಪೌರತ್ವದ ಹಕ್ಕಿಗೆ ಸಂಬಂಧಿಸಿದ್ದು. ಎಲ್ಲಾ ಪೌರರೂ ಸಮಾನರು ಎಂಬುದು ಕಾನೂನಿನ ಆಡಳಿತದ ತಾತ್ವಿಕ ಗ್ರಹಿಕೆ. ಅದು ಎಲ್ಲಾ ರಾಜಕೀಯ ತತ್ವ ಪ್ರಣಾಳಿಕೆಗಳ ಗ್ರಹಿಕೆಯಲ್ಲ. ಭ್ರಷ್ಟಾಚಾರದ ವಿರುದ್ಧದ ಪೌರರ ಹಕ್ಕಿನ ಹೋರಾಟವನ್ನು ನೈತಿಕ ಹಾಗೂ ರಾಷ್ಟ್ರೀಯತೆಯ ಪ್ರಶ್ನೆಯಾಗಿ ಈ ಚಳವಳಿ ಪರಿವರ್ತಿಸಿಕೊಂಡಿತು. ಅಂತಹ ಪರಿವರ್ತನೆಯಿಂದ ಲಭ್ಯವಾದ ಶಕ್ತಿಯ ಮೂಲಕ ಈ ಚಳವಳಿ ಭ್ರಷ್ಟಾಚಾರದ ವಿರುದ್ಧ ಕಾನೂನಿನ ಆಡಳಿತದ ನಿಯಂತ್ರಕ ಶಕ್ತಿಯನ್ನು ಪ್ರಯೋಗಿಸಲು ಹೊರಟಿದೆ.

ಇದರ ಜೊತೆ ಅಣ್ಣಾ ಹಜಾರೆ ಲೋಕ ತಂತ್ರ ಎಂದರೆ ವಿಕೇಂದ್ರೀಕರಣ ಎಂಬುದನ್ನೂ ಪ್ರತಿಪಾದಿಸುತ್ತಾರೆ. ಅಧಿಕಾರ ಮಂತ್ರಾಲಯಗಳಲ್ಲಿ ಕೇಂದ್ರೀಕರಣಗೊಳ್ಳದೆ ಜನರ ಬಳಿ ಇರಬೇಕು ಎನ್ನುತ್ತಾರೆ. ವಿಕೇಂದ್ರೀಕರಣ ತತ್ವ ನಮ್ಮಲ್ಲಿ ದೊಡ್ಡ ಜಿಜ್ಞಾಸೆಗೆ ಕಾರಣವಾದ ವಿಚಾರ. ಕಮ್ಯುನಿಸ್ಟರಿಗೂ, ಸೋಶಲಿಸ್ಟರಿಗೂ ಇದ್ದ ಒಂದು ಮುಖ್ಯ ಭಿನ್ನಾಭಿಪ್ರಾಯ ವಿಕೇಂದ್ರೀಕರಣದ ತತ್ವದಲ್ಲಿ ಅಡಗಿತ್ತು. ಡಾ। ರಾಮಮನೋಹರ ಲೋಹಿಯಾ ಪ್ರತಿಪಾದಿಸಿದ ಚತುಸ್ತಂಭ ವ್ಯವಸ್ಥೆಯಲ್ಲಿ (ಗ್ರಾಮ, ರಾಜ್ಯ, ರಾಷ್ಟ್ರ ಹಾಗೂ ಜಾಗತಿಕ ನೆಲೆಯ ವ್ಯವಸ್ಥೆ) ವಿಕೇಂದ್ರಿಕರಣದ ಹೊಸ ವ್ಯಾಖ್ಯಾನ ಅಡಗಿತ್ತು.

ಅಣ್ಣಾ ಹಜಾರೆ ತಮ್ಮ ರಾಜಕೀಯ ತತ್ವ ಪ್ರಣಾಳಿಕೆಯನ್ನು ಚರ್ಚಿಸಿದವರಲ್ಲ. ಅಂದರೆ ಯಾವುದೇ ಒಂದು 'ವಾದ'ದಿಂದ ಅವರು ರಾಜಕೀಯ ಪ್ರವೇಶಿಸಿದವರಲ್ಲ. ಅವರು ಒಂದು ಕಾರ್ಯಕ್ರಮದ (programme) ಮೂಲಕ ರಾಷ್ಟ್ರ ಮಟ್ಟದಲ್ಲಿ ಆಂದೋಲನ ಉಂಟು ಮಾಡಿದವರು. ಗಾಂಧೀಜಿ ಹೀಗೆ ಬ್ರಿಟಿಷರ ವಿರುದ್ಧ ಹೋರಾಟವನ್ನು ಒಂದು ಕಾರ್ಯಕ್ರಮ ಮಾಡಿದ್ದರು. ರಾಮ ರಾಜ್ಯದ ಗುರಿಗೆ ಅದೊಂದು ದಾರಿ. ಜನಲೋಕಪಾಲ ಮಸೂದೆ ಮೂಲಕ ಪೌರತ್ವದ ತಾತ್ವಿಕತೆ ಬೆಳೆದರೆ ಪ್ರಜೆ ಹಾಗೂ ಸರ್ಕಾರದ ನಡುವೆ ಗ್ರಾಹಕ ಸಂಬಂಧ ಏರ್ಪಡುವ ಸಾಧ್ಯತೆಗಳಿವೆ. ಬಂಡವಾಳಶಾಹಿ ಪ್ರಜಾಪ್ರಭುತ್ವವಾದ ಅಮೆರಿಕಾ ಸಂಯುಕ್ತ

ಸಂಸ್ಥಾನದಲ್ಲಿ ಹಾಗಾಗಿದೆ. ನಾನು ಇಷ್ಟು ತೆರಿಗೆ ನೀಡುತ್ತೇನೆ. ಅದಕ್ಕೆ ಇಂತಹ ಮಟ್ಟದ ಇಷ್ಟು ಸೇವೆಗಳನ್ನು ಸರಕಾರದಿಂದ ಬಯಸುತ್ತೇನೆ ಎಂಬುದು ಅಲ್ಲಿನ ಸಾಮಾನ್ಯ ವಿಚಾರ.

ಈ ಹಿನ್ನೆಲೆಯಲ್ಲಿ ನಾವು ಇಂದಿನ ಭಾರತದ ಸಂಕೀರ್ಣ ಸಂಕ್ರಮಣ ಸ್ಥಿತಿಯನ್ನು ಗಮನಿಸಬಹುದು. ಜಾಗತೀಕರಣದಿಂದ ಖಾಸಗೀಕರಣ ಸುಲಭವಾಗಿದೆ. ಈ ತನಕ ಉತ್ಪಾದಿಸಿದ, ಉಳಿಸಿದ ಸಾರ್ವಜನಿಕ ಸಂಪತ್ತು ಖಾಸಗಿಯಾಗಿ ಮಾರ್ಪಡುವಲ್ಲಿ ಭ್ರಷ್ಟಾಚಾರ ನುಸುಳಿದೆ. ಅದರ ನಿಯಂತ್ರಣಕ್ಕೆ ಹೊರಟಾಗ ಪೌರತ್ವದ ಹಕ್ಕಿನ ಪ್ರಶ್ನೆ ಮುಂಚೂಣಿಗೆ ಬರುತ್ತಿದೆ. ರಾಷ್ಟ್ರೀಯತೆಯ ನೆಲೆಯಲ್ಲಿ ಚಳವಳಿ ಬೆಳೆದಾಗ 'ಸಂಸ್ಕೃತಿ' ನೆಲೆಯಲ್ಲಿ ಮೂಲ ಭೂತವಾದಿಗಳೂ, ಸಂಪತ್ತಿನ ಉತ್ಥಾನೆಯಲ್ಲಿ ಬಂಡವಾಳಶಾಹಿಯೂ ಬಲಗೊಳ್ಳುವ ಅಪಾಯ ಇದೆ. ಎಡಪಂಥೀಯರು ಈಗಾಗಲೇ ನಮ್ಮಲ್ಲಿ ಮೂಲೆ ಗುಂಪಾಗುತ್ತಿದ್ದಾರೆ.

ವಿಸ್ಮಯದ ಆಚೆ ಏನು?

ಇಂತಹ ಸಂದರ್ಭದಲ್ಲಿ ಈ ಚಳವಳಿಯನ್ನು 'ವಿಸ್ಮಯ'ದ ಆಚೆ ಹೇಗೆ ವ್ಯಾಖ್ಯಾನಿಸಬೇಕು? ಅದರ ಮೂಲಕ ಯಾವುದೇ ಪರ್ಯಾಯ ಅಥವಾ ಸಮನ್ವಯ ತತ್ವದ ಬೆಳವಣಿಗೆಯ, ಸಾಧ್ಯತೆಗಳು ಹೇಗಾಗಬಹುದು? ಅಂತಹ ಚಿಂತನೆಯ ವಿವರಗಳಿಗೂ, ಸೂಕ್ಷ್ಮತೆಗೂ ತಮ್ಮ ಸಾಮಾಜಿಕ ರಾಜಕೀಯ, ಸಾಂಸ್ಕೃತಿಕ ಚಿಂತನೆಗಳ ಹಿನ್ನೆಲೆಯಲ್ಲಿ ಚಳವಳಿಯ ತಿಳುವಳಿಕೆಗೆ ಯಾವ ಹೊಸ ವಿಚಾರಗಳನ್ನು ಡಾ। ಅನಂತಮೂರ್ತಿ ಸೇರಿಸಬಹುದು ಎಂಬ ಕುತೂಹಲ, ನಿರೀಕ್ಷೆ ನನ್ನಲ್ಲಿತ್ತು. ನನ್ನ ಅಪೇಕ್ಷೆಗಳಿಗೆ ಅಥವಾ ನಿರೀಕ್ಷೆಗಳಿಗೆ ಉತ್ತರಿಸುವುದು ಅವರ ಉದ್ಯೋಗವಲ್ಲ ಎಂಬ ವಿಚಾರ ತಿಳಿದಿದ್ದೂ, ಈ ಮಾತು ಹೇಳುತ್ತಿದ್ದೇನೆ. ಡಾ। ಅನಂತಮೂರ್ತಿ ನಮ್ಮ ಸಾಂಸ್ಕೃತಿಕ, ಸಾಮಾಜಿಕ ಚಿಂತನೆಯ ಮುಂಚೂಣಿಯಲ್ಲಿರುವವರು. ಅಂತಹ ವಿಚಾರವಂತರಿಂದ ರೂಪಕ ಆಶ್ರಿತ ಪ್ರತಿಕ್ರಿಯೆ ಅಥವಾ ಭಾಷಾ ಸೂಕ್ಷ್ಮದ ಅವಲೋಕನಗಳ ಆಚೆ ಕೂಡಾ ವಿವರ, ವಿಚಾರ, ತಾತ್ವಿಕ ಚಿಂತನೆಗಳ ಬಗ್ಗೆ ಹೆಚ್ಚಿನ ನಿರೀಕ್ಷೆ ಸೃಷ್ಟಿಯಾಗುವುದೂ ಇಂತಹ ಸಂದರ್ಭಗಳಲ್ಲಿ ಸಹಜ ಎಂಬುದು ನನ್ನ ಅಭಿಪ್ರಾಯ.

* * *

ಅಣ್ಣಾ ಹಜಾರೆಯವರ ಚಳವಳಿ ಬಗ್ಗೆ ಈ ತನಕ ನಡೆಸಿದ ಚರ್ಚೆ ಜನಲೋಕಪಾಲ ಮಸೂದೆಯ ವಿವರಗಳನ್ನು ಕಾನೂನಿನ ಸೂಕ್ಷ್ಮ ಚರ್ಚೆಗೆ ಒಳಪಡಿಸಲಿಲ್ಲ. ಅಂತಹ ಚರ್ಚೆಗಳನ್ನು ನಡೆಸಬಲ್ಲ ಸಂವಿಧಾನ ತಜ್ಞರು ಈಗಾಗಲೇ ಅವನ್ನು ಪ್ರಾರಂಭಿಸಿದ್ದಾರೆ. ರಾಜ್ಯಕ್ಕೆ ಸಂಬಂಧಿಸಿದ ಲೋಕ ಆಯುಕ್ತರ ಬಗ್ಗೆ ಮಸೂದೆ ಮಾಡುವ ಅಧಿಕಾರ ಕೇಂದ್ರಕ್ಕೆ ಇದೆಯೆ? ಸಿ.ಬಿ.ಐಯ ಭ್ರಷ್ಟಾಚಾರ ತನಿಖಾ ವಿಭಾಗ ಪ್ರಧಾನ ಮಂತ್ರಿಗಳ ಅಧಿಕಾರದಿಂದ ಲೋಕಪಾಲರ ಆಡಳಿತಕ್ಕೆ ಬರುವುದು ಸರಿಯೆ? ಇತ್ಯಾದಿ ಚರ್ಚೆಗಳು ಈಗಾಗಲೇ ಪ್ರಾರಂಭವಾಗಿದೆ. ಕಾನೂನು ತಜ್ಞರ ವಿಚಾರಮಂಥನ ಅಂತಹ ವಿಷಯಗಳಿಗೆ ಅಗತ್ಯವೂ ಇದೆ.

ಇಷ್ಟು ಮಾತ್ರವಲ್ಲದೆ, ಲೋಕಪಾಲ ಮಸೂದೆಗೆ 45 ವರುಷಗಳ ಚರಿತ್ರೆಯೂ ಇದೆ ಎಂಬುದನ್ನು ನಾವು ಮರೆಯಬಾರದು. 1966ರಲ್ಲಿ ಸರ್ಕಾರ ನೇಮಿಸಿದ ಆಡಳಿತ ಸುಧಾರಣಾ ಮಂಡಳಿ ಸಾರ್ವಜನಿಕ ದೂರುಗಳ ಭಾಗವಾಗಿ ಆಡಳಿತ ಸುಧಾರಣೆಗೆ ಓಂಬುಡ್ಸ್‌ಮನ್ ಮಾದರಿ ವ್ಯವಸ್ಥೆ ಸೃಷ್ಟಿಸುವ ಸಲಹೆ ನೀಡಿತು. ಓಂಬುಡ್ಸ್‌ಮನ್ ಕಲ್ಪನೆಯನ್ನು 'ಲೋಕಪಾಲ'

ಎಂದು ತಮ್ಮ ಭಾಷಣದಲ್ಲಿ ಹೆಸರಿಸಿದ್ದು ಡಾ। ಎಲ್. ಎಮ್ ಸಿಂಗ್ವಿ. ಆ ಬಳಿಕ ಮೊದಲಿಗೆ 1968ರಲ್ಲಿ ಅಂದಿನ ಕೇಂದ್ರ ಸಚಿವ ವೈ. ಬಿ. ಚವಾಣ್ 'ಲೋಕಪಾಲ' ಮಸೂದೆಯನ್ನು ಲೋಕಸಭೆಯಲ್ಲಿ ಮಂಡಿಸಿ ಪಾರ್ಲಿಮೆಂಟಿನ ಅನುಮೋದನೆಯನ್ನು ಪಡೆದರು. ಆದರೆ. 1969ರಲ್ಲಿ ಕಾಂಗ್ರೆಸ್ ಇಬ್ಭಾಗವಾಗಿ ಲೋಕಸಭೆಯ ಅನುಮೋದನೆ ಪಡೆದ ಮಸೂದೆ ರಾಜ್ಯ ಸಭೆಯಲ್ಲಿ ಅನುಮೋದನೆ ಪಡೆಯದೆ ಬಿದ್ದು ಹೋಯಿತು. ಅಂದಿನಿಂದ ಇಂದಿನವರೆಗೆ ಸಾರ್ವಜನಿಕ ಜೀವನದ ಒಳಹರಿವಿನಲ್ಲಿ ಶುದ್ಧ ಆಡಳಿತದ ಜನರ ಆಕಾಂಕ್ಷೆಗೆ ಪೂರಕವಾಗಿ ಉಳಿದು ಬೆಳೆದು ಈ ಮಸೂದೆ ಈಗ ಮತ್ತೆ ಕೇಂದ್ರಕ್ಕೆ ಬಂದಿದೆ. 1968ರ ಬಳಿಕ ಲೋಕಪಾಲ ಮಸೂದೆ 1971,1977,1985,1989,1996,1998 ಮತ್ತು 2001ರಲ್ಲಿ ಪಾರ್ಲಿಮೆಂಟಿನ ಮುಂದೆ ಬಂದಿದೆ. 2010ರಲ್ಲಿ ಪುನಃ ಸ್ಟಾಂಡಿಂಗ್ ಕಮಿಟಿಯ ಪರಿಶೀಲನೆಗಾಗಿ ಮಂಡಿಸಲ್ಪಟ್ಟಿದೆ. 2011ರ ಲೋಕಪಾಲ ಆಂದೋಲನದ ಮೊದಲು ನಡೆದ ಪ್ರಯತ್ನಗಳ ಚಾರಿತ್ರಿಕ ಅರಿವು ಕೂಡಾ ನಮ್ಮ ಚಿಂತನೆಯ ಹರಹನ್ನು ನಿಯಂತ್ರಿಸಲು ಮುಖ್ಯವಾಗಿದೆ.

ಈ ನನ್ನ ವಿಶ್ಲೇಷಣೆ ಪ್ರಶ್ನೋತ್ತರ ರೀತಿಯಲ್ಲಿದ್ದರೂ ಅದರ ಉದ್ದೇಶ ಪ್ರಜಾಪ್ರಭುತ್ವದ ಶಕ್ತಿವರ್ಧನೆಯ ರೂಪದಲ್ಲಿ ಅಣ್ಣಾ ಚಳವಳಿಯನ್ನು ವಿಶ್ಲೇಷಿಸಲು ಸಾಧ್ಯವೆ ಎಂಬುದನ್ನು ಪರೀಕ್ಷಿಸುವುದೇ ಆಗಿದೆ. ಹಾಗೆಯೇ ಸಮಾನತೆಯ ಪ್ರಶ್ನೆಯನ್ನು ಈ ಚಳವಳಿ ಹೇಗೆ ಅರ್ಥಮಾಡಿಕೊಳ್ಳುತ್ತದೆ? ಪ್ರಭುತ್ವದ ಶಕ್ತಿಯನ್ನು ಎದುರಿಸಲು ಪ್ರಜೆಗಳಿಗೆ ಯಾವ ಮಾರ್ಗವನ್ನು ಕಾಣಿಸುತ್ತದೆ? ಪಕ್ಷ ರಾಜಕೀಯದ ಹೊರಗೂ ಪ್ರಜಾಪ್ರಭುತ್ವದ ಶಕ್ತಿಯನ್ನು ಹೇಗೆ ಉಳಿಸಿ ಬೆಳೆಸುತ್ತದೆ? ಅದೆಲ್ಲದಕ್ಕು ನಮ್ಮ ಸಂವಿಧಾನದ ಮೂಲ ಆಶಯ ಹೇಗೆ ಪೂರಕವಾಗಿದೆ? ಎಂಬುದನ್ನು ಚಿಂತಿಸಿ. ವಿಶ್ಲೇಷಿಸಿ ಅರಿಯುವುದೇ ಆಗಿದೆ.

ಅಣ್ಣಾ ಚಳವಳಿ ಪ್ರಜಾಪ್ರಭುತ್ವದ ಉತ್ಸವದಂತೆ ಶಾಂತಿಯುತವಾಗಿ ನಡೆಯಿತು. ಮೇಧಾ ಪಾಟ್ಕರ್ ಅದನ್ನು ಪತ್ರಿಕಾ ಸಂದರ್ಶನವೊಂದರಲ್ಲಿ ಪ್ರಜಾಪ್ರಭುತ್ವದ ಉತ್ಸವ ಎಂದೇ ಕರೆದರು. ಊರ ಜಾತ್ರೆಗಳ ಯಜಮಾನರಂತೆ ಪ್ರಧಾನ ಮಂತ್ರಿ ಡಾ। ಮನಮೋಹನ ಸಿಂಗ್ ಅಣ್ಣಾಗೆ ಅಭಿನಂದನೆ ಹೇಳಿ ವಂದಿಸಿದರು. (I salute him). ಇಂತಹ ಒಂದು ವಿದ್ಯಮಾನವನ್ನು ಹೇಗೆ ಅರ್ಥೈಸಿ ಪ್ರತಿಕ್ರಿಯಿಸಬೇಕೆಂಬ ಸತತ ಯೋಚನೆ ನನ್ನದಾಗಿತ್ತು.


ಈ ಬರಹ ನನಗೆ ನಾನೇ ಅಣ್ಣಾ ಚಳವಳಿಯನ್ನೂ. ಅದು ಸೃಷ್ಟಿಸಿದ ಹೊಸ ವಿಚಾರಗಳನ್ನು ಅರಿತುಕೊಳ್ಳಲು ನಡೆಸಿದ ಚಿಂತನೆ. ನನ್ನ ಈ ಯೋಚನಾಕ್ರಮ ಹಾಗೂ ಪ್ರಜಾಪ್ರಭುತ್ವದಲ್ಲಿ ಜನರ ಶಕ್ತಿ. ಹಕ್ಕುಗಳನ್ನು ಅರ್ಥೈಸುವ ವಿಚಾರ ಓದುಗರಿಗೂ ಕೆಲವು ರೀತಿಯಲ್ಲಿ ಸಹಾಯವಾದೀತು ಎಂಬ ನಂಬುಗೆಯಲ್ಲಿ ಈ ಬರಹವನ್ನು ಪ್ರಕಟಿಸುತ್ತಿದ್ದೇನೆ.

*

ಅ-2/103. ಓಂಕಾರ್ ಅಪಾರ್ಟ್‌ಮೆಂಟ್ಸ್,
8ನೇ ಮುಖ್ಯರಸ್ತೆ, 12ನೇ ಅಡ್ಡರಸ್ತೆ
ಮಲ್ಲೇಶ್ವರ. ಬೆಂಗಳೂರು 560 003.
ಫೋನು: (ಮನೆ) 080 - 23467852
ಇಮೈಲ್: srvshankar@yahoo.com

ಅವಳ ಜೋಗಿ

* ಉಗಮ ಶ್ರೀನಿವಾಸ್



ದೇವರ ಕಾಡಿನಲ್ಲಿ
ನಾಗ ಜಡೆಯವಳನ್ನು
ಹುಡುಕುತ್ತಾ ಹೊರಟಿದ್ದಾನೆ
ಜೋಗಿ!

ರೆಪ್ಪೆ ಇರದಿದ್ದರೂ
ಕಣ್ಣು ಮಿಟುಕಿಸುವ
ನವಿಲು ಗರಿಯ ಪಕಳೆಯಂತಹ
ನಾಗ ಕನ್ಯೆಯನ್ನು!

ಅವಳ ತುರುಬಿನಲ್ಲಿರಬೇಕಾದ
ನಾಗಲಿಂಗ ಪುಷ್ಪವನ್ನು
ತನ್ನ ಜೋಳಿಗೆಯಲ್ಲಿಟ್ಟು
ಪದ ಹಾಡುತ್ತಾ ಹೊರಟಿದ್ದಾನೆ
ಜೋಗಿ
ನಾಗ ಬನದ ಕಾಡಿಗೆ

ಹುತ್ತದ ಮಣ್ಣಲ್ಲಿ
ತಿಲಕವಿಟ್ಟು ನಾಗಜಡೆಯವಳನ್ನು
ಹುಡುಕುತ್ತಲೇ ಇದ್ದಾನೆ
ಕಾಲಾತೀತ ಜೋಗಿ

*

ಕೇರಾಫ್ ನರಸಿಂಹಮೂರ್ತಿ
ನಿವೃತ್ತ ಶಿಕ್ಷಕರು, ಮೊದಲನೇ ಮಹಡಿ
3ನೇ ಕ್ರಾಸ್ ಎಸ್.ಎಸ್. ಪುರಂ, ತುಮಕೂರು
ಫೋನ್: 9986375670, 9448792238


ವ್ಯೋಮ ವಿಸ್ತಾರ

* ಯೋಗೀಶ. ಜಿ

ಬಣ್ಣದ ಮನೆಯ
ಪಟ್ಟಿಯಲ್ಲಿದ್ದದ್ದು ಒಂದು ವೇಷ;

ಖಾಲಿ ರಂಗಸ್ಥಳದಲ್ಲಿ
ಒಡ್ಡೋಲಗ ಕೊಟ್ಟು
ದಿಗಿಣ ಹಾಕಿದ್ದು
ಹತ್ತರಾಚೆಯ ಹಲವು ಅವತಾರ!

ಭಿನ್ನ ಬಣ್ಣಗಳ ಭಂಡಾರದೊಳಗೆ
ಭಾವಚಿತ್ತಾರ..........
ಜೀವ ವೃತ್ತಾಂತದ ವ್ಯೋಮ ವಿಸ್ತಾರ.



ಹೊತ್ತು ಸಾಗಿಸುವ
ಗಾಡಿ ಚಕ್ರಗಳ ಕಳಚಿ
ಅಡ್ಡ ಹರಿವ ಹೊಳೆ ದಾಟಿ,
ಘಟ್ಟ ಹತ್ತಿದ್ದು–ಇಳಿದದ್ದು
ಅಪ್ಪಂತವರ ಏಳು–ಬೀಳು!

ವಿಷದ ಕುಪ್ಪಿ ಕೈ ಜಾರಿ..........
ಬಳಲಿಕೆಯ ಭಾಗವತರಾಟ.
ಕೋಲದ ಕೆಂಡ ಹಾಯುವಾಗ–
ಪಾದಗಳಲ್ಲಿ ಬೊಬ್ಬೆಯಿಲ್ಲ;
ಪಾಳಿಯಲ್ಲಿ ಬಂದ ವೇಷಗಳಲ್ಲಿ
ಅಲೆದಲೆದ ಜೀವ
ಉಂಡದ್ದು ಬವಣೆ;
ಕೈ ಸೋತು ದೇಹದಹನ!

ಗಿರಕಿ ಗಿರ ಗಿರ ತಿರುಗಿ
ಹಿಂಡಿ ಹಿಪ್ಪೆಯಾದ
ಬದುಕ ಬಟ್ಟೆ
ಹರಿದು ಚಿಂದಿಯಾದಾಗ
ತ್ಯಾಪೆ ಹೊಲಿದವ
ದರ್ಜಿ ನಾರಾಯಣ!

ಪೊಳ್ಳು ಪ್ರತಿಷ್ಠೆಯ
ಸುದ್ದಿಮನೆ ಆವೃತ್ತಿಯಲ್ಲಿ
ಹೂತು ಹೋಗುವ
ಕೀಲಿಮಣೆ ಸದ್ದಿನೊಳಗೇ
ವೃತ್ತ ವೃತ್ತಾಂತದ ವ್ಯೋಮ ವಿಸ್ತಾರ..

'ಅಕ್ಷರ'
ವಿನೋಬಾನಗರ
ಸಾಗರ–577401
ಫೋನ್: 9480289251

ತತ್ಸಮವೆಲ್ಲಿ?

* ಅ. ಶ್ರೀಪಾದ

ಸಸಿಗೆ ಛತ್ರಿಯಿಲ್ಲ
ಯೋನ ತೀರ್ಥ

ಕಾಲುವೆ ಹಾಯುತ್ತಾರೆ
ಬುಲ್‌ಡೋಜರ್ ಕೊರೆದು

ಪ್ರಕೃತಿ ಮಿತ್ರ
ಎದುರಾಳಿ ಮಾನವ

ಒಡೆಯುತ್ತದೆ ಕಟ್ಟೆ
ಹುಟ್ಟಿಸಿದವ ಹುಲ್ಲುಮೇಯುವುದಿಲ್ಲ

ಹಕ್ಕಿಗಳು ಚೀರುತ್ತವೆ
ರೆಂಬೆಗಳು ಮುರಿದು

ಲೆಕ್ಕ ಬಾರದವರಿಗೆ
ಲೆಕ್ಕವಿಲ್ಲ

ಹೊಟ್ಟೆಯೊಳಗಿಂದ ಕೈ ಕಾಲು
ಎಂದೂ ಮುಗಿಯದ ಕಥೆ

ಮುಂದೆ ಪತಿ ಹಿಂದೆ ಸತಿ
ಬಿಸಿಲ ನೆರಳು

ನಕ್ಷತ್ರವನ್ನೂ ಅಡವಿಡಬಹುದು
ಬಡವ ಆಧಾರ

ರೋಬೋಟ್ ಕೈಯಲ್ಲಿ ಚಾಟಿ
ಕಂಪ್ಯೂಟರ್ ನಿರ್ದೇಶ

ಮಾಯವಾಗಿದೆ ಓದು
ನಿರಕ್ಷರ ಡಿಗ್ರಿ

ಸಾಲಾಗಿ ಕೂತಿದ್ದಾರೆ ದೇವದಾನವರು
ಮುದ್ರೆ ಜ್ಯೋತಿರ್ಲಿಂಗ



* * *

ಬುತ್ತಿ ಕಟ್ಟುತ್ತಿದ್ದಾನೆ ಮುದುಕ
ಬಲುದೂರದ ಯಾತ್ರೆ

ಧೂಳಿ ತುಂಬಿದ ರಸ್ತೆ
ಕಣ್ಣಿಗೊತ್ತಿಕೊಳ್ಳುತ್ತಾನೆ

ಹಿಂತಿರುಗುವ ಭಯವಿಲ್ಲ
ಮುಳುಗಿದಲ್ಲೇ ಮುಕ್ತಿ

* * *

ಪೂರ್ಣ ಸ್ವಾತಂತ್ರ್ಯ
ಮರೆತು ಹೋಗಿದೆ ಇಸವಿ

ಗೋಡೆಗೆದೆಯೊತ್ತಿ ನಿಂತಿದ್ದಾರೆ
ಬೆನ್ನ ಕಣ್ಣಿಗೆ ಗನ್ನು

ಮೈ ತುಂಬಾ ಜೋಬುಗಳು
ಜೋಭದ್ರ ಬೆಲ್ಲುಗಳು

ದುಡಿವ ಬೆನ್ನಿನ ಮೇಲೆ ಹೇರು
ಸೋಮಾರಿ ಶವಗಳ ಕಡತ

ಇದು ಸುಸಂಧಿ ಹುಡುಕು ತದ್ಭವವ;
ತತ್ಸಮ ಪುಸ್ತಕದಲ್ಲಿ.



'ಶ್ರೀಧರ ಆಶ್ರಮ'
ಬಿ.ಹೆಚ್. ರಸ್ತೆ
ಶಿವಮೊಗ್ಗ-577 201

ಕನ್ನಡ ಸಾಹಿತ್ಯ ವಿಮರ್ಶೆ ಮತ್ತು ದೇಸಿ ಪ್ರಜ್ಞೆ

ವಿ. ಚಂದ್ರಶೇಖರ ನಂಗಲಿ

'ಸಾಹಿತ್ಯವಿಮರ್ಶೆ' ಮತ್ತು 'ದೇಸಿ ಪ್ರಜ್ಞೆ'-ಎಂಬ ಇವೆರಡು ಪರಿಭಾಷೆಗಳ ನಡುವೆ ಒಂದು ಸಾವಿರ ವರ್ಷಗಳನ್ನು ಮೀರಿದ ಅಂತರವಿದೆ. 'ವಿಮರ್ಶೆಯ ಯುಗ' ಎಂದೇ ಪ್ರಸಿದ್ಧವಾಗಿರುವ ಇಪ್ಪತ್ತನೆಯ ಶತಮಾನದಲ್ಲಿ ಹುಟ್ಟಿದ 'ಸಾಹಿತ್ಯವಿಮರ್ಶೆ'ಯು ಕ್ರಮೇಣ ಬಗೆ-ಬಗೆಯ ವಿಧಾನಗಳು ಮತ್ತು ವಿವಿಧ ಚೌಕಟ್ಟುಗಳನ್ನು ಪಡೆದುಕೊಂಡು ಒಂದು 'ಜ್ಞಾನ ಶಿಸ್ತು' ಎಂಬಂತೆ ನೆಲೆಯೂರಿದೆ. ಕನ್ನಡ ಸಾಹಿತ್ಯ ಕ್ಷೇತ್ರದ ಪಾಲಿಗೆ 'ಸಾಹಿತ್ಯ ವಿಮರ್ಶೆ'ಯು ಸುಸ್ಪಷ್ಟವಾಗಿ ಇಪ್ಪತ್ತನೆ ಶತಮಾನದ ವಿದ್ಯಮಾನ. ಆದರೆ, 'ದೇಸಿ ಪ್ರಜ್ಞೆ'ಯ (=ದೇಸಿಯೊಳ್‌ಪುಗುವುದು...) ಹತ್ತನೆ ಶತಮಾನದಲ್ಲಿ ಬೇರುಗಳನ್ನುಳ್ಳ 'ಸೃಜನಶೀಲ' ಮನೋಧರ್ಮವಾಗಿದೆ. ತುಂಬಾ ಸರಳವೂ ಸುಸ್ಪಷ್ಟವೂ ಆದ ಮಾತುಗಳಲ್ಲಿ ಹೇಳುವುದಾದರೆ. 'ಸಾಹಿತ್ಯ ವಿಮರ್ಶೆ'ಯನ್ನು 'ಮೆತಡಾಲಜಿ' ಎಂದೂ ದೇಸಿಪ್ರಜ್ಞೆಯನ್ನು 'ಎಗೆಯ್ನೆಸ್ಟ್ ಮೆತಡಾಲಜಿ' ಎಂದೂ ಕರೆಯಬಹುದು. 'ಮೆತಡಾಲಜಿ'ಯಲ್ಲಿ ಬಗೆ ಬಗೆಯ ಪದ್ಧತಿಗಳ ಹೊಕ್ಕು-ಬಳಕೆಯಿದ್ದರೆ. 'ಎಗೆಯ್ನೆಸ್ಟ್ ಮೆತಡಾಲಜಿ'ಯಲ್ಲಿ ಪ್ರಕ್ರಿಯಾತ್ಮಕ ದೃಷ್ಟಿಯೇ ಪ್ರಧಾನವಾಗಿದ್ದು ಪ್ರತಿಯೊಂದು ಪ್ರವೇಶವು "ಇದು ನಿಚ್ಚಂ ಪೊಸತು..." ಎಂಬಂತೆ ಹೊಸ ಹುಟ್ಟು-ಮರು ಹುಟ್ಟುಗಳಾಗಿ ಸದಾ 'ಆಗು'ತ್ತಿರುತ್ತದೆ. ಇದಿಷ್ಟು 'ಸಾಹಿತ್ಯ ವಿಮರ್ಶೆ' ಮತ್ತು 'ದೇಸಿ ಪ್ರಜ್ಞೆ'ಯ ಸ್ವರೂಪ-ಸ್ವಭಾವದಲ್ಲಿರುವ ತಾತ್ವಿಕ ವ್ಯತ್ಯಾಸದ ವಿವರಣೆಯಾಗಿದೆ.

ಇನ್ನು ಮುಂದೆ. ಕನ್ನಡ ಸಾಹಿತ್ಯವಿಮರ್ಶೆಯನ್ನು ಗಮನದಲ್ಲಿಟ್ಟುಕೊಂಡು ಕನ್ನಡದಲ್ಲಿ ಬೆಳೆದುಬಂದ ದೇಸಿ ಚಿಂತನೆಗಳು. ದೇಸಿವಾದ. ದೇಸಿ ವಿಮರ್ಶೆ ಕುರಿತು ನಡೆದಿರುವ ತಾತ್ವಿಕ ಚರ್ಚೆಯನ್ನು ಸಂಕ್ಷಿಪ್ತವಾಗಿ ಪರಿಚಯಿಸಲಾಗಿದೆ. ಈ ದಿಸೆಯಲ್ಲಿ ಡಾ. ಕೆ.ವಿ. ನಾರಾಯಣ ಅವರ 'ದೇಸಿ ಓದು' ಎಂಬ ಲೇಖನ (ತೊಂಡು ಮೇವು. ಸಂಪುಟ 1. ಪು166-173) ಬಹುಮುಖ್ಯವಾದುದು. ಈ ಲೇಖನದಲ್ಲಿ 'ದೇಸಿ ಓದು' ಕನ್ನಡದಲ್ಲಿ ನಡೆದುಬಂದಿರುವ ಹಾದಿಯ ಪರಿಶೀಲನೆಯಿದ್ದು. ಸಾಹಿತ್ಯ ವಿಮರ್ಶೆಯಲ್ಲಿ ದೇಸಿ ಓದಿನ ಬಗೆಗಳನ್ನು

ನಿರೂಪಿಸಲಾಗಿದೆ. ಕೆ.ಪಿ. ಎನ್ ಗುರುತಿಸಿರುವ ಆರು ಬಗೆಯ ನಿರೂಪಣೆಗಳಿವು.

1. ದೇಸಿ ಪರಿಕರಗಳನ್ನು ಗುರುತಿಸಬಹುದು: ಭಾಷೆ, ಛಂದಸ್ಸು, ವಸ್ತು, ಕಾವ್ಯದೃಷ್ಟಿ ಮುಂತಾದ ನೆಲೆಗಳು.

2. 'ದೇಸಿ' ಮಾರ್ಗ ಸಾಪೇಕ್ಷಿಯಾದ ಪರಿಕಲ್ಪನೆ; ದೇಸಿಯೊಂದೇ ತಂತಾನೆ ಮಹತ್ವ ಪಡೆಯುವುದಿಲ್ಲ. ದೇಸಿಯು ಮಾರ್ಗದೊಡನೆ ರಚಿಸಿಕೊಳ್ಳುವ ವೈರುಧ್ಯ, ಪೂರಕತೆ.

3. ವೈಶ್ವಿಕವಾದಿಗಳು ಕಾಲ ದೇಶಾತೀತವಾದ ಮಾನದಂಡಗಳಿಂದ ಕೃತಿಪರೀಕ್ಷೆ ಮಾಡಿದರೆ, ದೇಸಿವಾದಿಗಳು ಕೃತಿಯೊಳಗಿನಿಂದ ಅಥವಾ ಆ ಸಾಹಿತ್ಯ ಪರಂಪರೆಯ ಕೃತಿಗಳ ಒಳಗಿನಿಂದ ಪರಿಶೀಲನೆ ಮಾಡುವವರು.

4. ಇಲ್ಲದ್ದು ಮತ್ತು ಇರುವುದು: ದೇಸಿವಾದಿಗಳು ವಿಮರ್ಶೆಗೆ ತಕ್ಕ ಪರಿಕರಗಳನ್ನು ಸಿದ್ಧಪಡಿಸಿಕೊಟ್ಟಿಲ್ಲ. (=ಇಲ್ಲದ್ದು)... ವೈಶ್ವಿಕವಾದಿಗಳ ಪರಿಕರಗಳನ್ನು ನಿರಾಕರಿಸುವ, ವಿರೋಧಿಸುವ ನೆಲೆಯಲ್ಲಿ ಹೆಚ್ಚು ಕಾರ್ಯಪ್ರವೃತ್ತರಾಗಿದ್ದಾರೆ. (=ಇರುವುದು)

5. ಕಟ್ಟಿಕೊಳ್ಳುವ ಕೆಲಸ: ದೇಸಿವಾದಿಗಳ ಒಂದು ಪರಂಪರೆಯೇ ಇದ್ದು, ಅವರೆಲ್ಲರ ಒಟ್ಟು ಪ್ರಯತ್ನವನ್ನು ಗಮನಿಸುವ ಮೂಲಕ ಪರಿಕರಗಳನ್ನು ಕಟ್ಟಿಕೊಳ್ಳುವ ಕೆಲಸ ಆಗಬೇಕಾಗಿದೆ. ಮೊದಲ ದೇಸಿವಾದಿ ವಿಮರ್ಶಕರೆಂದರೆ ಬೇಂದ್ರೆಯವರು (=ಸಾಹಿತ್ಯದ ವಿರಾಟ್ ಸ್ವರೂಪದಲ್ಲಿರುವ ಲೇಖನಗಳು)

6. ಅನ್ಯಭಾಷೆಯ ಸಾಹಿತ್ಯ ಕೃತಿಗಳ ಓದು: ನಮ್ಮ ಕಾಲದೇಶದ ಚೌಕಟ್ಟುಗಳನ್ನು ಅನ್ವಯಿಸಿಕೊಳ್ಳುವುದು. ಪಂಪ, ಬೇಂದ್ರೆ ಮುಂತಾದವರ ದೇಸಿ ಅಳವಡಿಕೆಯ ಸೃಜನಶೀಲತೆ.

ಮೇಲಿನ ಆರು ಬಗೆಯ ನಿರೂಪಣೆಗಳಲ್ಲಿ ಐದನೆಯದಾದ 'ಕಟ್ಟಿಕೊಳ್ಳುವ ಕೆಲಸ'ವನ್ನು ಕೆ.ವಿ. ನಾರಾಯಣ ಅವರೇ ನಿರ್ವಹಿಸಿದ್ದು ಇನ್ನು ಮುಂದೆ ಅದನ್ನು ಸಂಕ್ಷೇಪಿಸಿ ಕೊಡಲಾಗಿದೆ.

1. ದೇಸಿ ಓದು ಎಂದರೆ ವಾಚ್ಯದ ನೆಲೆಯ ಯಾವ ರೀತಿ ಓದಬೇಕು ಎನ್ನುವುದಲ್ಲ!

2. ಕೃತಿಯನ್ನು ಅರಿಯುವ ಬೇರೆ ಬೇರೆ ಮಾರ್ಗಗಳನ್ನು ಕಂಡುಕೊಳ್ಳುವುದು 'ದೇಸಿ ಓದು'.

3. 'ದೇಸಿ ಓದು'–ಒಂದು ದೃಷ್ಟಿಕೋನವೇ ಹೊರತು ಮಾರ್ಗವಲ್ಲ!

4. ದೇಸಿ ಓದು – ಒಂದು ಪ್ರತ್ಯೇಕ ವಿಮರ್ಶಾ ವಿಧಾನ ಎನ್ನುವುದಕ್ಕಿಂತ ವಿಮರ್ಶಾದೃಷ್ಟಿ ಎನ್ನುವುದೇ ಸರಿ.

5. ಕೃತಿಯೊಂದಕ್ಕೆ ಇರುವ ಹಲವು ಓದುಗಳ ಸಾಧ್ಯತೆಯನ್ನು 'ಬಹುತ್ವ ಪ್ರೀತಿ'ಯೆಂದು ಹೇಳಲಾಗದು'

i) ಸಮಕಾಲೀನ ರಾಜಕೀಯದ ಆಯ್ಕೆಯ ಓದು.

ii) ನಿರುಪಯುಕ್ತ ಪರಿಕರಗಳ ಬಳಕೆಯ ಓದು.

iii) ಹಲವು ಓದುಗಳಲ್ಲಿ ಕೆಲವು ನಿರಾಕರಣೆಗೊಳ್ಳುತ್ತವೆ.

iv) ದೇಸಿವಾದವನ್ನು ಪುನರುತ್ಥಾನವಾದ, ಮೂಲಭೂತವಾದವೆಂದು ತಿಳಿಯುವುದು ಉಂಟು.

v) ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಹಲವು ಆಯ್ಕೆಯಿದ್ದಾಗ ದೇಸಿವಾದಕ್ಕೆ ಸಿಗುವ ಒತ್ತಾಸೆಗಳ ಮೂಲವನ್ನು ಎಚ್ಚರದಿಂದ ನೋಡಬೇಕು.

6. ಹಲವು ಪರಂಪರೆಗಳು ಇದ್ದರೆ ಅಧಿಕೃತ ಯಾವುದು? ದೇಸಿವಾದಿಗಳು ಈ ಪ್ರಶ್ನೆಗೆ ಉತ್ತರ ಕಂಡುಕೊಳ್ಳಬೇಕು.

7. ಲಿಖಿತ ಪರಂಪರೆ ಮತ್ತು ಬರೆಹ ಪರಂಪರೆಗಳ ನಡುವಣ ಸಂಬಂಧಗಳನ್ನು ದೇಸಿವಾದ ಸ್ಪಷ್ಟಪಡಿಸಿಕೊಳ್ಳಬೇಕು.

ಹೀಗೆ ಹೇಳುವ ಕೆ.ವಿ.ಎನ್. ದೇಸಿ ಚಿಂತನೆಯಲ್ಲಿ ಭಾಷೆಗೆ ಅತಿ ಹೆಚ್ಚಿನ ಪ್ರಾಶಸ್ತ್ಯ ನೀಡುತ್ತಾರೆ. ಇದನ್ನು ಕೆ.ವಿ.ಎನ್ ಅವರ 'ಭಾಷಿಕ ದೃಷ್ಟಿಕೋನ'ವೆಂದೇ ಕರೆಯಬಹುದು. (ನೋಡಿ: ಕೆ.ವಿ.ಎನ್. ಜೊತೆ ಚಲಪತಿ.ಆರ್ ನಡೆಸಿದ ಸಂದರ್ಶನ, ತೊಂಡು ಮೇವು) ಇದರಿಂದ ಆಯ್ದ ಕೆಲ ವಿಚಾರಗಳು,

1. 'ಕೃತಿ' ಭಾಷೆಯಲ್ಲಿ ರೂಪುಗೊಂಡಿರುತ್ತದೆ. ಭಾಷೆಯೊಂದೇ ನಮಗಿರುವ ಏಕೈಕ ಆಧಾರ.

2. ನಾನು ಸಾಹಿತ್ಯಕೃತಿಯೊಂದನ್ನು ಅರ್ಥಮಾಡ್ಕೊಳ್ಳೋದಕ್ಕೆ ಬಳಸಿರೋದು ಭಾಷಿಕವಾದ ಆಕರಗಳನ್ನೇ... ಕೃತಿ ಅಂದರೆ ಅದರ ಭಾಷಿಕ ಚೌಕಟ್ಟೇನೇ. ಅದನ್ನು ಅರ್ಥಮಾಡಿಕೊಳ್ಳೋದು ಭಾಷಿಕವಾದ ಆಕರಗಳಿಂದಲೆ. ಅದರ ಮುಖಾಂತರಾನೇ ಸಾಹಿತ್ಯಕೃತಿಯ ನಿಜವಾದ ಆಕಾರ ಸಿಗುತ್ತೆ ಅನ್ನೋದು ನಮಗೆ ಗೊತ್ತಿಲ್ಲದೇನೆ ಒಂದು ತಿಳುವಳಿಕೆ ಇದ್ದಂಗೆ ಕಾಣಿಸುತ್ತೆ ನನಗೆ.

3. ಭಾಷಿಕ ತಿಳುವಳಿಕೆ ಮತ್ತು ಸಂಸ್ಕೃತಿ ತಿಳುವಳಿಕೆಗಳನ್ನು ಪ್ರತ್ಯೇಕಿಸಿ ನೋಡಲಾಗದು.

4. ಈಗಲೂ ಬಹಳ ಖಂಡಿತವಾದ ನಂಬಿಕೆ ಏನೂಂತಂದರೆ, ಭಾಷೆಯೇ ನಮಗೆ ಅಂಥಾ ಒಂದು ಪ್ರಮುಖವಾದ ಆಕರ ಸಂಸ್ಕೃತಿಯ ತಿಳುವಳಿಕೆಗೆ.

ಮನಸ್ವೇಚ್ಚೆಯ ಸಾಹಿತ್ಯವಿಮರ್ಶೆಯನ್ನು ಗಮನಿಸಿದಾಗ, ಕೆವಿಎನ್ ಅವರ ಭಾಷಿಕ ದೃಷ್ಟಿಕೋನಕ್ಕೆ ಹೆಚ್ಚಿನ ಮಹತ್ವವಿದೆ. ನಿಜ ಆದರೆ, 'ಭಾಷೆಯೊಂದೇ ನಮಗಿರುವ ಏಕೈಕ ಆಧಾರ' ಎಂಬ ವೀರಮಾಹೇಶ್ವರನಿಷ್ಠೆಯನ್ನು ಒಪ್ಪಲಾಗುವುದಿಲ್ಲ. ಭಾಷಿಕ ಆಕರಗಳು ಮತ್ತು ಭಾಷೇತರ ಆಕರಗಳ ಸಹಯೋಗವನ್ನೂ ಮನಗಾಣಬೇಕಾಗುತ್ತದೆ.

'ಕೃತಿ'ಯನ್ನು 'ಸಂಸ್ಕೃತಿ'ಯ ಅನುಸಂಧಾನದಲ್ಲಿ ಪರಿಭಾವಿಸುವಾಗ ಭಾಷೆಯೊಂದೇ ಸಾಕಾಗುವುದಿಲ್ಲ. ನಿಸರ್ಗಕ್ಕೆ ಒಂದು ಭಾಷೆಯಿದೆ ಇದು ಮನುಷ್ಯಭಾಷೆಗಿಂತಲೂ ಮಿಗಿಲಾದುದು. ಸಹಜವಾದ ನಿಸರ್ಗ ಪ್ರೇಮದ 'ಕೃತಿ'ಗಳನ್ನು ಭಾಷಿಕ ತಿಳುವಳಿಕೆಯಿಂದ ಮಾತ್ರ ಪ್ರವೇಶಿಸುವುದು ಸಾಕಾಗುವುದಿಲ್ಲ. ದೃಶ್ಯಮಾಧ್ಯಮಗಳು ಎನ್ನುತ್ತೇವೆ. ಇಲ್ಲಿ ದೃಶ್ಯವೇ ಭಾಷೆ ಆಗುವುದಿಲ್ಲವೆ? ಸಾಹಿತ್ಯಕೃತಿಯನ್ನು ದೃಶ್ಯ ಮಾಧ್ಯಮಗಳ ಸಹಯೋಗದಲ್ಲೂ

ಅರ್ಥಮಾಡಿಕೊಳ್ಳಬಹುದು. ಕೂಡಿದ ಪಂಚೇಂದ್ರಿಯಗಳಲ್ಲಿ 'ನಾಲಗೆ' (ಭಾಷೆ) ಯೊಂದೇ ಅಧಿಕ! ಉಳಿದವುಗಳನ್ನು 'ಅಧಮ' ಎನ್ನಲಾಗದು. ಸಾಹಿತ್ಯಕೃತಿ ಭಾಷೆಯಲ್ಲಿ 'ರೂಪು'ಗೊಂಡಿದ್ದರೂ ಅದರಲ್ಲಿ 'ನಿರೂಪು'ಕೂಡ ಇರುತ್ತದೆ. ಶಬ್ದದೊಳಗಣನಿಃಶಬ್ದದಂತೆ! ಈ ಸಂಬಂಧ.

ಭಾಷೆ ಒಂದು ಉಪಾಧಿ (ಮಾನಸಿಕವಾದ ಅಡೆ-ತಡೆ) ಎಂಬ ಕುವೆಂಪು ಗ್ರಹಿಕೆ ಅತ್ಯುನ್ನತವಾಗಿದೆ. ವಿಶ್ವಮಾನವ ಸಂದೇಶದಲ್ಲಿ ಜಾತಿ, ಮತ, ಭಾಷೆ, ಕಾಲ, ದೇಶ ಈ ಉಪಾಧಿಗಳನ್ನು ಮೀರಬೇಕು ಎಂಬ ಆಶಯವಿದೆ. ಮಾನವ ನಿರ್ಮಿತ ಭಾಷೆ ಮತ್ತು ತರ್ಕಗಳನ್ನು ಅಂತಿಮವಾಗಿ ವಿಸರ್ಜಿಸಬೇಕೆಂಬ ಕೆ.ಟಿ. ಶಿವಪ್ರಸಾದ್ ನಿಲುವು ಈ ಸಂದರ್ಭದಲ್ಲಿ ನೆನಪಾಗುತ್ತಿದೆ. ಈ ದೃಷ್ಟಿಯಿಂದ ವಿವೇಚಿಸಿದರೆ, ದೇಸಿಗೆ ಆತ್ಮನಿಷೇಧದ ಕಲ್ಪನೆ ಬೇಕು. ಆತ್ಮನಿಷೇಧದ ತಾಕತ್ತು ದೇಸಿಗೆ ಸಮೃದ್ಧವಾಗಿದೆ. ಆದರೆ, ಸಾಹಿತ್ಯವಿಮರ್ಶೆಗೆ ಆತ್ಮನಿಷೇಧದ ಕಲ್ಪನೆಯೇ ಇಲ್ಲ. ಆತ್ಮಾಭಿವ್ಯಕ್ತಿಯ ಪ್ರಜ್ಞೆಯಿಂದ 'ಸಾಹಿತ್ಯವಿಮರ್ಶೆ' ಮೂಡಿಬಂದರೆ. ಆತ್ಮನಿಷೇಧ ಪ್ರಜ್ಞೆಯಿಂದ 'ದೇಸಿ' ಹುಟ್ಟುತ್ತದೆ.

'ಆತ್ಮಾಭಿವ್ಯಕ್ತಿ' ಮತ್ತು 'ಆತ್ಮನಿಷೇಧ' ಕುರಿತು ಸ್ಪಷ್ಟನೆ

1. 'ಆತ್ಮಾಭಿವ್ಯಕ್ತಿ' ಎಂದರೆ ತನ್ನನ್ನು ತಾನು ಅಭಿವ್ಯಕ್ತಿಗೊಳಿಸುವುದು. ವ್ಯಕ್ತಿ, ಕುಟುಂಬ, ಗ್ರಾಮ, ರಾಜ್ಯ, ರಾಷ್ಟ್ರ ಇವು ನಾನು ಮತ್ತು ನನ್ನದು (ಅಹಂಕಾರ ಮತ್ತು ಮಮಕಾರ) ಎಂಬ ಭಾವನೆಗಳನ್ನು ಆಹ್ವಾನಿಸುತ್ತಿರುತ್ತವೆ. ಇಂಥ ಆಹ್ವಾನವನ್ನು ಒಪ್ಪಿಕೊಂಡು ಅಭಿವ್ಯಕ್ತಿಗೊಳಿಸುವ ಎಲ್ಲ ವಿಚಾರಗಳು ಆತ್ಮಾಭಿವ್ಯಕ್ತಿಯಾಗುತ್ತದೆ. ಹಕ್ಕುಸ್ಥಾಪನೆ, ಒಡೆತನ, ಅಧಿಕಾರಮೋಹಗಳು ಇಲ್ಲಿರುತ್ತವೆ.

'ಆತ್ಮನಿಷೇಧ' ಎಂದರೆ ತನ್ನನ್ನು ತಾನು ನಿರಸನಗೊಳಿಸಿಕೊಳ್ಳುವುದು. ವ್ಯಕ್ತಿಯಿಂದ ಹಿಡಿದು ರಾಷ್ಟ್ರದವರೆಗೆ ಇಲ್ಲಿ ನಾನು ಮತ್ತು ನನ್ನದು (ಅಹಂಕಾರ ಮತ್ತು ಮಮಕಾರ) ಎಂಬ ಭಾವನೆಗಳಿಗೆ ಎಡೆಯಿಲ್ಲ ಕಾಲ-ದೇಶಗಳಿಗೆ ಸಂಬಂಧಪಟ್ಟ ಚಹರೆಗಳು, ಗಡಿಗೆರೆಗಳನ್ನು ಮೀರಿದ ಮುಕ್ತಮನಸ್ಸು ಇಲ್ಲಿ ಬಹುಮುಖ್ಯವಾಗುತ್ತದೆ.

2. ಆತ್ಮಾಭಿವ್ಯಕ್ತಿಯಿಂದಲೇ ಆತ್ಮಚರಿತ್ರೆ, ಜೀವನಚರಿತ್ರೆ, ದೇಶಚರಿತ್ರೆಗಳು ಹುಟ್ಟುತ್ತವೆ. ಈ ದೃಷ್ಟಿಯಿಂದಲೇ ಭಾರತೀಯರಿಗೆ ಚಾರಿತ್ರಿಕ ಪ್ರಜ್ಞೆ ಇಲ್ಲವೆಂದು ಹೇಳಲಾಗಿದೆ. ಆತ್ಮನಿಷೇಧವನ್ನು ಜನಪದ ಸಾಹಿತ್ಯದಲ್ಲಿ ಮತ್ತು ಭಕ್ತಕವಿಗಳಲ್ಲಿ ಕಾಣುತ್ತೇವೆ. ವೀರನಾರಾಯಣನೆ ಕವಿ ಲಿಪಿಕಾರ ಕುಮಾರವ್ಯಾಸ ಎಂಬ ನುಡಿ ಆತ್ಮನಿಷೇಧದಿಂದ ಹುಟ್ಟಿದೆ.

3. ಆತ್ಮನಿಷೇಧದ ಕಲ್ಪನೆಯನ್ನು ಡಿ.ಆರ್. ನಾಗರಾಜ ಇನ್ನೂ ವಿಶಾಲವಾದ ನೆಲೆಯಲ್ಲಿ ಚರ್ಚಿಸಿದ್ದಾರೆ "ಆಧುನಿಕ ವಿಜ್ಞಾನದ ಅತಿಮುಖ್ಯ ಸಮಸ್ಯೆ ಎಂದರೆ ಅದಕ್ಕೆ ಆತ್ಮನಿಷೇಧದ ಕಲ್ಪನೆ ಇಲ್ಲದಿರುವುದು. ಯೂರೋಪಿನ ವಿಜ್ಞಾನದ ಇತಿಹಾಸವನ್ನು ನೋಡಿದರೆ ಕಳೆದ ಇನ್ನೂರು ವರ್ಷಗಳಿಂದ ಅದಕ್ಕೆ ಆತ್ಮನಿಷೇಧದ ಕಲ್ಪನೆಯನ್ನು ನೀಡಲು ಸಾಹಿತಿಗಳು ಮತ್ತು ತತ್ವಜ್ಞಾನಿಗಳು ತೀವ್ರವಾಗಿ ಪ್ರಯತ್ನಿಸಿರುವುದು ತಿಳಿಯುತ್ತದೆ... ಅಂತೂ ವಿಜ್ಞಾನಕ್ಕೆ ಅತ್ಯಂತ ಉದಾತ್ತಾರ್ಥದಲ್ಲಿ ಸಂಸ್ಕೃತಿಯ ನಿಯಂತ್ರಣ ಇದ್ದೇ ತೀರಬೇಕು. ಈ ಶತಮಾನದಲ್ಲಿ ಕೆಲವು

ವಿಜ್ಞಾನಿಗಳು, ವಿಜ್ಞಾನಿ-ತಾತ್ವಿಕರು ಒಳಗಿನಿಂದಲೇ ಕೆಲವು ಆತ್ಮನಿಷೇಧಗಳನ್ನು, ಮುಖಿಗಳನ್ನು ತೋರಿಸಿ ವಿಮರ್ಶಿಸುವ ಕೆಲಸ ಮಾಡಿದರೆ ಇನ್ನೂ ಕೆಲವರು ವಿಜ್ಞಾನದ ಚರಿತ್ರೆಯನ್ನು ಒಂದು ನಿರ್ದಿಷ್ಟ ರೀತಿಯಲ್ಲಿ ವಿವರಿಸುವ ಕೆಲಸ ಮಾಡಿದರು."[1]

4. ನಿ. ಮುರಾರಿ ಬಲ್ಲಾಳ ಅವರು 'ಕಾಂಕ್ರೀಟು-ಕಾಂಕ್ರೀಟುಕಾಡು- ಪರಿಸರ' ಎಂಬ ಲೇಖನದಲ್ಲಿ ನಗರೀಕರಣದ ದುಷ್ಪರಿಣಾಮಗಳನ್ನು ಚರ್ಚಿಸಿದ್ದಾರೆ. ತನ್ನ ಪಾರಂಪರಿಕ ವೈಶಿಷ್ಟ್ಯವನ್ನು ಬಿಟ್ಟುಕೊಡುತ್ತಾ 'ಆತ್ಮವಿಹೀನ' ನಗರವಾಗುತ್ತಿರುವ ಮಂಗಳೂರಿನ ನಿದರ್ಶನದ ಮೂಲಕ ವ್ಯಾಪಾರ ಮತ್ತು ಲಾಭದ 'ಹಣ' ಕೇಂದ್ರಿತ ನಗರೀಕರಣವನ್ನು ನಿರೂಪಿಸಿದ್ದಾರೆ. ಸರಳ ರೇಖಾತ್ಮಕ ಗಗನಚುಂಬಿ ರಚನೆಗಳು, ಊರ್ಧ್ವಮುಖಿ ಆರ್ಥಿಕ ಬೆಳವಣಿಗೆ ಎಂಬ ಮಾತಾಡುತ್ತಾ ಅಹಂಕಾರ ಪ್ರದರ್ಶನವಾಗಿರುವ 'ವರ್ಟಿಕಲ್'ರಚನೆಗಳನ್ನು ತೀವ್ರವಾಗಿ ಖಂಡಿಸಿದ್ದಾರೆ. ಇದಕ್ಕೆ ಬದಲಾಗಿ ಆಯಾ ಪ್ರದೇಶಗಳಲ್ಲಿರುವ ಸ್ಥಳೀಯತಾತತ್ವವನ್ನು ಮೈಗೂಡಿಸಿಕೊಂಡು ನಿಸರ್ಗ ಸ್ನೇಹಿಯಾಗಿರುವ 'ಹಾರಿಜಾಂಟಲ್' ರಚನೆಗಳನ್ನು ಸಾಂಸ್ಕೃತಿಕ ನೆಲೆಯಿಂದ ವಿವೇಚಿಸಿದ್ದಾರೆ (ವರ್ಟಿಕಲ್ ಮತ್ತು ಹಾರಿಜಾಂಟಲ್ ರಚನೆಗಳು ಎಂಬುದು ನನ್ನ ನಿರೂಪಣೆ, ಹೆಚ್ಚಿನ ವಿವರಗಳಿಗೆ : ಪೂರ್ವೋಕ್ತ)

5. ಬಸವಣ್ಣನ ಮಾತುಗಳಲ್ಲಿ ಹೇಳುವುದಾದರೆ ಬೀಗುತ್ತಾ ಗಗನಚುಂಬಿಯಾಗಿ ಬೆಳೆಯುವುದು ಅಹಂಕಾರದ ಆತ್ಮಾಭಿವ್ಯಕ್ತಿ. ಬೀಗುತ್ತಾ ಬೆಳೆದರೂ ಗೊನೆಬಾಳೆಯಂತೆ ಬಾಗುತ್ತಾ ನೆಲ ಮುಟ್ಟುವುದು ನಿರಹಂಕಾರದ ಆತ್ಮನಿಷೇಧವಾಗುತ್ತದೆ. ಈ ದೃಷ್ಟಿಯಿಂದ ನೋಡಿದರೆ, ಇಪ್ಪತ್ತನೆ ಶತಮಾನವೊಂದರಲ್ಲೆ ಬೀಗುತ್ತಾ ಗಗನಚುಂಬಿಯಾಗಿ ವೈವಿಧ್ಯಮಯವಾಗಿ ಬೆಳೆದಿರುವ ಸಾಹಿತ್ಯವಿಮರ್ಶೆಯು ಆತ್ಮಾಭಿವ್ಯಕ್ತಿಯಾಗಿದೆ. ಆದರೆ, ಒಂದು ಸಾವಿರ ವರ್ಷಗಳನ್ನು ಮೀರಿದ ಸಂಸ್ಕಾರವನ್ನು ಪಡೆದಿರುವ ದೇಸಿ ಪ್ರಜ್ಞೆಯು ನೆಲದೆಡೆಗೆ ಬಾಗುತ್ತಾ ಆತ್ಮನಿಷೇಧವನ್ನು ಮನದುಂಬಿಕೊಂಡಿದೆ. ಇದನ್ನೆ ನಾನು ದೇಸಿ ಓದಿನ ವಿವೇಕಕ್ಕೆ ಇರುವ ವಿಸರ್ಜನದ ತಾಕತ್ತು ಎಂದು ಕರೆಯುತ್ತೇನೆ. (ದೇಸಿ ಪ್ರಜ್ಞೆಗೆ ಆತ್ಮನಿಷೇಧ ಅಗತ್ಯವೆಂಬ ನನ್ನ ಭಾಷಣದ ನಿರೂಪಣೆಯನ್ನು ಆಲಿಸಿದ ಹಿರಿಯ ವಿಮರ್ಶಕರಾದ ಡಾ. ಸಿ.ಎನ್. ರಾಮಚಂದ್ರನ್ ಅವರು ನನ್ನೊಂದಿಗೆ ಆತ್ಮೀಯವಾಗಿ ಚರ್ಚಿಸುತ್ತಾ ಆತ್ಮನಿಷೇಧ, ವಿಸರ್ಜನ ಇತ್ಯಾದಿ ರೂಪಕಶೈಲಿಯನ್ನು ವಿಮರ್ಶೆಯಲ್ಲಿ ಬಳಸಬಾರದು ಎಂದು ಹೇಳುತ್ತಾ 'ಆತ್ಮನಿಷೇಧ'ಎಂದರೇನು ಎಂಬುದು ನನಗೆ ಅರ್ಥವಾಗುತ್ತಿಲ್ಲ ಎಂದು ಪ್ರತಿಕ್ರಿಯಿಸಿದರು. ಸಿ.ಎನ್.ಆರ್ ಅವರ ಆತ್ಮೀಯ ಸಂವಾದವನ್ನು ಲಕ್ಷಿಸಿ, ಆತ್ಮಾಭಿವ್ಯಕ್ತಿ ಮತ್ತು ಆತ್ಮನಿಷೇಧ ಕುರಿತು ಸ್ಪಷ್ಟನೆಯನ್ನು ಇಲ್ಲಿ ನೀಡಿದ್ದೇನೆ. ನನ್ನ ಸ್ಪಷ್ಟನೆಯಲ್ಲಿ ಇನ್ನೂ ಅಸ್ಪಷ್ಟತೆ, ಗೊಂದಲಗಳಿದ್ದರೆ, ಇದನ್ನು ಪರಿಹರಿಸುವ ನಿಟ್ಟಿನಲ್ಲಿ ಸಹೃದಯರು ಆಲೋಚಿಸಬೇಕೆಂದು ಕೋರುತ್ತೇನೆ.

---

1. **ಅನುಭವಕಥನ ಮತ್ತು ಪರಿಸರ ಅಧ್ಯಯನ** (ಬಿ.ಎ. ಆರನೆಯ ಸೆಮಿಸ್ಟರ್ ಕನ್ನಡ ಪಠ್ಯ ಪುಸ್ತಕ, ಪು. 57 ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-2010)

ಆತ್ಮನಿಷೇಧದಿಂದ ಕೂಡಿರುವ ದೇಸಿ ಪ್ರಜ್ಞೆಯ ಸೃಜನಶೀಲತೆಯನ್ನು ಗ್ರಹಿಸಲಾರದವರು -ಭಾರತೀಯರಿಗೆ ಚಾರಿತ್ರಿಕ ಪ್ರಜ್ಞೆ ಇಲ್ಲ, ವಿಮರ್ಶಾಪ್ರಜ್ಞೆ ಇಲ್ಲ- ಮುಂತಾದ ಗೈರುಹಾಜರಿಗಳನ್ನು ಪ್ರಸ್ತಾಪಿಸಿದ್ದಾರೆ. ಈ ನೆಲದ ಜಾನಪದ ಮನಸ್ಸುಗಳಿಗೆ ಸೃಜನಶೀಲತೆಯ

ಅನುಸಂಧಾನ ಮುಖ್ಯವಾಗಿದ್ದರಿಂದಲೇ. ಪಾಶ್ಚಾತ್ಯರಲ್ಲಿರುವಂತೆ ಸುದೀರ್ಘವಾದ ವಿಮರ್ಶಾಪರಂಪರೆಯೊಂದು ಬೆಳೆದುಬರಲಿಲ್ಲ. ಪಾಶ್ಚಾತ್ಯರಿಗೆ 'ಸೃಜನಶೀಲ ಸಾಹಿತ್ಯ' ಮತ್ತು 'ಸೃಜನೇತರ ವಿಮರ್ಶೆ' ಎಂಬ ದ್ವೈತ ದೃಷ್ಟಿಯಿದೆ. ಆದರೆ, ಭಾರತೀಯರಿಗೆ ಇಂಥ ದ್ವೈತ ದೃಷ್ಟಿ ಇಲ್ಲದ್ದರಿಂದಲೇ ಸೃಜನಶೀಲ ಪ್ರತಿಭೆಯನ್ನು ಕಾರಯಿತ್ರೀ ಮತ್ತು ಭಾವಯಿತ್ರೀ ಎಂದು ಕರೆದಿದ್ದಾರೆ. ಕೃತಿಯಿಂದ ದೂರನಿಂತು ಪರಿಶೀಲಿಸುವ ವಿಮರ್ಶೆಗೆ ಬದಲು, ಕೃತಿಯೊಳಗೆ ಒಂದಾಗುವ ಹೃದಯಸಂವಾದ ನಮಗೆ ಬಹುಮುಖ್ಯವಾಗಿತ್ತು. ಕೃತಿ ಮತ್ತು ವಿಮರ್ಶೆಗಳ ಅದ್ವೈತ ದೃಷ್ಟಿಗೆ ಶಿವಗಣಪ್ರಸಾದಿ ಮಹಾದೇವಯ್ಯನ 'ಶೂನ್ಯ ಸಂಪಾದನೆ'ಯ ಸಂವಿಧಾನ ಉತ್ತಮ ನಿದರ್ಶನ. ಇದನ್ನು ಆತ 'ವಚನಕ್ರಮ ಸೇರುವೆ' ಎಂದು ಕರೆದಿದ್ದಾನೆ. ಅಂದರೆ, ವಚನ ಸಾಹಿತ್ಯದೊಳಗೆ ಸೇರುವ ಕ್ರಮ ಎಂದರ್ಥ. ವಚನ ಸಾಹಿತ್ಯದೊಳಗೆ ಸೇರದೆ ದೂರನಿಂತು ಪರಿಶೀಲಿಸುವುದರಿಂದ ವಿಮರ್ಶೆ ಹುಟ್ಟುತ್ತದೆ. ಕೃತಿಯೊಳಗೆ ಒಂದಾಗಿಬಿಡುವ ಈ ಹೃದಯಸಂವಾದ ಅಥವಾ ಕೂಡಲ ಸಂಗಮ ತತ್ವವನ್ನು 'ಶೂನ್ಯವಿಮರ್ಶೆ' (ಜೀರೊ ಕ್ರಿಟಿಸಿಸಂ) ಎಂದು ಕರೆಯಬಹುದು. ಜಪಾನಿನ ಫುಕೋವುಕ ಅವರ ಶೂನ್ಯಬೇಸಾಯ (ಜೀರೊ ಕಲ್ಟಿವೇಷನ್ ಅಥವಾ ಡು ನತಿಂಗ್ ಫಾರ್ಮಿಂಗ್) ಮಹಾತ್ಮ ಗಾಂಧಿಯವರ ಶೂನ್ಯ ಚಿಕಿತ್ಸೆ (ಜೀರೊ ಮೆಡಿಕೇಷನ್) ಗಳ ಜೊತೆಯಲ್ಲಿಟ್ಟು 'ಶೂನ್ಯ ವಿಮರ್ಶೆ'ಯನ್ನು ಅರ್ಥಮಾಡಿಕೊಳ್ಳಬೇಕು. ಕನಕನ ಕಾಣ್ಕೆಯಾದ "ನಾನು ಹೋದರೆ ಹೋಗಬಹುದು" ಎಂಬ ನುಡಿಮುತ್ತು, ಸೂಫಿಗಳು ಹೇಳುವ 'ನೀನೆಂಬ ನಾನು' ಮೇಲೆ ಹೇಳಿದ 'ಶೂನ್ಯವಿಮರ್ಶೆ' ಇವೆಲ್ಲ ಆತ್ಮನಿಷೇಧದ ಕಲ್ಪನೆಗಳೇ!

ನಾನು ಪ್ರಸ್ತಾಪಿಸಿರುವ 'ಸರ್ವಜ್ಞ ವೇಮನ ಸಂವಾದ' ಮತ್ತು ಸಂಯೋಜಿಸಿರುವ 'ಬಸವ ಅಲ್ಲಮ ಸಂವಾದ'ಗಳು ಕೂಡ 'ಶೂನ್ಯವಿಮರ್ಶೆ'ಯ ನಿದರ್ಶನಗಳಾಗಿರುವುದರ ಜೊತೆಗೆ, ಕನ್ನಡದಲ್ಲಿ ನೆಲೆಯೂರಿದ 'ಸಾಹಿತ್ಯವಿಮರ್ಶೆ'ಯ ಚೌಕಟ್ಟುಗಳ ನಿರಾಕರಣೆಯೂ ಆಗಿದೆ. (ಹೆಚ್ಚಿನ ವಿವರಗಳಿಗೆ ನಾ ನಿಮ್ಮೊಳಗು, ಲೋಹಿಯಾ ಪ್ರಕಾಶನ ಬಳ್ಳಾರಿ) ಈ ದೃಷ್ಟಿಯಿಂದ ಪರಿಶೀಲಿಸಿದರೆ, ಕನ್ನಡದ್ದೇ ಆದ ದೇಸಿ ಸಾಹಿತ್ಯ ಮೀಮಾಂಸೆಯನ್ನು ಕಟ್ಟಿಕೊಳ್ಳುವ ಅಗತ್ಯವಿದೆ. 'ದೇಸಿ' ಎಂದರೇನು? ಎಂಬುದಕ್ಕೆ ಒಂದು ನಿರ್ದಿಷ್ಟವಾದ ಸೂತ್ರರೂಪದ ವ್ಯಾಖ್ಯಾನ ಮಾಡುವುದಕ್ಕೆ ಬದಲು 'ದೇಸಿ'ಯ ಸುವಿಶಾಲವಾದ ಸ್ವರೂಪ ಮತ್ತು ಅನಂತ ವೈವಿಧ್ಯತೆಗಳನ್ನು ಗ್ರಹಿಸುವುದು ಮೇಲು! 'ದೇಸಿ' (1) ಭಾಷಿಕ ಪರಿಕರಗಳ ನೆಲೆಯಲ್ಲಿ ಸಹಸ್ರನಾಲಗೆಯುಳ್ಳ ಆದಿಶೇಷನಿಗೂ 'ದೇಸಿ'ಯ ವೈವಿಧ್ಯವನ್ನು ವರ್ಣಿಸಲು ಸಾಧ್ಯವಿಲ್ಲ ಎಂಬ ಕವಿರಾಜಮಾರ್ಗಕಾರನ ನಿರೂಪಣೆ. (2) ಸಾಹಿತ್ಯ ಪರಿಕರಗಳ ನೆಲೆಯಲ್ಲಿ – ಕೃತಿಯ ಛಂದಸ್ಸು, ವಸ್ತು, ಕಾವ್ಯ ದೃಷ್ಟಿಗಳು 'ದೇಸಿ'ಯ ಸ್ವರೂಪದರ್ಶಿಗಳಾಗಬಲ್ಲವು (3) ಜೀವನಶೈಲಿಯ ನೆಲೆಯಲ್ಲಿ ಮನುಷ್ಯರು ಆಲೋಚಿಸುವ ಮತ್ತು ಬದುಕುವ ಬಗೆಗಳು. ಮನುಷ್ಯರ ರುಚಿ ಮತ್ತು ಅಭಿರುಚಿಗಳು. ಅವರು ಪಡೆದುಕೊಳ್ಳುವ ಸಂಸ್ಕಾರಗಳು ಮತ್ತು ಕಲಿಕೆಗಳು ಇವು ಕೂಡ 'ದೇಸಿ'ಯ ಸ್ವರೂಪದರ್ಶಿಗಳೇ! ಮಾನವನ ಸಮಗ್ರ ಜೀವನ ಶೈಲಿಯಲ್ಲಿ 'ದೇಸಿ'ಯನ್ನು ಕಂಡುಕೊಳ್ಳುವ ದೃಷ್ಟಿಯಿಂದ 'ಸಿವಿಕ್‌ವಿಸ್‌ಡಮ್' ಮತ್ತು 'ಫೋಕ್ ವಿಸ್‌ಡಮ್' ಎಂಬ ಪರಿಭಾಷೆಗಳನ್ನು ಬಳಸಲು ಇಚ್ಛಿಸುತ್ತೇನೆ.

ಸಿವಿಕ್ ವಿಸ್‌ಡಮ್ : ಇದನ್ನು ಪೌರನೀತಿಯ ಧೀಮಂತಿಕೆ ಎನ್ನಬಹುದು. ನೂತನ ರಾಷ್ಟ್ರನಿರ್ಮಾಣದಲ್ಲಿ ಪೌರರ ಪಾತ್ರವೇನು? ಅವರು ನಿರ್ವಹಿಸಬೇಕಾದ ಜವಾಬ್ದಾರಿಗಳು

ಪ್ರಮುಖ ಕರ್ತವ್ಯಗಳು ಯಾವುವು? ಎಂಬುದನ್ನು ಸವಿಸ್ತಾರವಾಗಿ ತಿಳಿಸಿಕೊಡುವ ಜ್ಞಾನಶಿಸ್ತು 'ಸಿವಿಕ್ಸ್' ಅಥವಾ ಪೌರನೀತಿ ಶಾಸ್ತ್ರ. ಇದಕ್ಕೆ ಅನುಗುಣವಾಗಿ ರೂಪುಗೊಳ್ಳುವ ವ್ಯಕ್ತಿತ್ವಗಳನ್ನು ಪೌರರು, ನಾಗರಿಕರು, ಪ್ರಜೆಗಳು ಎಂದು ಕರೆಯುತ್ತಾರೆ. ಗ್ರೀಕ್ ತತ್ವಜ್ಞಾನಿ ಪ್ಲೇಟೋ ತನ್ನ ಆದರ್ಶರಾಜ್ಯದಲ್ಲಿರಬೇಕಾದ ಪ್ರಜೆಗಳ ಕುರಿತು ಹೇಳಿರುವ ಮಾತುಗಳನ್ನಿಲ್ಲಿ ಸ್ಮರಿಸಬಹುದು. ಒಂದು ಕ್ರಮಶಿಕ್ಷಣಕ್ಕೆ ಅಥವಾ ನಿರ್ದಿಷ್ಟವಾದ ರಾಷ್ಟ್ರೀಯ ಶಿಕ್ಷಣದ ಯೋಜನೆಗೆ ಒಳಪಡದ ಕವಿಗಳನ್ನು ಪ್ಲೇಟೋ ಹೊರಗಟ್ಟಿದ್ದಾನೆ. ಯಾವುದೇ ಕಟ್ಟುಪಾಡುಗಳಿಗೆ ಒಳಗಾಗದ ಮತ್ತು ನಿರಂಕುಶಮತಿಯ ಕವಿಗಳಿಗೆ ಇಲ್ಲಿ ಸ್ಥಾನವಿಲ್ಲ. 'ಸಿವಿಕ್ ವಿಸ್‌ಡಮ್' ಎಂದರೇನು? ಒಂದು ನಿರ್ದಿಷ್ಟ ಸಂವಿಧಾನದ ಮೂಸೆಯಲ್ಲಿ ಪ್ರಜೆಗಳ ಮನಸ್ಸನ್ನು ಎರಕಹೊಯ್ದು ತಿದ್ದಿತೀಡಿದ ವ್ಯಕ್ತಿತ್ವಸಿದ್ಧಿಯನ್ನೇ 'ಸಿವಿಕ್ ವಿಸ್‌ಡಮ್' ಎನ್ನಬಹುದು ಇವರೆಲ್ಲ ಕಲಿತವರು ಮತ್ತು ಸುಸಂಸ್ಕೃತರು.

ಫೋಕ್ ವಿಸ್‌ಡಮ್: ಇದನ್ನು ಜಾನಪದ ಧೀಮಂತಿಕೆ ಎನ್ನಬಹುದು. ಒಂದು ಪ್ರಭುತ್ವ ಅಥವಾ ಒಂದು ರಾಷ್ಟ್ರದ ನೀತಿಗನುಗುಣವಾದ ಸಾರ್ವಜನಿಕ ಶಿಕ್ಷಣದ ವ್ಯಾಪ್ತಿಗೊಳಪಡದ ಜನಸಮುದಾಯಗಳಿಗೆ ಮೌಖಿಕ ಪರಂಪರೆಯ ಸುಸ್ಥಿರವಾದ ಬೆಂಬಲವಿರುತ್ತದೆ. ನವ ನವೀನವಾದ ಶಿಕ್ಷಣ ವ್ಯವಸ್ಥೆಯ ತೆಕ್ಕೆಗೊಳಪಡದೆ, ತಮ್ಮ ಪಾಡಿಗೆ ತಾವೆಂಬಂತೆ ಬದುಕುತ್ತಾ ಬರುವ ಜನ ಸಮುದಾಯಗಳು ಕಲಿತವರಿಗಿಂತ ಹೆಚ್ಚು ಪ್ರಾಕೃತಿಕರಾಗಿರುತ್ತಾರೆ. ಕುಮಾರವ್ಯಾಸ್ಯಭಾರತದ 'ತೋರಣನಾಂದಿ'ಯಲ್ಲಿ ಕುವೆಂಪು ಗುರುತಿಸಿರುವ 'ಪ್ರಾಕೃತ ಸಮೃದ್ಧಿ' ಮತ್ತು 'ಪ್ರಾಕೃತಿಕ ರೂಕ್ಷತಾರಮಣೀಯತೆ' ಎಂಬ ನುಡಿಗಳನ್ನಿಲ್ಲಿ ನೆನಪು ಮಾಡಿಕೊಳ್ಳಬಹುದು. ಕಲಿತ ಜನರು ಇಂಥವರಿಗೆ ಗ್ರಾಮ್ಯರು, ಅಸಂಸ್ಕೃತರು ಎಂಬ ಹಣೆಪಟ್ಟಿ ಹಚ್ಚುತ್ತಾರೆ. ಈ ಗ್ರಾಮ್ಯರು ಅಥವಾ ಅಸಂಸ್ಕೃತರ ಎದೆಗಳಲ್ಲಿರುವ ಪದಗಳು (ಸಾಹಿತ್ಯ) ಪಾರಂಪರಿಕವಾದ ಜ್ಞಾನ ಮತ್ತು ಜೀವನಾನುಭವದ ವಿವೇಕಗಳು ಮನ್ನಣೆ ಇಲ್ಲದೆ ಮೂಲೆಗುಂಪಾಗುತ್ತವೆ. ಇದನ್ನೆ ನಾನಿಲ್ಲಿ ಫೋಕ್‌ವಿಸ್‌ಡಮ್ ಎಂದು ಕರೆಯುತ್ತಿದ್ದೇನೆ. ಕರ್ವಾಲೋ ಮತ್ತು ಮಂದಣ್ಣ, ಅರಿಸ್ಟಾಟಲ್ ಮತ್ತು ಚೀಂಕ್ರ ಮೇಸ್ತ್ರಿ (ಪೂಚಂತೇ) ಎಂಬ ಸಾಂಗತ್ಯದಲ್ಲಿ ಪರಿಭಾವಿಸಿ ನೋಡಿದರೆ ಸಿವಿಕ್ ವಿಸ್‌ಡಮ್ ಮತ್ತು ಫೋಕ್‌ವಿಸ್‌ಡಮ್ ಎಂಬ ಪರಿಭಾಷೆಗಳ ಅರ್ಥವ್ಯಾಪ್ತಿ ಮತ್ತಷ್ಟು ಸುಸ್ಪಷ್ಟವಾಗುತ್ತದೆ.

ಪ್ರಸ್ತುತ 'ಸಿವಿಕ್‌ವಿಸ್‌ಡಮ್' ಮತ್ತು 'ಫೋಕ್‌ವಿಸ್‌ಡಮ್'ಗಳನ್ನು ಲಕ್ಷ್ಯದಲ್ಲಿಟ್ಟುಕೊಂಡು ಬೇರುಮೂಲದ ವಿಚಾರಸರಣಿಯನ್ನು ಮುಂದೆ ನಿರೂಪಿಸಲಾಗಿದೆ. ಇದನ್ನು ದೇಸಿ ಸಾಹಿತ್ಯಮೀಮಾಂಸೆಯ ಸ್ವರೂಪದರ್ಶನವನ್ನಾಗಿಯೂ ಪರಿಭಾವಿಸಬೇಕೆಂದು ಕೋರುತ್ತೇನೆ.

1. ಶಬ್ದಜ್ಞಾನದಿಂದ ಬಿಂಬಜ್ಞಾನಕ್ಕೆ

ಮನುಷ್ಯರ ಸಮಸ್ತಜ್ಞಾನ ಮತ್ತು ಅನುಭವಗಳ ಗ್ರಹಿಕೆಯನ್ನು ಶಿವರಾಮ ಕಾರಂತರು 'ಶಬ್ದ' ಮತ್ತು 'ಬಿಂಬ' ಎಂದು ಕರೆದಿದ್ದಾರೆ (ನಮ್ಮ ಅಳತೆಯನ್ನು ಮೀರಲಾರದ ದೇವರು) ಐದು ಇಂದ್ರಿಯಗಳಿಂದ ಗ್ರಹಿಸುವ ಎಲ್ಲ ವಸ್ತುವಿಷಯಗಳು ನಮ್ಮ ಪಾಲಿಗೆ 'ಬಿಂಬಜ್ಞಾನ'ವಾದರೆ. ಐದು ಇಂದ್ರಿಯಗಳ ವ್ಯಾಪ್ತಿಗೆ ಒಳಪಡದ ವಸ್ತುವಿಷಯಗಳು (ಉದಾ ದೇವರು) 'ಶಬ್ದಜ್ಞಾನ'ವಾಗುತ್ತವೆ ಎಂಬುದು ಕಾರಂತರ ನಿರೂಪಣೆ. ಶಬ್ದ-ಬಿಂಬಗಳಿಗೆ ಭಾಷಾವಿಜ್ಞಾನದ ನೆಲೆಯಿಂದಲೂ ವಿವರಣೆ ನೀಡಬಹುದು ಒಂದು ಭಾಷೆಯ ಪದಕೋಶದಲ್ಲಿ

'ಸಾಮಾನ್ಯಪದ' (ಜನರಿಕ್ ವರ್ಡ್ಸ್) ಮತ್ತು 'ವಿಶಿಷ್ಟಪದ' (ಸ್ಪೆಸಿಫಿಕ್ ವರ್ಡ್ಸ್)ಗಳಿರುತ್ತವೆ. ಕಲಿತವರು ಸಾಮಾನ್ಯ ಪದಗಳನ್ನು ಆಧರಿಸಿ ಮಾತನಾಡಿದರೆ, ಅಶಿಕ್ಷಿತರು ವಿಶಿಷ್ಟ ಪದಗಳನ್ನು ಮಾತ್ರ ಉಚ್ಚರಿಸುತ್ತಾರೆ. ಉದಾಹರಣೆಗೆ, ಕಲಿತವರು 'ಮೀನು' ಎಂಬ ಸಾಮಾನ್ಯ ಪದವನ್ನು ಬಳಸುತ್ತಿದ್ದರೆ, ಅಶಿಕ್ಷಿತರು ಈ ಸಾಮಾನ್ಯ ಪದವನ್ನು ಬಳಸುವುದೇ ಇಲ್ಲ! ವಿಶಿಷ್ಟಪದಗಳಾದ ಕುಚ್ಚುಲು, ಅವಲು, ಚೇಳು, ಗಿರ್ಲು, ಕೊರಮ, ಬಾಳೆ, ಮುರುಗುಂಡು ಮುಂತಾದವುಗಳನ್ನು ಬಳಸುತ್ತಾರೆ. ಸಾಮಾನ್ಯ ಪದಗಳನ್ನು 'ಶಬ್ದಜ್ಞಾನ'ವೆಂದೂ ವಿಶಿಷ್ಟಪದಗಳನ್ನು 'ಬಿಂಬಜ್ಞಾನ'ವೆಂದೂ ಕರೆಯಬಹುದು. ದೇಸಿ ಸಾಹಿತ್ಯದಲ್ಲಿ 'ಶಬ್ದಜ್ಞಾನದಿಂದ ಬಿಂಬಜ್ಞಾನಕ್ಕೆ' ಎಂಬ ಮನೋಯಾನವನ್ನು ಗುರುತಿಸಬಹುದು. ಪಂಪ-ಕುಮಾರವ್ಯಾಸ ಕುವೆಂಪು ಅವರು ನಿರ್ವಹಣೆ ಮಾಡಿದ ಇತಿವೃತ್ತಗಳಲ್ಲಿ ಸಂಸ್ಕೃತದಿಂದ ಲಭ್ಯವಾದ ಶಬ್ದಜ್ಞಾನಕ್ಕೆ ಬದಲಾಗಿ ದೇಸಿ ಪ್ರಜ್ಞೆಯ ಬಿಂಬಜ್ಞಾನವೇ ತುಂಬಿ ಹರಿದಿದೆ. ಇದನ್ನು 'ಗ್ರಂಥಜ್ಞಾನ'ದಿಂದ 'ನಿರ್ಗ್ರಂಥಜ್ಞಾನ'ದ ಕಡೆಗೆ ಎಂದೂ ಹೇಳಬಹುದು.

2. ಕಾಲಮಾನದಿಂದ ಕಾಲಪ್ರವಾಹಕ್ಕೆ

ಕಾಲವನ್ನು ಮಾನಕದಿಂದ ಅಳೆಯುವ, ಕಾಲಕ್ಕೆ ಚೌಕಟ್ಟು ತೊಡಿಸುವ ಬಗೆಯು ಸಿವಿಕ್‌ವಿಸ್‌ಡಮ್‌ನಲ್ಲಿದೆ. ಭೂತ-ವರ್ತಮಾನ, ಭವಿಷ್ಯಗಳೆಂಬ ಮೂರುಬಗೆಯ ಕಾಲಮಾನಗಳು, ಕಿ.ಪೂ. ಮತ್ತು ಕ್ರಿ.ಶ ಎಂಬ ಇಬ್ಬಗೆಯ ಕಾಲ ಮಾನಗಳು, ಶಾಲಿವಾಹನಶಕೆ ಹಿಜಿರಾ, ಚಾಂದ್ರಮಾನ, ಸೌರಮಾನ ಮುಂತಾದ ಬಗೆಬಗೆಯ ಕಾಲಮಾನಗಳು ಕಾಲವನ್ನು ಅಳೆಯುವ ಮನುಷ್ಯರ ಚಪಲಬುದ್ಧಿಯ ವ್ಯರ್ಥಪ್ರಯತ್ನಗಳೇ ಸರಿ! ಇಂಥ ಕಾಲಮಾನ ಮತ್ತು ಕಾಲಾನುಕ್ರಮಣಿಕೆಯ ದಾಖಲಾತಿಗಳನ್ನೆ ಚಾರಿತ್ರಿಕ ಪ್ರಜ್ಞೆ ಎಂದು ತಿಳಿದ ಪಾಶ್ಚಾತ್ಯ ಪ್ರಾಜ್ಞರು, ಭಾರತದಲ್ಲಿ ಇದರ ಗೈರು ಹಾಜರಿಯನ್ನು ಮನಗಂಡು ಚಾರಿತ್ರಿಕ ಪ್ರಜ್ಞೆ ಇಲ್ಲದವರು ಎಂದು ಟೀಕೆ ಮಾಡಿದರು. ಈ ನೆಲದ ದೇಸಿಪ್ರಜ್ಞೆಗೆ ಕಾಲಮಾನದ ಹಂಗಿಲ್ಲ. ಆದಿ ಮಧ್ಯಾಂತಗಳಿಲ್ಲದ ನಿತ್ಯನೂತನ ಕಾಲಪ್ರವಾಹದಲ್ಲಿ ಬದುಕುತ್ತಿದ್ದವರಿಗೆ 'ಕಾಲಮಾನ'ವೆಂಬ ಕೂಪಮಂಡೂಕ ಪ್ರಜ್ಞೆಯೇ ಇರಲಿಲ್ಲ. ದೇಸಿ ಸಾಹಿತ್ಯದಲ್ಲಿ ಪುರಾಣ-ವರ್ತಮಾನಗಳ ಅದ್ವೈತ ದೃಷ್ಟಿಯಿದೆ. ಪುರಾಣವನ್ನು ವರ್ತಮಾನವನ್ನಾಗಿ, ವರ್ತಮಾನವನ್ನು ಪುರಾಣವನ್ನಾಗಿ ಪರಿವರ್ತಿಸುವ ಜಾನಪದ ಜಾದೂ ಪ್ರಜ್ಞೆಯಿಂದ ಪಂಪ-ಕುಮಾರವ್ಯಾಸ ಕುವೆಂಪು ಅವರ ಮಹಾಕಾವ್ಯಗಳು ಮೂಡಿಬಂದಿವೆ. ಕಾಲಮಾನವನ್ನು ತಿರಸ್ಕರಿಸುವ ದೇಸಿಪ್ರಜ್ಞೆಯು ತನ್ನನ್ನು ಗುರುತಿಸಿಕೊಳ್ಳುವುದು ಅನಂತವಾದ ಕಾಲಪ್ರವಾಹದಲ್ಲಿ. ನಾಮ-ರೂಪಗಳಿಲ್ಲದ, ಸದಾ ಆಗುತ್ತಿರುವ ಕಾಲವನ್ನು ಮನಗಂಡ ಫೋಕ್‌ವಿಸ್‌ಡಮ್‌ನ ಕಾಣ್ಕೆ ಅತ್ಯುನ್ನತವಾದುದು ಹಿಂದಣ ಅನಂತವನೂ ಮುಂದಣ ಅನಂತವನೂ ಒಂದು ದಿನ ಒಳಕೊಂಡಿತ್ತು ನೋಡಾ ಎಂಬ ಅಲ್ಲಮನ ಕಾಣ್ಕೆಯಲ್ಲಿ ಫೋಕ್‌ವಿಸ್‌ಡಮ್ ಇದೆ. ಕಾಲವನ್ನು ಮಾನಕಗೊಳಿಸುವುದೆಂದರೆ ಸ್ಥಾವರದ ಗ್ರಹಿಕೆಯೇ ಸರಿ! ಕಾಲ ಪ್ರವಾಹವೆಂಬ ಮಾತಿನಲ್ಲಿ ಜಂಗಮದ ಬಗೆಯಿದೆ.

3. ಮನುಷ್ಯಕೇಂದ್ರದಿಂದ ಜೀವಕೇಂದ್ರಕ್ಕೆ

ಸಿವಿಕ್‌ವಿಸ್‌ಡಮ್‌ನ ತಿರುಳನ್ನು ಮನುಷ್ಯಕೇಂದ್ರವೆಂದೇ ಕರೆಯಬಹುದು. ಪ್ರಭುತ್ವ ಅಥವಾ ರಾಷ್ಟ್ರಕ್ಕೆ ಬೇಕಾದ 'ಮನುಷ್ಯ'ರನ್ನು ತಯಾರುಮಾಡುವ ಭರದಲ್ಲಿ ಸಿವಿಕ್‌ವಿಸ್‌ಡಮ್ ತನ್ನ

ಮುಂಗಾಣ್ಕೆಯನ್ನೆ ಕಳೆದುಕೊಂಡು ಬಿಡುತ್ತದೆ. ಆರ್ಥಿಕ, ಸಾಮಾಜಿಕ, ರಾಜಕೀಯ, ಶೈಕ್ಷಣಿಕ, ಧಾರ್ಮಿಕ ಮುಂತಾದ ಎಲ್ಲ ಬಗೆಯ ರಚನೆಗಳು ಮತ್ತು ನಿರ್ಮಾಣಗಳ ಉದ್ದೇಶ ಮನುಷ್ಯರ ಒಳಿತು ಮತ್ತು ಏಳ್ಗೆಯೇ ಆಗಿರುತ್ತದೆ. ಮನುಷ್ಯರನ್ನು ಸಕಲ ಜೀವರಾಶಿಯ ಒಂದು ಭಾಗವಾಗಿ ಕಾಣದೆ, ಮನುಷ್ಯರಿಂದ ಮನುಷ್ಯರಿಗಾಗಿ ಮನುಷ್ಯರೇ ರೂಪಿಸಿಕೊಳ್ಳುವ ಯೋಜನೆಗಳೆಲ್ಲವೂ ಕಡೆಗೆ ತೋಪಾಗಿಬಿಡುತ್ತವೆ. ಮನುಷ್ಯರಿಗೆ ಸೃಷ್ಟಿಯ ಕನಿಷ್ಠಜೀವಿಗಳೊಂದಿಗೆ ಇರಬೇಕಾದ ಸೋದರಸ್ನೇಹ, ಪರಿಸರ ಮತ್ತು ಪರ್ಯಾವರಣದ (ಇಕಾಲಜಿ) ಸಹ ಸಂಬಂಧಗಳು ಮೂಲೆಗುಂಪಾಗುತ್ತವೆ. ಮನುಕುಲದ ದಿಕ್ಕುದಿಶೆಗಳನ್ನು ಬದಲಿಸಿದ ಎರಡು ಅಲೆಗಳು ಎನ್ನಬಹುದಾದ ಕೈಗಾರಿಕೀಕರಣ ಮತ್ತು ಜಾಗತೀಕರಣ ಇವೆರಡೂ ಪ್ರಕ್ರಿಯೆಗಳಲ್ಲಿ ಪರಿಸರ ಮತ್ತು ಪರ್ಯಾವರಣಗಳು ತೀವ್ರವಾದ ನಿರ್ಲಕ್ಷ್ಯಕ್ಕೆ ತುತ್ತಾಗಿವೆ. ಒಂದು ಮಹಾನಗರ ರೂಪುಗೊಂಡಿತೆಂದರೆ, ಸಹಜೀವಿ ಸಂಕುಲಕ್ಕೆ ಎಳ್ಳು ನೀರು ಬಿಟ್ಟಂತೆಯೇ! ಸೃಷ್ಟಿಯ ಕನಿಷ್ಠ ಜೀವಿಗಳೊಡನೆ ಒಗೆತನದಿಂದ ಬಾಳಿದ ಮತ್ತು ಬಾಳುತ್ತಿರುವ ದೇಸಿ ಪ್ರಜ್ಞೆಯ ಬೇರುಗಳನ್ನು ಫೋಕ್‌ವಿಸ್‌ಡಮ್‌ನಲ್ಲಿ ಕಾಣುತ್ತೇವೆ. ಮನುಷ್ಯಕೇಂದ್ರದ ಆಲೋಚನೆ ಮತ್ತು ಆಚರಣೆಗಳನ್ನು ಜೀವಕೇಂದ್ರಕ್ಕೆ ಪರಿವರ್ತಿಸುವ ಕೂಡಲಸಂಗಮ ಪ್ರಜ್ಞೆ ಫೋಕ್‌ವಿಸ್‌ಡಮ್‌ನಲ್ಲಿದೆ.

4. ಪ್ರಮಾಣಗಳಿಂದ ಅಪ್ರಮಾಣಕ್ಕೆ

ಮನುಷ್ಯರ ಕ್ರಿಯೆ–ಕಾಲ–ದೇಶಗಳಿಗೆ ಬದ್ಧವಾದ ಎಲ್ಲ ರಚನೆಗಳು ಮತ್ತು ನಿರ್ಮಾಣಗಳು 'ಪ್ರಮಾಣ'ವೆನಿಸಿಕೊಳ್ಳುತ್ತವೆ. ಶ್ರವಣಬೆಳುಗೊಳದ ಶಾಸನದಲ್ಲಿ ಹೇಳಿರುವ "ಶ್ರೀ ರೂಪ ಲೀಲಾಧನವಿಭವ ಮಹಾರಾಶಿಗಳ್ ನಿಲ್ಲವು ಆರ್ಗಂ" ಎಂಬ ನುಡಿ ಮಾನವ ನಿರ್ಮಿತ ಪ್ರಮಾಣಗಳ ನಶ್ವರತೆಯನ್ನು ಸೂಚಿಸುತ್ತಿದೆ. ನಾನು (ಅಹಂಕಾರ) ಮತ್ತು ನನ್ನದು (ಮಮಕಾರ) ಎಂದು ಹಕ್ಕು ಸ್ಥಾಪನೆಮಾಡುವ ರಚನೆಗಳು ಮತ್ತು ನಿರ್ಮಾಣಗಳು ಖಾಸಗಿಯಿರಲಿ ಅಥವಾ ಸಾರ್ವಜನಿಕವಿರಲಿ ಇವೆಲ್ಲವೂ ಪ್ರಮಾಣಗಳೇ! ಕುಟುಂಬ, ಖಾಸಗಿ ಆಸ್ತಿ, ರಾಜ್ಯಗಳು ಮಾತ್ರವಲ್ಲ! ಭಾಷೆ ಧರ್ಮ, ಜಾತಿ, ನೀತಿಗಳೆಲ್ಲವೂ ಪ್ರಮಾಣಗಳೇ! ನಾವು ರೂಪಿಸಿಕೊಳ್ಳುವ ಸಂಬಂಧಗಳು, ನಾವು ಪೂಜಿಸುವ ದೇವರು, ಪವಿತ್ರ ಗ್ರಂಥಗಳು, ಪುಣ್ಯಕ್ಷೇತ್ರಗಳು ಇವು ಕೂಡ ಪ್ರಮಾಣಗಳೇ! ಇಂಥ ಪ್ರಮಾಣಗಳ ಬಗ್ಗೆ ಒಂದು ಕ್ರಮಶಿಕ್ಷಣ ನೀಡುವುದನ್ನು ಶಿಪಿಕ್‌ವಿಸ್‌ಡಮ್‌ನಲ್ಲಿ ಕಾಣುತ್ತೇವೆ. ಆದರೆ, ಫೋಕ್‌ವಿಸ್‌ಡಮ್ ಇದಕ್ಕೆ ತದ್ವಿರುದ್ಧವಾದುದು. ಅಮ್ಮನಸೀರೆ ಮಡಿಚಲಾಗದು, ಅಪ್ಪನದುಡ್ಡು ಎಣಿಸಲಾಗದು ಎಂಬ ಒಗಟಿನಲ್ಲಿ ಸೀರೆ ಮತ್ತು ದುಡ್ಡು ಎಂಬ ಪ್ರಮಾಣಗಳ ಮೂಲಕ ಅಪ್ರಮಾಣದ ಸ್ವರೂಪವನ್ನು ದರ್ಶಿಸಲಾಗಿದೆ.

ಹೀಗೆ ಅಪ್ರಮಾಣ ವಿಹಾರಿಯಾದ ಮನಸ್ಸು ದೇಸಿ ಪ್ರಜ್ಞೆಗೆ ಸಹಜವಾದುದು. ಪ್ರಮಾಣಕ್ಕೆ ತಂದುಕೊಳ್ಳುವ ಬಗೆಯು ಶಿಪಿಕ್‌ವಿಸ್‌ಡಮ್‌ನಲ್ಲಿದ್ದರೆ, ಅಪ್ರಮಾಣವನ್ನು ತುಂಬಿಕೊಳ್ಳುವ ಬಗೆ ಫೋಕ್‌ವಿಸ್‌ಡಮ್‌ನಲ್ಲಿದೆ. ಇದನ್ನು 'ನಿಕೇತನ ಜ್ಞಾನ' ದಿಂದ 'ಅನಿಕೇತನ ಜ್ಞಾನ'ದೆಡೆಗೆ ಎಂಬ ಮಾತುಗಳಲ್ಲೂ ಹೇಳಬಹುದು "ನಿಮ್ಮ ನಡತೆಗೆ ಪ್ರಮಾಣವು ಶಾಸ್ತ್ರವಲ್ಲ ನೀವೆ ಶಾಸ್ತ್ರಕ್ಕೆ ಪ್ರಮಾಣ" ಎಂಬ ಸ್ವಾಮಿ ವಿವೇಕಾನಂದರ ಮಾತುಗಳನ್ನಿಲ್ಲಿ ಸ್ಮರಿಸಿಕೊಳ್ಳಬಹುದು. (ಅನುಷ್ಠಾನ ವೇದಾಂತ, ಪುಟ 24)

5. ವಾಗ್‌ವಿಲಾಸಗಳಿಂದ ಮೂಕ ಸಂಧಾನಕ್ಕೆ

‘ಸಿವಿಕ್ ವಿಸ್‌ಡಮ್’ ಪಡೆದುಕೊಂಡವರು ಮಾತಿನ ಮಂಟಪ ಕಟ್ಟುವುದರಲ್ಲಿ ಮಹಾಪ್ರವೀಣರು. ಮಹಾನ್ ವಿದ್ವಾಂಸರು, ಘನಪಾಂಡಿತ್ಯ ಉಳ್ಳವರು ತೋರುವ ವಾಗ್‌ವಿಲಾಸಗಳಿಗೆ ಎಣೆಯೇ ಇಲ್ಲ. ತಮ್ಮ ವಿದ್ವತ್ ಚೇಷ್ಟೆಗಳಿಂದ ಕವಿಗಳನ್ನು ತಬ್ಬಿಬ್ಬುಗೊಳಿಸುವ ಅಷ್ಟಾವಧಾನಿ, ಶತಾವಧಾನಿಗಳ ಪರಂಪರೆಯೇ ತೆಲುಗಿನಲ್ಲಿದೆ. ತೆನಾಲಿರಾಮಕೃಷ್ಣ, ಬೀರಬಲ್ ಮುಂತಾದವರು ತಮ್ಮ ಜಾನಪದ ಧೀಮಂತಿಕೆಯಿಂದ ಇಂಥ ವಿದ್ವಾಂಸರನ್ನು ಗರ್ವಭಂಗಮಾಡಿದ ಕತೆಗಳು ವಿಪುಲವಾಗಿವೆ. ವಡ್ಡಾರಾಧನೆಯಲ್ಲಿರುವ ಚಾಣಕ್ಯರಿಸಿಯ ಕತೆಯಲ್ಲಿ ಚಾಣಕ್ಯನಿಗೂ ಒಬ್ಬ ಮುದುಕಿಗೂ ನಡೆಯುವ ಸಂವಾದ ಕೂಡ ಇದನ್ನೇ ಹೋಲುವಂತಹುದು. ಚಾಣಕ್ಯನು ಸಿವಿಕ್‌ವಿಸ್‌ಡಮ್ ಅನ್ನು ಪ್ರತಿನಿಧಿಸಿದರೆ, ಮುದುಕಿಯು ಪೋಕ್‌ವಿಸ್‌ಡಮ್‌ನ ಪ್ರತಿನಿಧಿಯಾಗಿ ಕಂಡುಬರುತ್ತಾಳೆ. ಜನಪದಕತೆಗಳಲ್ಲಿ ಸಾಮಾನ್ಯವಾಗಿರುವ ಅಡಗೂಲಜ್ಜಿಯ ಪ್ರಸಂಗವು ಪೋಕ್‌ವಿಸ್‌ಡಮ್‌ನ ಅಭಿವ್ಯಕ್ತಿಯೇ ಆಗಿದೆ. ಕಲಿತವರ ಕಸರತ್ತುಗಳೆಲ್ಲ ಪೋಕ್‌ವಿಸ್‌ಡಮ್‌ನ ಮುಂದೆ ಕುಸಿದುಬೀಳುವ ಕಥನಗಳು ಮೌಖಿಕ ಪರಂಪರೆಯಲ್ಲಿ ಸಮೃದ್ಧವಾಗಿವೆ.

ಇದರಿಂದಲೇ ಹುಟ್ಟಿಬಂದ ಶಿವಗಣಪ್ರಸಾದಿ ಮಹಾದೇವಯ್ಯನು ಶೂನ್ಯ ಸಂಪಾದನೆಯಲ್ಲಿ ಅನಿಮಿಷಯ್ಯ ಮತ್ತು ಅಲ್ಲಮಪ್ರಭುಗಳ ‘ಸಂದರ್ಶನ’ವನ್ನು ಮೂಗರ ಮೂಗರ ಪ್ರಸಂಗ, ಶಿಶುಕಂಡ ಕನಸು ಎಂಬ ನುಡಿಮುತ್ತುಗಳಲ್ಲಿ ಅಡಕಗೊಳಿಸಿದ್ದಾನೆ. ಸಾಹಿತ್ಯದ ಅನುಸಂಧಾನಕ್ಕೆ ಅಗತ್ಯವಾದ ‘ತಟಸ್ಥತಲ್ಲೀನತೆ’ಯು ಫೋಕ್‌ವಿಸ್‌ಡಮ್‌ಗೆ ಅತ್ಯಂತ ಸಹಜವಾದುದು. ಕುಮಾರವ್ಯಾಸನು ಹೇಳುವ “ಕೇಳುವ ಸೂರಿಗಳು ಜಂಗಮ ಜನಾರ್ಧನರು” ಬೇಂದ್ರೆ ಹೇಳುವ “ಶ್ರಾವಣ ಪ್ರಿಯ ಬಹುಜನ ಸಮಾಜಗಳು” ಫೋಕ್‌ವಿಸ್‌ಡಮ್ ಅನ್ನೇ ಸೂಚಿಸುತ್ತಿವೆ. ಕುವೆಂಪು ಅವರ ‘ಶ್ರೀ ಮನ್ಮೂಕವಾಗಿತ್ತು’ ಎಂಬ ಕತೆಯಲ್ಲಿ ಸಿವಿಕ್‌ವಿಸ್‌ಡಮ್‌ನ ಕಪಟ ಬುದ್ಧಿಯ ವಾಗ್‌ವಿಲಾಸಗಳ ಮುಂದೆ ಪಶುಪ್ರೇಮದ ವಾತ್ಸಲ್ಯಭಾವವು ಶ್ರೀ ಮನ್ಮೂಕವಾಗಿತ್ತು ಎಂಬ ನಿರೂಪಣೆಯಿದ್ದು ಇದು ಕೂಡ ಫೋಕ್‌ವಿಸ್‌ಡಮ್‌ನ ಕಾಣ್ಕೆಯಾಗಿದೆ.

6. ಕುರುಹುಗಳಿಂದ ಅರಿವಿನೆಡೆಗೆ

‘ಸಿವಿಕ್ ವಿಸ್‌ಡಮ್’ಗೆ ಕುರುಹುಗಳ ಊರೆಗೋಲು ಇಲ್ಲದಿದ್ದರೆ ಒಂದು ಹೆಜ್ಜೆಯನ್ನೂ ಮುಂದಿಡಲು ಸಾಧ್ಯವಿಲ್ಲ. ಯಾವುದರ ಹಂಗು ಇಲ್ಲದ ‘ಫೋಕ್ ವಿಸ್‌ಡಮ್’ಗೆ ಅರಿವೊಂದೇ ಗುರಿ. ಕುರುಹುಗಳಿಂದ ಅರಿವಿನೆಡೆಗೆ ಎಂಬುದು ವಚನಸಾಹಿತ್ಯದ ತಿರುಳಾಗಿದೆ ರೂಪನೆ ಕಂಡರು, ನಿರೂಪನು ಕಾಣರು! ತನುವನೆ ಕಂಡರು, ಅನುವನೆ ಕಾಣರು! ಆಚಾರವನೆ ಕಂಡರು, ವಿಚಾರವನೆ ಕಾಣರು! ಗುಹೇಶ್ವರ, ನಿಮ್ಮ ಕುರುಹನೆ ಕಂಡು ಕೂಡಲರಿಯದೆ ಕೆಟ್ಟರು!! ಎಂಬ ಅಲ್ಲಮನ ವಚನವು ಅಂತಿಮವಾಗಿ ಹರಿದುಕೊಳ್ಳಬೇಕಾದ ಕುರುಹುಗಳ ಬಂಧನವನ್ನು ಅರಿವಿನ ಮುಕ್ತಿಯೊಂದಿಗೆ ಮನಗಾಣಿಸುತ್ತದೆ.

ಸಂಸ್ಕೃತಿಯ ಕುರುಹುಗಳಾದ ಜಾತಿ, ಧರ್ಮ, ದೇಶ, ಕಾಲ, ಭಾಷೆ, ತರ್ಕ ಮುಂತಾದವುಗಳ ಬಂಧನದಿಂದ ಅಂತಿಮವಾಗಿ ಪಾರಾಗ ಬೇಕೆಂಬುದನ್ನು ಹೇಳುವ ಕುವೆಂಪು ಅವರ

ವಿಶ್ವಮಾನವ ಸಂದೇಶವನ್ನು ಕುರುಹುಗಳಿಂದ ಅರಿವಿನೆಡೆಗೆ ಎಂದು ಗ್ರಹಿಸಬೇಕಾಗಿದೆ. 'ಜ್ಞಾನದ ನಿರ್ವಹಣೆ' (ನಾಲೆಡ್ಜ್ ಮ್ಯಾನೇಜ್‌ಮೆಂಟ್) ಎಂಬುದೊಂದು ಅಹಂಕಾರ. ಜ್ಞಾನವನ್ನು ಕುರುಹುಮಾಡಿಕೊಂಡವರು ಅದನ್ನು ಮ್ಯಾನೇಜ್ ಮಾಡಲು ಎಳಸುತ್ತಾರೆ. ಹೋಟೆಲ್ ಮ್ಯಾನೇಜ್‌ಮೆಂಟ್ ಎಂಬಂತೆ ನಾಲೆಡ್ಜ್ ಮ್ಯಾನೇಜ್‌ಮೆಂಟ್ ಎನ್ನಲಾಗದು! ಪ್ರತಿಯೊಂದನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳುವ ಮಾನವನ ಸಂಗ್ರಹಬುದ್ಧಿಯಿಂದ ಇಂಥ ಪರಿಕಲ್ಪನೆ ಹುಟ್ಟುತ್ತದೆ. ಜ್ಞಾನವನ್ನು ನಿರ್ವಹಣೆ ಮಾಡಲು ಸಾಧ್ಯವಾದರೆ ಅದು 'ಜ್ಞಾನ'ವಾಗಿ ಉಳಿದಿರುವುದಿಲ್ಲ. ಜ್ಞಾನವು ನಿರಂಕುಶಮತಿಯಿಂದ ಚಾಲಿತವಾಗುತ್ತದೆ. ಅಂಕುಶಮತಿಯುಳ್ಳವರು ಜ್ಞಾನವನ್ನು ನಿರ್ವಹಣೆಮಾಡುತ್ತಾ 'ಗಳಿಕೆ'ಯ ಮಾರ್ಗ ಕಂಡುಕೊಂಡಿರುತ್ತಾರೆ. ಕೋಟಿವಿದ್ಯೆಗಳು ಕೂಳಿಗಾಗಿ ಎಂಬಂತೆ ಜ್ಞಾನ ಕೂಡ ಕುರುಹಾಗಿ ನಿರ್ವಹಣೆಗೊಳಗಾಗುತ್ತದೆ. ನಮ್ಮದೇ ದೇಶದ ಶರಣರು, ಯೋಗಿಗಳು, ಸೂಫಿಗಳು ಇವರಾರೂ 'ಜ್ಞಾನ'ವನ್ನು ನಿರ್ವಹಣೆ ಮಾಡಿದವರಲ್ಲ. ಇವರೆಲ್ಲ ಜ್ಞಾನವನ್ನು ಉಸಿರಾಡುತ್ತಾ ಅರಿವಿನಿಂದ ಬದುಕಿ ಬಾಳಿದರು.

7. ವಿಶ್ವಗ್ರಾಮದಿಂದ ಸ್ಥಳೀಯಭೂಗೋಳದೆಡೆಗೆ

ವಿಶ್ವಗ್ರಾಮ ಮತ್ತು ಸ್ಥಳೀಯಭೂಗೋಳ – ಇವೆರಡು ಮನೋಭೌತಿಕ ಪರಿಕಲ್ಪನೆಗಳು. ವಿಶ್ವಗ್ರಾಮವು ಮಾಹಿತಿ ತಂತ್ರಜ್ಞಾನದ ಕೂಸು, ಸ್ಥಳೀಯಭೂಗೋಳವು ಸಹಜಾನುಭವದ ಶಿಶುಕಂಡ ಕನಸು. ವಿಶ್ವಗ್ರಾಮಕ್ಕೂ ಜಾಗತೀಕರಣಕ್ಕೂ ಜನ್ಯ ಜನಕ ಸಂಬಂಧವಿದೆ. ಕ್ರಿಯೆ–ಕಾಲ–ದೇಶಗಳ ನಡುವಣ ವ್ಯತ್ಯಾಸವನ್ನು ಅಳಿಸಿಹಾಕಿದ್ದರಿಂದಲೇ ಜಾಗತೀಕರಣದ ಮಾತಾಡುತ್ತಿದ್ದಾರೆ. ಎಲ್ಲೋ ನಡೆದ–ನಡೆಯುತ್ತಿರುವ ಕ್ರಿಯೆಗಳನ್ನು ಮನೆಯೊಳಗೆ ನಾಲ್ಕು ಗೋಡೆಗಳ ನಡುವೆ ಕುಳಿತು ನೋಡುವ ಉಪಗ್ರಹಚಾಲಿತ ತಂತ್ರಜ್ಞಾನದಿಂದಾಗಿ ಇಡೀ ವಿಶ್ವವೇ ಒಂದು ಹಳ್ಳಿಯಾಗಿದೆಯೆಂಬ ಉತ್ಪ್ರೇಕ್ಷೆಯಲ್ಲಿ ಸ್ವಂತಿಕೆಯೇ ಇಲ್ಲದಂತಾಗಿದೆ. ವಿಶ್ವಗ್ರಾಮವೆಂದೂ 'ನಮ್ಮ ಊರು' ಎನಿಸಿಕೊಳ್ಳಲಾರದು. ಕ್ರಿಯೆ–ಕಾಲ–ದೇಶಗಳಿಗೆ ಬದ್ಧವಾದ 'ನಮ್ಮ ಊರು' ನಮಗೆ ದಕ್ಕುವ ಜೀವನಾನುಭವಗಳ ಕರ್ಮಭೂಮಿ. ಕುಪ್ಪಳಿ, ಸಾಧನಕೇರಿ, ಕೋಟ ಎಂಬ ಸ್ಥಳೀಯ ಭೂಗೋಳದ ಭಾಗ್ಯವಾಗಿ ಕುವೆಂಪು, ಬೇಂದ್ರೆ, ಶಿವರಾಮಕಾರಂತ ಮೂಡಿಬಂದಿದ್ದಾರೆ. ಮೈಸೂರನ್ನು ತ್ಯಜಿಸಿದ ತೇಜಸ್ವಿ ಮೂಡಿಗೆರೆ ಎಂಬ ಸ್ಥಳೀಯಭೂಗೋಳದಲ್ಲಿ ತನ್ನನ್ನು ಗುರುತಿಸಿಕೊಂಡಿದ್ದರಿಂದಲೇ 'ಕರ್ವಾಲೋ'ದಿಂದ ಹಿಡಿದು 'ಮಾಯಾಲೋಕ'ದವರೆಗಿನ ಅದ್ಭುತಜಗತ್ತು ಅನಾವರಣಗೊಂಡಿದೆ. ವಿಶ್ವಗ್ರಾಮವಾದಿಗಳು ಈ ಗುಣಮಟ್ಟದ ಸಾಹಿತ್ಯವನ್ನು ಸೃಷ್ಟಿಸಲು ಸಾಧ್ಯವಿಲ್ಲ. ಸಿವಿಕ್ ವಿಸ್‌ಡಮ್‌ನ ತುತ್ತತುದಿಯ ಪರಿಕಲ್ಪನೆಯನ್ನಾಗಿ ವಿಶ್ವಗ್ರಾಮವನ್ನು ಪರಿಭಾವಿಸಿದರೆ, ಫೋಕ್‌ವಿಸ್‌ಡಮ್‌ನ ನೆಲಮುಟ್ಟುವ ಪ್ರೀತಿಯಾಗಿ ಸ್ಥಳೀಯಭೂಗೋಳವು ಎದೆ ತುಂಬಿಕೊಳ್ಳುತ್ತದೆ.

ಇದುವರೆಗೆ ನಿರೂಪಿಸಿದ ದೇಸಿ ಪ್ರಜ್ಞೆಯ ಸಪ್ತ ಸೂತ್ರಗಳು ನಾವು ಕಟ್ಟಿಕೊಳ್ಳಬೇಕಾದ ಕನ್ನಡದ್ದೇ ಆದ ದೇಸಿ ಸಾಹಿತ್ಯ ಮೀಮಾಂಸೆಯತ್ತ ಇಟ್ಟ ಏಳು ಹೆಜ್ಜೆಗಳಾಗಿವೆ. ಕೆ.ವಿ.ಎನ್ ಅವರ ಭಾಷಿಕ ದೃಷ್ಟಿಕೋನದ ಜೊತೆಗೆ ಮೇಲಿನ ನಿರೂಪಣೆಯನ್ನೂ ಮೇಳೈಸಿಕೊಂಡರೆ ದೇಸಿ ಪ್ರಜ್ಞೆಯ ವಿರಾಟ್ ಸ್ವರೂಪದ ದರ್ಶನವು 'ಈಗಳೆಸಾಧ್ಯ'ವಾಗುತ್ತದೆ. ಸಂಸ್ಕೃತಿಯ ಹಾದಿಯಲ್ಲಿ ಪಡೆದುಕೊಂಡ ಶಿಕ್ಷಣ, ಕಲಿತುಕೊಂಡ ಬುದ್ಧಿ, ಅಧಿಕಾರಕೇಂದ್ರ, ಪ್ರಧಾನ ಸಂಸ್ಕೃತಿ, ಯಾಜಮಾನ್ಯದ ನೆಲೆಗಳು ಸಾಹಿತ್ಯವಿಮರ್ಶೆಯ ನಿರ್ದೇಶಕ ಸೂತ್ರಗಳಾಗುತ್ತವೆ.

ಇವೆಲ್ಲವುಗಳಿಗಿಂತಲೂ ಬೇರೆಯಾದ ಸಾಮುದಾಯಿಕ ಮನಸ್ಸು ಮತ್ತು ಹೃದಯಗಳ ಕೂಡಲಸಂಗಮದಲ್ಲಿ ದೇಸಿಪ್ರಜ್ಞೆಯನ್ನು ಕಂಡುಕೊಳ್ಳಬೇಕಾಗಿದೆ.

*

(ಕರ್ನಾಟಕ ವಿಶ್ವವಿದ್ಯಾಲಯ, ಡಾ. ಆರ್. ಸಿ. ಹಿರೇಮಠ ಕನ್ನಡ ಅಧ್ಯಯನ ಪೀಠ. ಧಾರವಾಡ ನಡೆಸುತ್ತ ಬಂದಿರುವ ಕನ್ನಡ ಸಂಸ್ಕೃತಿ ಸಮ್ಮೇಳನ-15ರ ಅಂಗವಾಗಿ **'ಕನ್ನಡ ಸಾಹಿತ್ಯ ವಿಮರ್ಶೆ ಬೆಳೆದುಬಂದ ಬಗೆ'**- ಎಂಬ ವಿಚಾರ ಸಂಕಿರಣವನ್ನು ದಿನಾಂಕ 30,31 ಮಾರ್ಚ್ 2011ರಲ್ಲಿ ಹಮ್ಮಿಕೊಳ್ಳಲಾಗಿತ್ತು. ಈ ವಿಚಾರ ಸಂಕಿರಣದ ಮೊದಲ ಗೋಷ್ಠಿಯಲ್ಲಿ ಮಂಡಿಸಿದ ಮೊದಲ ಭಾಷಣವನ್ನು ಆಧರಿಸಿದ ವಿಮರ್ಶಾ ಪ್ರಬಂಧವಿದು.)



ನಂ.16. ಶಿಂಗೌರಿ. 4ನೇ ಕ್ರಾಸ್
ಕನಕ ನಗರ. ಹೊಸಕೋಟೆ
ಬೆಂಗಳೂರು ಗ್ರಾಮಾಂತರ ಜಿಲ್ಲೆ-562114
ಫೋನ್. 9886152726

ಸಾಹಿತ್ಯ ಬೋಧನೆಯ ಸಾಧ್ಯತೆಗಳು

–ಡಾ ಕೆ.ಸಿ.ಶಿವಾರೆಡ್ಡಿ

ವಸಾಹತುಶಾಹಿ ಆಗಮನದ ಫಲವಾಗಿ ಬಂದ ನಮ್ಮ ಶಿಕ್ಷಣ ಪದ್ಧತಿ ಭಾರತೀಯ ಸಂವೇದನೆಗೆ ಹೊಸದೊಂದು ಚೈತನ್ಯ ಶೀಲತೆಯೊಂದನ್ನು, ಪ್ರಜ್ಞೆಯೊಂದನ್ನು ಕಟ್ಟಿಕೊಟ್ಟಿತು ಎಂಬುದು ಒಪ್ಪಿತ ವಿಚಾರವಾಗಿದೆ. ಅಂದರೆ ಒಂದು ನಿರ್ದಿಷ್ಟ ಉದ್ದೇಶದಿಂದ ಆಂಗ್ಲರಿಂದ ಜಾರಿಗೊಂಡ ನಮ್ಮ ವಿದ್ಯಾಭ್ಯಾಸಕ್ರಮ ತನ್ನ ದಿಕ್ಕುಗಳನ್ನು ಬದಲಿಸಿಕೊಂಡು ಅನುಕರಣೆಯ ನೆಲೆಯಲ್ಲಿಯೇ ಸಂಕುಚಿತಗೊಂಡು ನಮ್ಮ ಸಂದರ್ಭಕ್ಕೆ ಅಗತ್ಯವಾದ ಪುನಃಶ್ಚೇತನ್ಯವನ್ನು ಪಡೆಯುವಲ್ಲಿ ಸೋತಿತು ಎಂಬ ವಿಚಾರವು ಮಿಥ್ಯೆಯಲ್ಲ. ಕೇವಲ ಅನುಕರಣೆಯ ನೆಲೆಯಲ್ಲಿಯೇ ತನ್ನೆಲ್ಲ ಸಂವೇದನೆ ಜ್ಞಾನದ ಆಸಕ್ತಿ ಬೌದ್ಧಿಕ, ಭೌತಿಕಶಕ್ತಿ ಹಾಗೂ ದೇಶದ ಆರ್ಥಿಕ ಶಕ್ತಿಯೆಲ್ಲವೂ ವ್ಯಯವಾಯಿತೆಂಬುದು ವಾಸ್ತವ.

ಸಾಹಿತ್ಯ ಬೋಧನೆ ಪಾಠಕ್ರಮದಲ್ಲಿ ಒಂದು ಶಿಕ್ಷಣದ ಭಾಗವಾಗಿ ಅಂದು ಸೇರ್ಪಡೆಗೊಂಡಿತು. ಹಾಗೆ ಸೇರ್ಪಡೆಗೊಂಡ ಸಾಹಿತ್ಯ ಬೋಧನೆ ವಸಾಹತು ಸಂದರ್ಭದಲ್ಲಿ ಅನೇಕ ಪ್ರಯೋಗ ಪ್ರಯತ್ನಗಳ ಫಲವಾಗಿ ಪಠ್ಯರಚನೆಗಳು ಸಿದ್ಧಗೊಂಡವು. ಪಠ್ಯಗಳನ್ನು ಬೋಧಿಸುವ ವಿಧಾನಗಳನ್ನು ಸ್ವಲ್ಪಮಟ್ಟಿನ ಬದಲಾವಣೆಗಳೊಂದಿಗೆ ಪಾಶ್ಚಾತ್ಯ ದೇಶಗಳಲ್ಲಿ ಅನುಸರಿಸುತ್ತಿದ್ದ ಮಾರ್ಗಗಳನ್ನೇ ಅನುಕರಿಸಿತು. ಶ್ರೇಣೀಕೃತ ವ್ಯವಸ್ಥೆಯ ಸಮಾಜದಲ್ಲಿ ಸಂಪ್ರದಾಯದ ಸಂಕೋಲೆಗಳಿಂದ ಅಥವಾ ಅಂಕುಶಗಳಿಂದ ಹೊರಬರಲು ನಮ್ಮ ಬೋಧನಾಕ್ರಮವು ಪ್ರಯತ್ನಗಳು ನಡೆಸಿತು. ಆದರೆ ನಮ್ಮ ಶಿಕ್ಷಣ ವ್ಯವಸ್ಥೆಯು ಸಂದರ್ಭ ಸನ್ನಿವೇಶ ಮತ್ತು ಮನೋಭಾವಕ್ಕೆ ತಕ್ಕ ಪರಿಣಾಮಕಾರೀ ಮಾರ್ಗಗಳನ್ನು ಶೋಧಿಸಿಕೊಳ್ಳುವಲ್ಲಿ ಸೋತಿತೆಂದೇ ಹೇಳಬೇಕು.

ಸ್ವಾತಂತ್ರ್ಯಪೂರ್ವ ಹಾಗೂ ಆನಂತರದಲ್ಲಿ ಹೊಸ ಹೊಸ ಬೋಧನಾವಿಧಾನಗಳನ್ನು ಶೋಧಿಸಿಕೊಂಡಿತೆಂದು ಶಿಕ್ಷಣ ತಜ್ಞರು, ಸಂಶೋಧಕರು, ವಿದ್ವಾಂಸರು, ಶೈಕ್ಷಣಿಕ ಆಡಳಿತ ಯಂತ್ರವೂ ನಿರಂತರವಾಗಿ ಹೇಳುತ್ತಾ ಅಂಕಿ ಸಂಖ್ಯೆಗಳನ್ನು ಒದಗಿಸುತ್ತಾ ಬಂದಿದ್ದಾರೆ. ಆದರೂ ನಮ್ಮ ನಮ್ಮ ಸ್ಥಳೀಯ ಬದುಕಿನ ವ್ಯವಸ್ಥೆಗೆ ಅಗತ್ಯವಾದ ಶೈಕ್ಷಣಿಕ ಪರಿಸರವನ್ನು ಕಟ್ಟಿಕೊಳ್ಳುವಲ್ಲಿ ಸಂಪೂರ್ಣವಾಗಿ ತನ್ನ ಸಾಫಲ್ಯವನ್ನು ಕಂಡುಕೊಳ್ಳಲಾಗಿಲ್ಲ. ಈ ಮಾತು ಎಲ್ಲ ಜ್ಞಾನದ ಶಾಸ್ತ್ರಗಳ ಬೋಧನೆಯ ಸಂದರ್ಭಕ್ಕೂ ಅನ್ವಯಿಸುತ್ತದೆಂದೇ ನನ್ನ ಭಾವನೆ.

ತಾನು ಹೊಸ ಹೊಸ ಬೋಧನಾ ವಿಧಾನಗಳನ್ನು ಶೋಧಿಸಿಕೊಂಡೆ ಎಂದು ಹೇಳುತ್ತಿರುವ ಶೈಕ್ಷಣಿಕ ಆಡಳಿತಯಂತ್ರ ಶಿಕ್ಷಣಾರ್ಥಿಗಳಿಗೆ ಉಪಯುಕ್ತವೂ ಪರಿಣಾಮಕಾರಿಯೂ ಸ್ಫೂರ್ತಿದಾಯಕವೂ ಮಾನಸಿಕ ಬೆಳವಣಿಗೆಗೆ ಉಪಯುಕ್ತವೂ ಆಗುವ ಹೊಸ ಬೋಧನಾವಿಧಾನಗಳನ್ನು ಶೋಧಿಸಿಕೊಳ್ಳಲು ಪ್ರಯತ್ನಿಸುತ್ತದೆ ಎಂದು ಹೇಳುತ್ತಿದ್ದರೂ ವಾಸ್ತವದ ಅಂಶ ಬೇರೆಯಾಗಿದೆ. ಸ್ವಾತಂತ್ರ್ಯಪೂರ್ವದಿಂದಲೂ ತನ್ನ ಬೋಧನಾವಿಧಾನ ಪಠ್ಯರಚನೆಗಳ ಶೋಧದಲ್ಲಿ ಅನುಸರಿಸಲಾಗುತ್ತಿರುವ ಮಾರ್ಗಗಳು ನಮ್ಮಲ್ಲಿ ಕಾರ್ಯರೂಪಕ್ಕೆ

ಬರುವ ಹೊತ್ತಿಗೆ ಚರಿತ್ರೆ ನೂರು ವರ್ಷಗಳು ಮುಂದಕ್ಕೆ ಚಲಿಸಿರುತ್ತದೆ.

ಎಲ್ಲ ಕಾಲದಲ್ಲಿಯೂ ಪರಕೀಯ ದೈನೇಸಿ ಅನುಕರಣಗಳೇ ಹೊರತು ಗಟ್ಟಿಯಾದ ಸರ್ವಾಂಗೀಣ ವ್ಯಕ್ತಿತ್ವ ವಿಕಸನಕ್ಕೆ ಸಹಕಾರಿಯಾಗಿ ನಮ್ಮ ಶಿಕ್ಷಣ ವ್ಯವಸ್ಥೆ ನಿರ್ಮಾಣವಾಗಿಲ್ಲ. ಹಾಗಾಗಿಯೇ ತರಗತಿಯ ಬೋಧನೆಯೂ ಸಮಸ್ಯೆಯ ಗೂಡಾಗಿದೆ. ನಿರರ್ಥಕ ಕಾರ್ಯದಂತೆ ಕಾಣುತ್ತಿದೆ. ಕೇವಲ ನೆನಪಿನ ಶಕ್ತಿಗೆ ಒತ್ತುಕೊಟ್ಟಿದ್ದರಿಂದಾಗಿ ಮಗುವಿನ ಸರ್ವಾಂಗೀಣ ವ್ಯಕ್ತಿತ್ವ ವಿಕಸನವು ಆಗಲಾರದೆಂಬುದನ್ನು ನಮ್ಮ ಪ್ರಯೋಗಶೀಲ ಸಂವೇದನೆಗಳು ಈ ಬಗೆಗೆ ಬಹು ಹಿಂದೆಯೇ ಪ್ರತಿಕ್ರಿಯಿಸಿವೆ ಮತ್ತು ಅಂಥ ವ್ಯವಸ್ಥೆಗೆ ಮುಖಾಮುಖಿಯಾಗಿ ಪ್ರಯೋಗಗಳನ್ನು ಮುಖ್ಯವಾಗಿ ಠಾಕೂರ್, ಗಾಂಧಿ, ಅರವಿಂದರು ನಡೆಸಿದ್ದಾರೆ. ಈ ಕೆಳಗಿನ ಠಾಕೂರರ ಉಲ್ಲೇಖ ಈ ಬಗೆಗೆ ಪರಿಣಾಮಕಾರಿಯಾಗಿ ಕಾಣಿಸಿದ್ದರಿಂದ ಇಲ್ಲಿ ಉಲ್ಲೇಖಿಸಿದ್ದೇನೆ.

> "ಸಾಮಾನು ಸರಂಜಾಮು ಬೇಕಾದಷ್ಟು ಗುಡ್ಡೆ ಬೀಳುತ್ತದೆ. ಅದು ಹೇರಳ ಎಂಬುದರಲ್ಲಿ ಸಂದೇಹವಿಲ್ಲ. ಮಾನಸಿಕ ಉಪ್ಪರಿಗೆಯ ಮನೆಯನ್ನು ಕಟ್ಟಲು ಅನುಕೂಲಿಸುವ ಮಟ್ಟಿನ ಅಳತೆಯನ್ನು ಇಟ್ಟಿಗೆ, ಸುಣ್ಣದ ಕಲ್ಲು ಮುಂಚೆ ನಮ್ಮ ಸಾಮರ್ಥ್ಯಕ್ಕೆ ವಶವಾಗಿದ್ದೀತು. ಆದರೆ ಸಂಗ್ರಹಿಸುವುದನ್ನು ಕಲಿತ ಮಾತ್ರಕ್ಕೆ ಕಟ್ಟಡ ಕಟ್ಟುವುದನ್ನೂ ಕಲಿತಾಯಿತೆಂದು ತೀರ್ಮಾನಿಸುವುದು ದೊಡ್ಡ ತಪ್ಪು. ಸಂಗ್ರಹವೂ ನಿರ್ಮಾಣವೂ ಎರಡೂ ಯಾವಾಗ ಜೊತೆ ಜೊತೆಗೇ ಸ್ವಲ್ಪ ಸ್ವಲ್ಪವಾಗಿ ಮುಂದುವರಿಯುವವೋ ಆಗ ಮಾತ್ರ ಕೆಲಸ ದೃಢವಾಗುತ್ತದೆ.
>
> ...ನಾವು ಬಾಲ್ಯದಿಂದ ಕಿಶೋರಕ್ಕೆ ಕಿಶೋರಾವಸ್ಥೆಯಿಂದ ಯೌವನಕ್ಕೆ ಕೇವಲ ಕೆಲವು ಮಾತುಗಳ ಹೊರೆಯನ್ನು ಎಳೆದುಕೊಂಡು ಪ್ರವೇಶ ಮಾಡುತ್ತೇವೆ. ಸರಸ್ವತಿಯ ಸಾಮ್ರಾಜ್ಯದಲ್ಲಿ ಕೇವಲ ಕೂಲಿ ಮಾಡಿ ಸಾಯುತ್ತೇವೆ. ಬೆನ್ನೆಲುಬು ಬಾಗಿ ಹೋಗುತ್ತದೆ. ಮನುಷ್ಯತ್ವದ ಸರ್ವಾಂಗೀಣ ವಿಕಾಸ ಆಗದು."

ಬೋಧನೆ ಮತ್ತು ಪಠ್ಯಪುಸ್ತಕಗಳು

ನಾವು ಬೋಧಿಸುವ ಪಠ್ಯಗಳ ಆಯ್ಕೆಗಳ ಹಿಂದೆ ಸ್ವಾರ್ಥ ರಾಜಕಾರಣವೊಂದು ಎದ್ದು ಕಾಣುತ್ತದೆ. ತಾವು ಬರೆದ ಕಾವ್ಯ, ಕಥೆ, ಕಾದಂಬರಿ, ಪ್ರಬಂಧ, ಪ್ರವಾಸ ಸಾಹಿತ್ಯ, ಸಂಶೋಧನೆಗಳನ್ನು ಪಠ್ಯಮಾಡಿಕೊಳ್ಳುವ ಮತ್ತು ಮಾಡಿಸಿಕೊಳ್ಳುವ ದೊಡ್ಡ ಗುಂಪೇ ಕನ್ನಡ ಸಾಂಸ್ಕೃತಿಕ ವಲಯದಲ್ಲಿ ನಿರ್ಮಾಣಗೊಂಡಿದೆ. ಇಂತ ರಾಜಕಾರಣ ಬಹಳ ಪ್ರಭಾವಿಯಾಗಿದ್ದು ಜಾತಿ, ವರ್ಗ ಹಾಗೂ ಮುಸ್ಸಂಜೆಯ ಮಂದ ಬೆಳಕಿನ ಗೋಷ್ಠಿಗಳಲ್ಲಿ ಎಲ್ಲವೂ ನಿರ್ಣಯಿಸಲ್ಪಡುತ್ತವೆ. ಡಿ.ಆರ್.ನಾಗರಾಜ ಅವರ ಮಾತನ್ನು ಇಲ್ಲಿ ಉಲ್ಲೇಖಿಸುವುದು ಸೂಕ್ತವೆನಿಸುತ್ತದೆ.

> "ನಮ್ಮ ಒಟ್ಟು ಶಿಕ್ಷಣ ಕ್ಷೇತ್ರ ಎಷ್ಟು ಹದಗೆಟ್ಟಿದೆಯೆಂದರೆ ಪಠ್ಯಪುಸ್ತಕಗಳ ಬಗ್ಗೆ ಯೋಚಿಸುವವರೇ ಇಲ್ಲವಾಗಿದೆ. ತಮ್ಮ ಕಸುಬಿನ ಬಗ್ಗೆ ವ್ಯಕ್ತಿ ಶ್ರದ್ಧೆಯೇ ಇರದಿದ್ದಾಗ ಶಿಕ್ಷಕರಿಂದ ನಾವು ಏನನ್ನೂ ನಿರೀಕ್ಷಿಸುವುದು ಅಸಾಧ್ಯ. ಜೊತೆಗೆ ಇಲ್ಲಿ ಇನ್ನೊಂದು ಪ್ರಧಾನ ಸಮಸ್ಯೆ ಎಂದರೆ ನಮ್ಮ ಸಾಹಿತ್ಯ ಸಂಸ್ಕೃತಿ ಮತ್ತು ಪಠ್ಯಪುಸ್ತಕಗಳ ನಡುವೆ ದೊಡ್ಡ ಕಂದರವೇ ಬಿದ್ದಿದೆ. ನಮ್ಮ ಸಾಹಿತ್ಯ ಸಂಸ್ಕೃತಿಯಲ್ಲಿ ಪಠ್ಯಪುಸ್ತಕಗಳು ತಮ್ಮ ಸಾಹಿತ್ಯ ಘನತೆಗೆ ಕಮ್ಮಿ ಎಂಬ ಭಾವನೆ ಬಂದಿರುವುದರಿಂದ ಪಠ್ಯ-ಪುಸ್ತಕ ಬರೆಯುವ ಕೆಟ್ಟ ಸಾಹಿತಿಗಳ ಬಳಗವೇ ನಿರ್ಮಾಣವಾಗಿಬಿಟ್ಟಿದೆ. ಪ್ರಾಥಮಿಕ ಹಂತದಿಂದ ಪ್ರಾರಂಭವಾಗಿ ಉನ್ನತ ಹಂತದ ತನಕ ಕನ್ನಡಸಾಹಿತ್ಯ-ಕನ್ನಡ ಪಠ್ಯಪುಸ್ತಕಗಳ ಗುಣಮಟ್ಟ

ಎಷ್ಟು ಕೆಟ್ಟದಾಗಿರುತ್ತದೆ ಎಂಬುದನ್ನು ಬಲ್ಲವರೇ ಬಲ್ಲರು. (ಸಂಸ್ಕೃತಿ ಕಥನ – ಪುಟ 85–86–2006)

ಈ ಮೇಲಿನ ಉಲ್ಲೇಖದಲ್ಲಿ ಬರುವ ಶೈಕ್ಷಣಿಕ ಪರಿಸರದ ಸಮಸ್ಯೆ ಒಂದು ಬಗೆಯದಾದರೆ ತರಗತಿಗಳ ಒಳ ಮತ್ತು ಹೊರಗಿನ ಸನ್ನಿವೇಶ ಸಂದರ್ಭಗಳು ಬೋಧನೆಗೆ ಸಮಸ್ಯೆಯ ಸವಾಲಾಗಿ ಪರಿಣಮಿಸಿದೆ. ತರಗತಿಗಳ ಆಂತರಿಕ ಪರಿಸರಕ್ಕಿಂತ ಹೊರಗಿನ ವಿದ್ಯಮಾನಗಳು, ಸನ್ನಿವೇಶ, ಸಂದರ್ಭಗಳು ವಿದ್ಯಾರ್ಥಿ ಸಮುದಾಯವನ್ನು ಪರಿಣಾಮಕಾರಿಯಾಗಿ ಆಕರ್ಷಿಸುವ ಸಂದರ್ಭದಲ್ಲಿ ನಾವಿದ್ದೇವೆ. ಆಧುನಿಕ ತಂತ್ರಜ್ಞಾನದ ಮಾಯಾಲೋಕದಿಂದ ಹರಿದು ಬರುತ್ತಿರುವ ಅಸಂಖ್ಯ ಜನಪ್ರಿಯ ಮನರಂಜನೆಗಳಲ್ಲಿ ತೊಡಗಿಕೊಂಡಿರುವ ವಿದ್ಯಾರ್ಥಿ ಸಮುದಾಯವನ್ನು ಸಾಹಿತ್ಯ ಬೋಧನೆಯ ಮೂಲಕ ಶ್ರದ್ಧಾಮುಖಿಗಳನ್ನಾಗಿ ಮಾಡುವುದು ಹೇಗೆ ಎಂಬ ದೊಡ್ಡ ಸವಾಲು ಇಂದು ಎದುರಾಗಿದೆ.

ಕುವೆಂಪು ಅವರು "ಕಾದಂಬರಿ ಕರತಲ ರಂಗಭೂಮಿ ಅಂಗೈ ಮೇಲಿನ ನಾಟಕ ಶಾಲೆ" ಎಂದು ಕಾನೂರು ಹೆಗ್ಗಡತಿ ಕಾದಂಬರಿಯಲ್ಲಿ ಅರಿಕೆ ಮಾಡುತ್ತಾರೆ. ಆದರೆ ವಿದ್ಯಾರ್ಥಿ ಸಮುದಾಯದ ಕೈಯಲ್ಲಿ ಕಾದಂಬರಿಗೆ ಬದಲಾಗಿ ಮೊಬೈಲಿನ ಮಾಯಾಜಾಲವು ಅಂಗೈ ಮೇಲೆಯೇ ತನ್ನ ವಿರಾಟ್ ನೃತ್ಯವನ್ನು ನಡೆಸುವ ಕಾಲ ಇದು.

ಜಗತ್ತಿನ ಎಲ್ಲವನ್ನು ಅಂಗೈಯಲ್ಲಿಯೇ ಕ್ಷಣ ಮಾತ್ರದಲ್ಲಿ ಪಡೆಯುವ ತಂತ್ರಜ್ಞಾನದ ಎದುರು ಸಾಹಿತ್ಯಬೋಧನೆಯ ಪರಿಣಾಮಕಾರಿ ಸಾಧ್ಯತೆಗಳನ್ನು ಶೋಧಿಸಿಕೊಳ್ಳಬೇಕಾದ ಅನಿವಾರ್ಯತೆ ನಮ್ಮೆಲ್ಲರದೂ ಆಗಿದೆ. ಕಾದಂಬರಿಯನ್ನು ಓದುವ ವಾಚಕರು ನಾಟಕವನ್ನು ನೋಡುವ ಪ್ರೇಕ್ಷಕರಾಗಿ ಅವರ ಕಲ್ಪನೆಯು ಸದಾ ಎಚ್ಚೆತ್ತು, ರಸಾಸ್ವಾದನೆಗೆ ಭಂಗ ಬರದಂತೆ ಸನ್ನಿವೇಶಗಳನ್ನು ಕಲ್ಪಿಸಿಕೊಂಡು ಅವರವರ ಸಂಭಾಷಣೆಗಳನ್ನು ಅವರವರ ವಾಣಿಗಳೊಡನೆ ಆಲಿಸುತ್ತಾರೆ. ವಾಚಕರು ಸಿನಿಮಾವನ್ನು ನೋಡುತ್ತಿರುವ ಪ್ರೇಕ್ಷಕರಂತಾಗದಿದ್ದರೆ ಕಾದಂಬರಿಯ ಓದು ಸಾರ್ಥಕವಾಗುವುದಿಲ್ಲವೆಂದು ಕುವೆಂಪು ಪರಿಭಾವಿಸುತ್ತಾರೆ. ಹಾಗೆಯೇ ಕೃತಿಯ ರಸಾಸ್ವಾದನೆ ಓದು ಅಥವಾ ಬೋಧನೆಯ ಸಂದರ್ಭದಲ್ಲಿ ಮರುಸೃಷ್ಟಿಗೆ ಸಹಾಯಕವಾಗದಿದ್ದರೆ ಅಂತಹ ಕ್ರಿಯೆ ನೀರಸವಾಗುತ್ತದೆಂದೂ ಅಭಿಪ್ರಾಯಪಡುತ್ತಾರೆ. ಹಾಗಾಗಿ ಕಾದಂಬರಿಯ ಓದು ಅಥವಾ ಬೋಧನೆ ತರಗತಿಯ ಒಳಗೆ "ಸಜೀವವಾದ ಪ್ರಾಣಪೂರ್ಣವಾದ ಕ್ರೀಡಾಕ್ರಿಯೆ" ಆಗಬೇಕೆಂಬುದು ಕುವೆಂಪು ಅವರ ಆಶಯ. ಅಂತಹ ಆಶಯಗಳು ಸಾರ್ಥಕಗೊಳ್ಳಬೇಕಾದರೆ ಕಾದಂಬರಿ ಬೋಧನೆಯ ಸಂದರ್ಭದಲ್ಲಿ ಏನೆಲ್ಲ ಸಾಧ್ಯತೆಗಳನ್ನು ಶೋಧಿಸಿಕೊಳ್ಳಲು ಪ್ರತಿಕ್ಷಣವು ಅಧ್ಯಾಪಕವರ್ಗವು ಕ್ರಿಯಾಶೀಲತೆಯಲ್ಲಿ ತೊಡಗಿರಬೇಕಾಗುತ್ತದೆ.

ಹೊಸ ಚಾರಿತ್ರಿಕ ಅಗತ್ಯಗಳಿಗೆ ಅನುಗುಣವಾಗಿ ಹೊಸ ಅಭಿವ್ಯಕ್ತಿ ಮಾರ್ಗದ ಪ್ರಕಾರವಾಗಿ ಹುಟ್ಟಿಕೊಂಡ ಕಾದಂಬರಿಯು ಆಧುನಿಕ ಯುಗದ ಮಹಾಕಾವ್ಯವೆಂದು ಪ್ರಸಿದ್ಧವಾಗಿದೆ. ಹಾಗಾಗಿ ಅದು ಸಾಮಾಜಿಕ, ಐತಿಹಾಸಿಕ, ಸಮಕಾಲೀನ ಸಂದರ್ಭಗಳನ್ನು ನಮ್ಮ ಮುಂದೆ ಕಥನಗೊಳಿಸುತ್ತದೆ. ಅಂತಹ ಕಥನ ಬೋಧನೆಯ ಸಂದರ್ಭದಲ್ಲಿ ವಿದ್ಯಾರ್ಥಿ ಸಮುದಾಯಕ್ಕೆ ಪ್ರಪಂಚವನ್ನು ಹೊಸದಾಗಿ ನೋಡುವ ಹೊಸ ಸೃಷ್ಟಿಗೆ ಹೊಸ ಗ್ರಹಿಕೆಗೆ ಅನುವಾಗುವ ವಾತಾವರಣವನ್ನು ಕಲ್ಪಿಸುವ ಬಗೆಯಲ್ಲಿ ಬೋಧನೆಯನ್ನು ಪರಿಣಾಮಕಾರಿಯಾಗಿ ನಿರೂಪಿಸಬೇಕಾಗುತ್ತದೆ.

ಬಂಡವಾಳಶಾಹಿ ನಾಗರಿಕತೆಯೊಂದಿಗೆ ಹುಟ್ಟಿದ ಹೊಸ ಮಧ್ಯಮವರ್ಗದ ವ್ಯಕ್ತಿ ಮತ್ತು

ಸಮಾಜದ ನಡುವಿನ ಛಿದ್ರೀಕರಣದಿಂದ ಹುಟ್ಟಿದ ಕಾದಂಬರಿಯು ಹೊಸ ಮೌಲ್ಯಗಳಿಗಾಗಿ ನಡೆಸುವ ಹುಡುಕಾಟವನ್ನು ಮಾಡುತ್ತಿರುತ್ತದೆ. ಇಂಥ ಹುಡುಕಾಟವನ್ನೇ 'ಕಾಡು' ಕಾದಂಬರಿಯಲ್ಲಿ ಸ್ವಾತಂತ್ರ್ಯಾನಂತರದ ಗ್ರಾಮೀಣ ಬದುಕಿನ ಛಿದ್ರಾವಸ್ಥೆಯನ್ನು ಆಲನಹಳ್ಳಿ ಅಭಿವ್ಯಕ್ತಿಗೊಳಿಸಿದ್ದಾರೆ. ಕಿಟ್ಟಿಯ ವ್ಯಷ್ಠಿ ಪ್ರಜ್ಞೆ ಮತ್ತು ಸಮಾಜದ ನಡುವಿನ ಅಂತರಗಳನ್ನು ಕಟ್ಟಿಕೊಡಲು ಕಾಡು ಕಾದಂಬರಿಯಲ್ಲಿ ಯತ್ನಿಸಲಾಗಿದೆ. ಶಿವರಾಮ ಪಡಿಕ್ಕಲ್‌ರ ಈ ಕೆಳಗಿನ ಉಲ್ಲೇಖ ಕಾದಂಬರಿ ಹೇಗೆ ಒಂದು ಸಾಂಸ್ಕೃತಿಕ ರಚನೆ ಎಂಬ ಗ್ರಹಿಕೆಯನ್ನು ಸಮರ್ಥವಾಗಿ ಹಿಡಿದಿಡುತ್ತದೆ.

> "ಕಲಾಕೃತಿಯು ತನ್ನ ಆಕಾರವನ್ನು ಪಡೆದುಕೊಳ್ಳುವ ಈ ಸಂಕೀರ್ಣ ಕ್ರಿಯೆ ಕೇವಲ ಒಬ್ಬ 'ವ್ಯಕ್ತಿ'ಯ ಸೃಷ್ಟಿ ಮಾತ್ರವಲ್ಲ. ಸಾಮಾಜಿಕ ಉತ್ಪಾದನೆ ಈ ವ್ಯಕ್ತಿಯ ಮನಃಸ್ಥಿತಿಯನ್ನು ರೂಪಿಸಿದ ಸಮುದಾಯದ ಸಾಮಾಜಿಕ, ಆರ್ಥಿಕ ಅಥವಾ ರಾಜಕೀಯ ರಚನೆಗಳಂತೆಯೇ ಕಾದಂಬರಿಯೂ ಒಂದು ಸಾಂಸ್ಥಿಕ ರಚನೆ. ಕಾದಂಬರಿ ಎಂದರೆ ದೈನಿಕದ ಬದುಕು ಸಾಹಿತ್ಯದ ಮಟ್ಟಕ್ಕೆ ಸ್ಥಾನಾಂತರ(transposition)ಗೊಂಡುದರ ಪರಿಣಾಮ ಎನ್ನಬಹುದು."

ಸ್ವಾತಂತ್ರ್ಯಾನಂತರದ ಗ್ರಾಮೀಣ ಭಾರತದ ವಾಸ್ತವ ಚಿತ್ರಣವನ್ನು ಕಟ್ಟಿಕೊಡುವ 'ಸಾಂಸ್ಕೃತಿಕ ರೂಪ'ದಂತಿದೆ 'ಕಾಡು' ಕಾದಂಬರಿ. ಈ ಸಾಂಸ್ಕೃತಿಕ ರೂಪ ನಿರ್ಮಾಣವಾಗಿರುವ ಚಾರಿತ್ರಿಕ ಸನ್ನಿವೇಶ ಈ ಕಾದಂಬರಿಯ ಧೋರಣೆಯನ್ನು ಮುನ್ನಡೆಸಿದೆ. ಸ್ವಾತಂತ್ರ್ಯಾನಂತರ ಭಾರತದಲ್ಲಿ ಉಂಟಾದ ಎಲ್ಲಾ ಮಟ್ಟದ ಸ್ಥಿತ್ಯಂತರಗಳ ಸನ್ನಿವೇಶದಲ್ಲಿ ಸೃಷ್ಟಿಗೊಂಡಿರುವ ಈ ಕಾದಂಬರಿಯನ್ನು ಆ ಕಾಲದ ಅನೇಕ ಸಂದರ್ಭ ದೃಷ್ಟಿಧೋರಣೆಗಳು ಪ್ರಭಾವಿಸಿವೆ. ಜಾತಿ ವ್ಯವಸ್ಥೆ, ಅಸ್ಪೃಶ್ಯತೆಯ ಪ್ರಶ್ನೆಗಳು, ಮೇಲುಕೀಳಿನ ಪ್ರಶ್ನೆಗಳು, ವರ್ಗ ಸಂಘರ್ಷ ಕೌಟುಂಬಿಕ ವಿಘಟನೆಗಳು ಶ್ರೇಣೀಕೃತ ಸಮಾಜದಲ್ಲಿ ಗಂಡು-ಹೆಣ್ಣಿನ ಸಂದರ್ಭದ ಪ್ರಶ್ನೆಗಳು. ಹಸಿವು. ಅನ್ನದ ಪ್ರಶ್ನೆಗಳು, ಭೂಮಾಲಿಕ ಮತ್ತು ಭೂರಹಿತರ ಸಂಘರ್ಷ, ಶಿಕ್ಷಣದ ನಿರರ್ಥಕ ಪ್ರಶ್ನೆಗಳು, ವ್ಯಕ್ತಿ ಹಾಗೂ ಸಾಮಾಜಿಕ ಸಂಬಂಧಾಂತರಗಳ ಅನೇಕ ಪ್ರಶ್ನೆಗಳನ್ನು ಕಿಟ್ಟಿಯ ಸಾಕ್ಷೀಪ್ರಜ್ಞೆಯ ಮೂಲಕ ಈ ಕೃತಿ ಅನಾವರಣಗೊಳ್ಳುತ್ತಿದೆ. ಇಲ್ಲಿ ಸಾಕ್ಷೀಪ್ರಜ್ಞೆಯೆಂದರೆ ಲೋಕ ಗ್ರಹಿಕೆಯ ಒಂದು ಕ್ರಮ. ಕಿಟ್ಟಿಯ ಸಾಕ್ಷೀಪ್ರಜ್ಞೆಯ ಹಿಂದೆ ನಿರೂಪಕನ ದೃಷ್ಟಿಧೋರಣೆಗಳು ನಿಚ್ಚಳವಾಗಿ ಕ್ರಿಯಾಶೀಲಗೊಂಡಿದೆ. ಲೇಖಕನೇ ನಿರೂಪಕನಾಗಿ ಹದಿವಯಸ್ಸಿನ ತಲ್ಲಣಗಳ ಬೆರಗು ವಿಸ್ಮಯಗಳ ಭಯ ಆತಂಕಗಳ ನಡುವೆ ಗ್ರಾಮೀಣ ಸಮಾಜದ ಕಥನದ ಪಠ್ಯ ಸಮಸ್ಯೀಕರಣಗೊಂಡಿದೆ. ಹದಿವಯಸ್ಸಿನ ಗ್ರಹಿಕೆ, ಹದಿವಯಸ್ಸಿನ ಬೆರಗು. ಭಯ. ಅದುಮಲ್ಪಟ್ಟ ಭಾವನೆಗಳು, ಸುಪ್ತಕಾಮ. ಪ್ರತಿಭಟನೆ ನಿರೂಪಕನ ಪ್ರಜ್ಞೆಯಲ್ಲಿ ಬಿಚ್ಚಿಕೊಳ್ಳುತ್ತದೆ. ಮುಖ್ಯವಾಗಿ ಕಾಮ, ಸಾವು. ಶಿಕ್ಷಣ ಅನೇಕ ತಲ್ಲಣಗಳು. ನಿಯಂತ್ರಣ ಮತ್ತು ಅಧಿಕಾರಗಳು ಇಂಥ ಅಸಂಖ್ಯ ಪ್ರಶ್ನೆಗಳು ಕಾದಂಬರಿಯ ಉದ್ದಕ್ಕೂ ಕಾಡುತ್ತವೆ. ಹೀಗಾಗಿ ಕಾದಂಬರಿಯ ಶೀರ್ಷಿಕೆಯಾದ 'ಕಾಡು' ಕ್ರಿಯಾಪದವಾಗಿ ಅನೇಕ ಅರ್ಥಗಳನ್ನು ಧ್ವನಿಸುತ್ತದೆ. ಸ್ವ ಮತ್ತು ಭ್ರಮನಿರಸನ. ನಿಯಂತ್ರಣ ಮತ್ತು ಅಧಿಕಾರ ಕಾಮ ಮತ್ತು ನಿಯಂತ್ರಣಗಳು ಬೇರೆ ಬೇರೆ ಮಟ್ಟಗಳಲ್ಲಿ ಸಿದ್ಧ ನೈತಿಕತೆಯನ್ನು ಮುರಿಯುತ್ತವೆ.

ಸೆಕ್ಸಿನ ನಿಯಂತ್ರಣ ಮತ್ತು ಅದರ ಮೇಲಿನ ಅಧಿಕಾರ ಕಾದಂಬರಿಯ ಹಲವು ಗಂಡು-ಹೆಣ್ಣುಗಳ ಸಂಬಂಧಗಳಲ್ಲಿ ಒಂದು ಜೈವಿಕ ಪ್ರತಿಭಟನೆಯಾಗಿ ಸ್ಫೋಟಗೊಳ್ಳುತ್ತದೆ. ಹಾಗಾಗಿ ಬದುಕಿನ ಅಂಥ ಸಮಾಜದ ಸಿದ್ಧ ನೈತಿಕತೆಯನ್ನ ಮೀರುವ ಪ್ರಕ್ರಿಯೆಯೊಂದು ಈ ಕಾದಂಬರಿಯಲ್ಲಿ ಕಾಣಿಸುತ್ತದೆ. ಈ ಮೀರುವಿಕೆ ತನ್ನ ಹಿಂದಿನ ಕಾದಂಬರಿಯ ನಡಿಗೆಯನ್ನು

ಮುರಿಯುವ ಪ್ರಯತ್ನವನ್ನು ಕಾಡು ಕಾದಂಬರಿಯಲ್ಲಿ ಕಾಣುತ್ತೇವೆ. ಅಂಥ ಮೀರುವಿಕೆಗೆ ಅಗತ್ಯವಾದ ತಂತ್ರ ಪ್ರಜ್ಞೆ,ದೃಷ್ಟಿ, ಧೋರಣೆಗಳನ್ನು ಕಾಡು ಕಾದಂಬರಿಯ ಸಂವೇದನೆ ಪರಿಣಾಮಕಾರಿಯಾಗಿ ಶೋಧಿಸಿಕೊಂಡಿದೆ.

ಕಿಟ್ಟಿಯ ಪ್ರಜ್ಞೆ ಮುಗ್ಧತೆಯಿಂದ ಕೂಡಿದ್ದಲ್ಲ. ಅದು ವಿಶ್ಲೇಷಕ ಹಾಗೂ ತುಲನಾತ್ಮಕ ಪ್ರಜ್ಞೆ. ಹಾಗಾಗಿ ವ್ಯಕ್ತಿ ಮತ್ತು ಸಮಾಜದ ತಲ್ಲಣಗಳ ಕಥನವಾಗಿಯೂ ಈ ಕಾದಂಬರಿ ಧ್ವನಿಸುತ್ತದೆ.

ಸಾವು, ಕಾಮದ ಪ್ರಶ್ನೆಗಳಂತೆಯೇ ಶಿಕ್ಷಣವನ್ನು ಕುರಿತ ಜಿಜ್ಞಾಸೆಯು ಈ ಕಾದಂಬರಿಯ ಬಹು ಮುಖ್ಯ ನೆಲೆ. ಸ್ವಾತಂತ್ರ್ಯಾನಂತರ ಜಡ್ಡುಗಟ್ಟಿದ ಶಿಕ್ಷಣ ವ್ಯವಸ್ಥೆಯ ಬಗೆಗೆ ಕಾಡು ಕಾದಂಬರಿಯಲ್ಲಿ ಆಲನಹಳ್ಳಿಯವರು ಪ್ರಜ್ಞಾಪೂರ್ವಕವಾಗಿಯೇ ಮುಖಾಮುಖಿಯಾಗಿದ್ದಾರೆ.

ನವೋದಯ ಕಾಲದಲ್ಲಿ ಕುವೆಂಪು ಅವರಿಗೆ ಶಾಲೆ ಶೂದ್ರಾತಿ ಶೂದ್ರರ "ಪುನಃಶ್ಚೇತನದ ಸುಯೋಗ"ದಂತೆ ಬಂದಿತೆಂದು ಅವರು ಕಾದಂಬರಿ ಲೋಕದಲ್ಲಿ ಕಾಣಿಸಿದ್ದಾರೆ. ಆದರೆ ಅದೇ ಶಿಕ್ಷಣ ಸ್ವಾತಂತ್ರ್ಯಾನಂತರ ತನ್ನೆಲ್ಲಾ ಚೈತನ್ಯವನ್ನು ಕಳೆದುಕೊಂಡು ಅನಾಕರ್ಷಕವಾಗಿರುವುದನ್ನು ಕಾಡು ಕಾದಂಬರಿ ಕಂಡರಿಸುತ್ತದೆ. ಕಿಟ್ಟಿ ಪರಿಸರದ ಎಲ್ಲಾ ವಿಚಾರಗಳ ಬಗೆಗೆ ಅತ್ಯಂತ ಕುತೂಹಲದಿಂದ ನೋಡುತ್ತಾನೆ, ಪ್ರಶ್ನಿಸುತ್ತಾನೆ, ಯೋಚಿಸುತ್ತಾನೆ, ಪ್ರತಿಭಟಿಸುತ್ತಾನೆ. ಆದರೆ ಶಾಲೆ ನೆನಪಾದರೆ ಸಾಕು ಕಿರಿಕಿರಿ, ಅಸಹನೆ, ಅಸಡ್ಡೆ ಅವನಲ್ಲಿ ಪ್ರಕಟಗೊಳ್ಳುತ್ತದೆ. ಶಾಲಾ ವ್ಯವಸ್ಥೆಯ ಬಗೆಗೆ ಆಲನಹಳ್ಳಿಯವರ ಅಸಹನೆ ಹಾಗೂ ಅವರ ಧೋರಣೆ ಕಿಟ್ಟಿಯ ವರ್ತನೆಗಳಲ್ಲಿ ಅಭಿವ್ಯಕ್ತಿಗೊಂಡಿದೆ. ಹಾಗೆಯೇ ಕಿಟ್ಟಿಯ ಆತ್ಮಕಥನದಂತಿರುವ ಕಾಡು ಶಿಕ್ಷಣದ ಮೆಟ್ಟಿಲು ಹತ್ತಿದ ಪ್ರತಿಯೊಬ್ಬ ಹಳ್ಳಿ ಹೈದನ ಆತ್ಮಕಥೆಯಂತೆ ಕಾಣುತ್ತದೆ.

ಬ್ರಾಹ್ಮಣರ ಸಾವಿತ್ರಮ್ಮ ಮತ್ತು ಮರಗೆಲಸದ ಭಾಸ್ಕರನ ಸಂಬಂಧ, ಕಲ್ಯಾಣಿ ಹೊಲೇರ ಹನುಮನ ಸಂಬಂಧ, ಗುಡಿಯ ಅಯ್ನೋರು ಮತ್ತು ಹೊಲೇರ ಕಾಳಿ ಸಂಬಂಧ ಚಂದ್ರೇಗೌಡರ ಕುಟುಂಬದ ಆಚೆಗಿನ ಸಂಬಂಧಗಳು ಮೊದಲಾದ ಕಾಮ ಸಂಬಂಧಗಳು ವರ್ಣವ್ಯವಸ್ಥೆಯ ಸಂಘರ್ಷಾತ್ಮಕ ನೆಲೆಗಳನ್ನು ಮತ್ತು ನಿಯಂತ್ರಿತ ಅಧಿಕಾರಗಳನ್ನು ಮೀರುವ ಘಟನೆಗಳಾಗಿ ಕಾಣಿಸಿಕೊಳ್ಳುತ್ತವೆ. ಸಾವಿತ್ರಮ್ಮನ ಮಡಿ ಸೀರೆಯ ಮೇಲೆ ಉಚ್ಚೆ ಹುಯ್ಯುವುದು ಪ್ರತಿಭಟನೆಯ ಭಾಗವೇ ಆಗಿದೆ.

ಇಂಥ ದೃಢ ವಾಸ್ತವದ ಜಾತಿಯತೆ ಭೂಮಾಲಿಕತ್ವ, ಸ್ತ್ರೀ ದಮನಿತ ನೆಲೆಗಳು, ಗ್ರಾಮ ಸಮಾಜದ ಆತಂಕಗಳು, ಆ ಸಮಾಜದ ಭಗ್ನತೆ ವಿನಾಶ ಕ್ರೌರ್ಯದಿಂದ ಕೂಡಿದ್ದರೂ ಅವುಗಳೊಂದಿಗೆ ಬದುಕಿನ ಆಶಯವು ಪುಟಿಯುವುದು ಈ ಕಾದಂಬರಿಯ ಹೆಚ್ಚುಗಾರಿಕೆಯಾಗಿದೆ. ಹಾಗಾಗಿ ಕಾದಂಬರಿಯ ಓದು ಅಥವಾ ಬೋಧನೆ ನೀರಸಗೊಂಡರೆ ಹಲವು ಗ್ರಹಿಕೆಗಳಿಗೆ ಅನುವು ಮಾಡಿಕೊಡುವ ಸಾಧ್ಯತೆಗಳನ್ನು ಹುಡುಕಿಕೊಳ್ಳಬೇಕು. ಅಂಥ ಹುಡುಕಾಟ ಪ್ರತಿ ತರಗತಿಯಲ್ಲಿ ಕ್ರಿಯಾಶೀಲಗೊಳ್ಳಬೇಕು. ಅಂಥ ಕ್ರಿಯಾಶೀಲತೆಗೆ ಬೇಕಾದ ಅಧ್ಯಾಪನ ವೃತ್ತಿಯ ಶ್ರದ್ಧೆ ಇಮ್ಮಡಿಗೊಳ್ಳಬೇಕು ಹಾಗೆ ಆದಾಗ ಮಾತ್ರ ಆಯಾ ತರಗತಿಯ ಬೋಧಕರು ತಮ್ಮ ತಮ್ಮದೇ ಆದ ಬೋಧನ ಮಾರ್ಗವನ್ನು ಕಂಡುಕೊಳ್ಳಲು ಸಾಧ್ಯವಾಗುತ್ತದೆ.

*

ಮುಖ್ಯಸ್ಥರು, ಭಾಷಾಂತರ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ, ಬಳ್ಳಾರಿ ಜಿಲ್ಲೆ
ದೂರವಾಣಿ : 944890 0999

ರವಿವರ್ಮನೆಂಬೋ ಮಹಾ ಮೋಡಿಗಾರ

–ಚಿ.ಸು. ಕೃಷ್ಣ ಸೆಟ್ಟಿ



1987 ಮತ್ತು 1990ರ ನಡುವಿನ ವರ್ಷಗಳಲ್ಲಿ ದೂರದರ್ಶನದಲ್ಲಿ ಪ್ರಸಾರವಾದ ಎರಡು ಧಾರಾವಾಹಿಗಳು ನಮ್ಮ ಭಾರತದ ಸಾಂಸ್ಕೃತಿಕ ಜನಜೀವನದಲ್ಲಿ ಭಾರೀ ಪಲ್ಲಟಗಳನ್ನು ಉಂಟುಮಾಡಿದವು. ಅದರಲ್ಲಿ ಮೊದಲನೆಯದೆಂದರೆ 1987–88ರ ಸಮಯದಲ್ಲಿನ ರಮಾನಂದ ಸಾಗರ್ ಅವರ 'ರಾಮಾಯಣ' ಧಾರಾವಾಹಿ ಹಾಗೂ ಎರಡನೆಯದು 1988–89ರಲ್ಲಿನ ಬಿ. ಆರ್. ಚೋಪ್ರಾ ಅವರ 'ಮಹಾಭಾರತ' ಧಾರಾವಾಹಿ, ಈಗಿನಂತೆ ನೂರಾರು ಚಾನೆಲ್‌ಗಳಿರದ, ಕೈಯಲ್ಲಿ ರಿಮೋಟ್ ಹಿಡಿದುಕೊಂಡು ಚಾನಲ್‌ಗಳನ್ನು ಬದಲಾಯಿಸಲು ಸಾಧ್ಯವಿರದೆ ಎಲ್ಲರೂ ಅನಿವಾರ್ಯವಾಗಿ ದೂರದರ್ಶನವೊಂದನ್ನೇ ನೋಡಬೇಕಾಗಿದ್ದ ಕಾಲವದು. ಈ ಸರಣಿಗಳು ಪ್ರಸಾರವಾಗುವ ಸಮಯದಲ್ಲಿ ದೇಶದೆಲ್ಲೆಡೆಗಳ ಜನರು ಸಮೂಹ ಸನ್ನಿ ಹಿಡಿದವರಂತೆ, ತಮ್ಮೆಲ್ಲ ಜಾತಿ–ಮತ, ಸಂಪ್ರದಾಯಗಳನ್ನು ಮರೆತು ಹೇಗಾದರೂ ಟಿವಿ ಪರದೆಯ ಮುಂದೆ ಕೂರಲು ಹರಸಾಹಸ ಮಾಡುತ್ತಿದ್ದರು. ಈ 'ರಾಮಾಯಣ ಮತ್ತು ಮಹಾಭಾರತಗಳ ಜ್ವರ' ದಿಂದಾಗಿ ನಮ್ಮ ಜನ ಅದೆಷ್ಟೋ ಪ್ರಮುಖ ಕಾರ್ಯಕ್ರಮಗಳನ್ನು ಬೇರೆ ಸಮಯಗಳಲ್ಲಿ ನಿಗದಿಪಡಿಸುತ್ತಿದ್ದರು. ಮದುವೆ–ಮುಂಜಿಗಳನ್ನು ಅದರ ಪ್ರಸಾರಕ್ಕೆ ಮೊದಲು ಅಥವಾ ನಂತರ ನಡೆಸುತ್ತಿದ್ದರು ಎಂದರೆ ಈ ಎರಡು ಧಾರಾವಾಹಿಗಳು ಜನಜೀವನದ ಮೇಲೆ ಮಾಡಿದ ಮೋಡಿಯನ್ನು ಊಹಿಸಬಹುದಾಗಿದೆ. (ಈ ಪರಿಣಾಮಗಳನ್ನು ಕುರಿತು ಹಲವರು ಸಂಶೋಧನೆಗಳನ್ನು ನಡೆಸಿದ್ದಾರೆ. ಅಷ್ಟೇಕೆ ಇಂದು ಇದೇ ದೇಶದಲ್ಲಿ ಬಲಪಂಥೀಯ ವಾದಗಳಿಗೆ, ಅದರಲ್ಲಿಯೂ ಭಾರತೀಯ ಜನತಾ ಪಕ್ಷಕ್ಕೆ ನೆಲೆ ಒದಗಿಸುವಲ್ಲಿಯೂ ಇದು ಕಾರಣವಾಯಿತು. ಈ ಅಂಶ ಕುರಿತು ಇಲ್ಲಿ ಲಂಬಿಸುವುದು ಅನವಶ್ಯಕ). ಈ ಸಾಮೂಹಿಕ ಜ್ವರಕ್ಕೆ ಹಲವಾರು ಇತರ ಕಾರಣಗಳಿದ್ದರೂ, ಮುಖ್ಯ ಕಾರಣವೆಂದರೆ ನಮ್ಮ ಭಾರತೀಯರಿಗಿದ್ದ 'ರಂಜಕ ಕಥಾಪ್ರಿಯತೆ' ಎನ್ನುವುದರಲ್ಲಿ ಎರಡು ಮಾತಿಲ್ಲ. ಏಕೆಂದರೆ ನಮ್ಮ ಶಾಶ್ವತ ನಂಬಿಕೆಗಳಿಗೆ ಧಕ್ಕೆ ತರದಂತೆ, ನಮಗೆ ಗೊತ್ತಿರುವುದಕ್ಕೆ ಬಣ್ಣ ಕಟ್ಟಿ ತೋರಿಸುವುದು ಇವುಗಳ ಗುಣ. ಅದರಲ್ಲಿಯೂ ನಮಗೆ ಚಿರಪರಿಚಿತವಾದ

ಈ ಪುರಾಣಗಳ ವಿಶೇಷವೆಂದರೆ ಒಂದು ದೃಶ್ಯ ನೋಡುತ್ತಿರುವಾಗ ಇಡೀ ಕಥೆಯನ್ನೇ ಅನುಸರಿಸುತ್ತಿರುತ್ತೇವೆ; ಸಕಾರಾತ್ಮಕವಾಗಿ ಅವುಗಳ ಜೊತೆ ಸ್ನೇಹಿತರಂತೆ ಸಹಪ್ರಯಾಣ ಮಾಡುತ್ತೇವೆ. ಜೊತೆಗೆ ಈ ಬಗೆಯ ಕೃತಿಗಳ ಸಂದರ್ಭದಲ್ಲಿ ನವ್ಯ ಹಾಗೂ ಆಧುನಿಕೋತ್ತರ ಕಲಾಕೃತಿಗಳಲ್ಲಿಯ ಹಾಗೆ ನೋಡುಗರು ಆಕ್ಟೀವ್ ಆಗಿರದೆ (ಅಂದರೆ ತಮ್ಮ ಬುದ್ಧಿ, ಕಲ್ಪನೆ, ತರ್ಕ ಶಕ್ತಿಗಳನ್ನು ವ್ಯಯಿಸಬೇಕಿಲ್ಲ; ಮೆದುಳಿಗೆ ಹೆಚ್ಚಿನ ಕೆಲಸ ಕೊಡಬೇಕಾಗಿಲ್ಲ)ಪ್ಯಾಸ್ಸೀವ್ ಆಗಿರುವುದು (ತೋರಿಸಿದ್ದನ್ನೆಲ್ಲಾ ಪ್ರಶ್ನಿಸದೆ ಸುಮ್ಮನೇ ಅದೇ ನಿಜವೆಂಬಂತೆ, ಹಾಗೆಯೇ ನಡೆದಿದೆಯೇನೋ ಎಂಬಂತೆ ಒಪ್ಪಿಕೊಳ್ಳುತ್ತಾ ಹೋಗುವುದು); ಪುಕ್ಕಟ್ಟೆ ಮನರಂಜನೆ ಪಡೆಯುವುದು. ಹೀಗಾಗಿ ಅಂದು ಇಡೀ ದೇಶದ ಜನವೆಲ್ಲ ಸಮೂಹ ಸನ್ನಿ ಹಿಡಿದವರಂತೆ ವರ್ತಿಸುತ್ತಿದ್ದರು ಎಂದು ಸ್ಥೂಲವಾಗಿ ಗ್ರಹಿಸಬಹುದಾಗಿದೆ.

ಈ ರಮಾನಂದ ಸಾಗರ್ ಮತ್ತು ಬಿ.ಆರ್. ಚೋಪ್ರಾ ಅವರು ತಮ್ಮ ಧಾರಾವಾಹಿಗಳ ಮೂಲಕ ಜನಜೀವನದ ಮೇಲೆ ಯಾವ ಬಗೆಯ ಪ್ರಭಾವವನ್ನು ಉಂಟುಮಾಡಿದರೋ, ಬಹುತೇಕ ಅದೇ ಬಗೆಯ ಪರಿಣಾವನ್ನು ಸುಮರು 100-140 ವರ್ಷಗಳ ಹಿಂದೆ ನಮ್ಮ ಚಿತ್ರ ಕಲಾವಿದ ರವಿವರ್ಮ ಕೂಡ ನಮ್ಮ ದೇಶದಲ್ಲಿ ಮಧ್ಯಮ ಮತ್ತು ಉನ್ನತ ವರ್ಗದವರ ಮೇಲೆ ಮಾಡಿದ್ದ. ರಮಾನಂದ ಸಾಗರ್ ಮತ್ತು ಬಿ.ಆರ್. ಚೋಪ್ರಾ ಅವರು 'ಚಲನಚಿತಗಳ' ಮೂಲಕ ಮಾಡಿದುದನ್ನೆ ಇವನು ಸ್ಥಿರ ಚಿತ್ರಣದಲ್ಲಿ ಮಾಡಿದ್ದ. "ಇರುವುದೆಲ್ಲವ ಬಿಟ್ಟು ಇರದುದರೆಡೆಗೆ ತುಡಿವುದೆ ಜೀವನ." ಎನ್ನುವ ಕವಿವಾಣಿಯಂತೆ ಯಾವುದು ನಮ್ಮಲ್ಲಿ ಆವರೆಗೆ ಇರಲಿಲ್ಲವೋ ಅವುಗಳನ್ನು ಪರಿಚಯಿಸುವ ಮೂಲಕ ಜನರಲ್ಲಿ ಹೊಸ ದೃಶ್ಯ ಪ್ರಜ್ಞೆಯನ್ನು ನಿರ್ಮಿಸಿದ; ಹೊಸ ಅಭಿರುಚಿಯನ್ನು ರೂಪಿಸಿದ. ಆಧುನಿಕ ಚಿತ್ರಕಲೆಯ ಕ್ಷೇತ್ರದಲ್ಲಿ ಹಲವಾರು ಹೊಸ ವಿಧಾನಗಳನ್ನು, ಹೊಸ ಮಾದರಿಗಳನ್ನು ಮುಂದಿಡುವ ಮೂಲಕ ಭಾರತೀಯ ಚಿತ್ರಕಲೆಯ ಕ್ಷೇತ್ರದಲ್ಲಿ ಬಿರುಗಾಳಿಯೆಬ್ಬಿಸಿದ. ಹಾಗೆ ಮಾಡುವಲ್ಲಿ ಅವನು ಅನುಸರಿಸಿದ ಚಾಣಾಕ್ಷ ತಂತ್ರಗಳು ಒಂದೆರಡಲ್ಲ, ಹಲವಾರು. ಅದರಲ್ಲಿ ಮೊದಲನೆಯದೆಂದರೆ ಕಥೆಗಳಿಗೆ, ಅದರಲ್ಲಿಯೂ ರಾಮಾಯಣ, ಮಹಾಭಾರತಗಳಂತಹ ಸ್ವಾಭಾವಿಕವಾಗಿಯೇ ಮ್ಯಾಜಿಕ್ ರಿಯಲಿಸಂ ಅಂಶಗಳಿರುವಂತಹ ವಸ್ತುವನ್ನು ಆರಿಸಿಕೊಂಡದ್ದು; ಅವುಗಳಿಗಿರುವ ಚಿತ್ತಾಪಹಾರಿ ಗುಣಗಳನ್ನು ಕಂಡುಕೊಂಡದ್ದು; ಅನುಸರಿಸಿದ್ದು. ಸರ್‍ರಿಯಲಿಸಂನ ಹಾಗೆಯೇ ವಾಸ್ತವದ ನಿಜ ವಾತಾವರಣವನ್ನು ಸೃಷ್ಟಿಸುವಾಗ ತರ್ಕಾತೀತವಾದ, ಮನಸ್ಸಿಗೆ ಮೋಡಿ ಮಾಡುವಂತಹ ಅಂಶಗಳನ್ನು ಸಮ್ಮಿಶ್ರಗೊಳಿಸುವ ಈ ವಿಧಾನವು ಮೂಲತಃ ಪಾಶ್ಚಾತ್ಯ ದೇಶಗಳಲ್ಲಿ ರೆನೆಸಾನ್ಸ್ ಕಾಲದಲ್ಲಿ ಮೊದಲು ಬಳಕೆ ಬಂದು, ನಂತರ ಒಂದೆರಡು ಶತಮಾನಗಳ ಕಾಲ ಅಲ್ಲಿನ ಕಲೆಯನ್ನು ಆಳಿದ್ದು ಕೂಡ ಇದೇ ಪ್ರಕಾರ. ಹೇಗೆ ಅಲ್ಲಿ ಯಶಸ್ವಿಯಾದುದನ್ನೆ ಇವನು ಇಲ್ಲಿ ತನ್ನ ಮೂಲ ಬಂಡವಾಳವಾಗಿಸಿಕೊಂಡ.

ಎಷ್ಟೇ ಆದರೂ ಟಿ.ಎಸ್. ಎಲಿಯಟ್ ಒಂದೆಡೆ ಹೇಳುವಂತೆ "ಅತಿಯಾದ ವಾಸ್ತವವನ್ನು ಮಾನವ ಸಮಾಜ ತಾಳಿಕೊಳ್ಳಲಾರದು" ಎನ್ನುವ ರಹಸ್ಯವನ್ನು ಅರಿತು ವಾಸ್ತವದೊಂದಿಗೆ ವಾಸ್ತವೇತರ ಅಂಶಗಳನ್ನು ಬೆಸೆದುದು ಇವನ ಯಶಸ್ಸಿಗೆ ಕಾರಣಗಳಲ್ಲೊಂದು. ಅಡಾಲ್ಫ್ ಗೊಟಿಲೆಬ್ ಹೇಳಿದಂತೆ "ಕಲಾವಿದನೊಬ್ಬನಿಗೆ ಕಲ್ಪನೆಯಿದ್ದರೆ, ತಾನೇ ಸ್ವತಃ ಅದರ ನಿರ್ವಹಣೆಯ ಬಗ್ಗೆಯೂ ಕಂಡು ಕೊಳ್ಳುತ್ತಾನೆ" ಎನ್ನುವ ಮಾತಿಗೆ ಇವನು ಉತ್ತಮ ಉದಾಹರಣೆಯೆನಿಸುತ್ತಾನೆ. ಏಕೆಂದರೆ ಅಂದಿನ ಜನರ ನಾಡಿ ಮಿಡಿತ ಬಲ್ಲ ಇವನು ಹೊಸತನದ ಮೂಲಕ ಮೋಡಿ ಮಾಡುವಾಗ ಈ ಕಲಾವಿದ ರೆಂಬ್ರಾಂಡ್, ವರ್ಮೀರ್, ರಫೈಲ್, ಡೇವಿಡ್, ಇಂಗ್ರೆಸ್ ಮುಂತಾದ ಪಾಶ್ಚಾತ್ಯ ಪ್ರಸಿದ್ಧ ಕಲಾವಿದರ ರೂಪಗಳನ್ನು ಮೇಳೈಸಿದ. 1898ರಲ್ಲಿ ಪ್ರಕಟವಾದ ರಾಯಲ್

ಅಕಾಡೆಮಿಯ ಮ್ಯಾಗಜೈನ್ ಆಫ್ ಆರ್ಟ್‌ನಲ್ಲಿನ ಚಿತ್ರಗಳ ಆಳವಾದ ಅಧ್ಯಯನ ನಡೆಸಿದ. ಜೊತೆಗೆ ವಿಕ್ಟೋರಿಯನ್ ಶೈಲಿಯ ಕೃತಿಗಳೂ ಅವನ ಮುಂದಿದ್ದವು. ಇವುಗಳನ್ನೆಲ್ಲ ಸೇರಿಸಿ ಹೊಸದೊಂದು ರೂಪವನ್ನು ಮುಂದಿಟ್ಟ.

"ಒಟ್ಟಾರೆಯಾಗಿ ರವಿವರ್ಮನನ್ನು ವರ್ತಮಾನದ ಸನ್ನಿವೇಶದಲ್ಲಿಟ್ಟು ಕಂಡರಿಸುವುದು ನನ್ನ ಆಶಯ. ಹಾಗಾಗಿ ಸಕಾರಾತ್ಮಕ ಹಾಗೂ ನೇತ್ಯಾತ್ಮಕ ಅಂಶಗಳೆರಡನ್ನೂ ಸಮಚಿತ್ತದಿಂದ ಇಟ್ಟು ನೋಡುವ ಪ್ರಯತ್ನ ಮಾಡಿದ್ದೇನೆ. ಅಂದಿಗೂ ಇಂದಿಗೂ ನೋಡುವ ಕಣ್ಣುಗಳು ಬದಲಾಗಿದೆ. ಗ್ರಾಂಡ್ ನೆರೇಟಿವ್‌ಗಳ ಕಾಲ ಮುಗಿದಿದೆ" ಎಂದು ಲ್ಯೋಟಾರ್ಡ್ ಇಂದಿನ ಪೋಸ್ಟ್ ಮಾಡರ್ನಿಸಂನ ಸಂದರ್ಭದಲ್ಲಿ ಹೇಳಿದನಾದರೂ ನೂರು ವರ್ಷಗಳ ಹಿಂದಿನ ಸ್ಥಿತಿ ಹಾಗಿರಲಿಲ್ಲ. ಬರಿಯ ಕಥೆಯೆಂದ ಕೂಡಲೇ ಕಿವಿಗಳು ಚುರುಕಾಗುತ್ತಿದ್ದಂತಹ ಕಾಲವದು. ಅಂತೆಯೇ ಭಾರತೀಯರು ಪುರಾಣಗಳು ಹಾಗೂ ಅವುಗಳ ಉಪಕಥೆಗಳಿಂದ ಹಿಡಿದು ಅಡಗೂಲಜ್ಜಿ ಕಥೆಗಳವರೆಗಿನ ಫ್ಯಾಂಟಸಿಯುಳ್ಳ ಎಲ್ಲವನ್ನೂ ಸಂಭ್ರಮದಿಂದ ಆನಂದಿಸಿದ್ದಾರೆ.

ನಿಶ್ಚಿತ ಕಥಾ ಹಂದರದ ನಡುವೆಯೂ ಇವು ಸ್ಥಿತಿಸ್ಥಾಪಕ ಗುಣ ಹೊಂದಿರುವುದರಿಂದ ಈ ರಾಮಾಯಣ, ಮಹಾಭಾರತಗಳು ಹಲವು ರೂಪಗಳಲ್ಲಿ ನಮ್ಮ ಕವಿ-ಕಲಾವಿದರಿಂದ ರೂಪುಗೊಂಡಿವೆ. ಜನಪದದಲ್ಲೂ ವೈವಿಧ್ಯಮಯವಾಗಿ ಬದಲಾದ ಕಥೆಗಳು ಚಲಾವಣೆಯಲ್ಲಿವೆ. ಹೀಗಿರುವಾಗ ನಮ್ಮ ಜನ ಈ ಬಗೆಯ ಕಥೆಗಳನ್ನು ತಮಗೆ ಬೇಕೆನಿಸಿದಂತೆ ಹಿಗ್ಗಿನಿಂದ ಹಿಗ್ಗಿಸಿಕೊಂಡಿದ್ದಾರೆ; ಕುಗ್ಗಿಸಿಕೊಂಡಿದ್ದಾರೆ. ಬಹುತೇಕ ರಾಕ್ಷಸ ಮತ್ತು ತಾಮಸಗಳ ದ್ವಂದ್ವಮಾನ ತಾರ್ಕಿಕತೆಯ ಸಂಘರ್ಷವುಳ್ಳ ಇವು ಕಥಾರ್ಸಿಸ್‌ನಂತೆ ಜನರ ಮನಸ್ಸುಗಳನ್ನು ಶೋಧಿಸಿ ಒಳಿತಿನ ಕಡೆಗೆ ಕೊಂಡೊಯ್ಯುವ ಶಕ್ತಿಯನ್ನು ತಮ್ಮೊಳಗೆ ಬಚ್ಚಿಟ್ಟುಕೊಂಡಿರುತ್ತವೆ. ಸೂಸನ್ ಸೋಮಂಟಾಗ್ ಕಲಾಕೃತಿಗಳ ವ್ಯಾಖ್ಯಾನದ ಬಗೆಗಿನ ತನ್ನ 1971ರ ಪ್ರಸಿದ್ಧ 'Against interpretation' ಪ್ರಬಂಧದಲ್ಲಿ ಹರ್ಮಿನ್ಯೂಟಿಕ್ಸ್ ಹಾಗೂ ಎರೋಟಿಕ್ಸ್ ಎಂಬ ಎರಡು ಪ್ರಕಾರಗಳನ್ನು ಗುರುತಿಸುತ್ತಾಳೆ. ಸರಳವಾಗಿ ಹೇಳುವುದಾದರೆ ಹರ್ಮಿನ್ಯೂಟಿಕ್ಸ್ ಮೆದುಳಿಗೆ ಕೆಲಸ ಕೊಡುವಂತಹ ಪ್ರಕಾರವಾದರೆ ಎರೋಟಿಕ್ಸ್, ಪ್ರಣಯದಲ್ಲಿಯಂತೆ ಯಾವುದೆ ವೈಚಾರಿಕ ವಿಶ್ಲೇಷಣೆಗಳಿಗೊಡ್ಡದೇ ಸುಖವನ್ನು ಪಡೆಯುವಂತಾದ್ದು. ರವಿವರ್ಮನ ಬಹುತೇಕ ಎಲ್ಲ ಕೃತಿಗಳೂ ಈ ಎರೋಟಿಕ್ಸ ಪ್ರಕಾರವನ್ನು ಉತ್ತೇಜಿಸುವಂತಿವೆ. ಅಂತೆಯೇ ಶತಮಾನಗಳಿಂದ ಮೌಖಿಕ ಹಾಗೂ ಅಕ್ಷರ ಸ್ವರೂಪದಲ್ಲಿ ಮಾತ್ರ ಕಂಡು ಬಂದ ಈ ಕಥನ ಸಂಪ್ರದಾಯಕ್ಕೆ ಯಾವುದೇ ಹೊಸ ವಿಶ್ಲೇಷಣೆಯುಳ್ಳ ಕಥೆ ಸೃಷ್ಟಿಸುವುದಕ್ಕಿಂತಲೂ. ಚಲಾವಣೆಯಲ್ಲಿರುವ ಕಥೆಯನ್ನೇ ಆರಿಸಿಕೊಳ್ಳುವುದರಲ್ಲಿಯೂ ಇವನ ಜಾಣತನ. ಚಾಣಾಕ್ಷತೆ ಕೆಲಸ ಮಾಡಿವೆ.

ಹೀಗೆ ಈ ಕಥಾರೂಪಗಳಿಗೆ ತಹತಹಿಸುತ್ತಿದ್ದ ಆ ಸಂದರ್ಭದಲ್ಲಿ ಪ್ಯಾರಡೈಮ್ ಶಿಫ್ಟ್‌ನಂತೆ ಚಿತ್ರರೂಪವನ್ನು ಕಂಡರಿಸಿದ್ದು ಮಾತ್ರವೇ ಅಲ್ಲ. ಇದ್ದ ಬದ್ದ ಸಕಾರಾತ್ಮಕ ಅಂಶಗಳನ್ನೆಲ್ಲ ಮೊದಲ ಬಾರಿಗೆ ದುಡಿಸಿಕೊಂಡವನು ರವಿವರ್ಮ. ನಮ್ಮ ದೃಶ್ಯ ಸಂಸ್ಕೃತಿಯು ಅಷ್ಟಾಗಿ ವೈವಿಧ್ಯತೆಯಿಂದ ಕೂಡಿರದಿದ್ದ ಕಾಲದಲ್ಲಿ ನಮಗೆ ಇವುಗಳ ಮೂಲಕ ಆಕಾಶದಂತೆ ಬೃಹತ್ತಾದ ಕ್ಯಾನ್ವಾಸನ್ನು ತೋರಿಸಿದ; ಯೂರೋಪಿಯನ್ ರಿಯಲಿಸಂ ಮೂಲಕ ನಮ್ಮ ಕಣ್ಣುಗಳು ಈವರೆಗೆ ಕಂಡಿರದಿದ್ದ ಹೊಸ ಕಲ್ಪನಾ ರೂಪಗಳನ್ನು ಹೊಸ ಲೋಕವೊಂದನ್ನು ತೆರೆದಿಟ್ಟ. ಈಗಿನಂತೆ ಚಲನಚಿತ್ರವಿರಲಿ. ಫೋಟೋಗ್ರಾಫಿಯಾಗಲೀ. ವಾಸ್ತವ ರೂಪದ ಚಿತ್ರಣವಾಗಲೀ ಇಲ್ಲದಿದ್ದ ಕಾಲವದು ಎಂಬುದನ್ನು ಊಹಿಸಿಕೊಂಡಾಗ ಅವುಗಳ ನಿಜ ಪರಿಣಾಮದ ಅರಿವು ನಮಗಾದೀತು. ಏಕೆಂದರೆ ಹತ್ತೊಂಬತ್ತನೆಯ ಶತಮಾನಕ್ಕೂ ಮುನ್ನ ನಮ್ಮಲ್ಲಿ

ಚಲಾವಣೆಯಲ್ಲಿದ್ದುದು ಭಾರತೀಯ ಸಾಂಪ್ರದಾಯಿಕ ಕಲಾರೂಪಗಳು. ಚಿಕಣಿ ಚಿತ್ರಗಳು, ಭಿತ್ತಿ ಚಿತ್ರಗಳು, ಸಾಂಪ್ರದಾಯಿಕ ಶಿಲ್ಪಗಳು ಇತ್ಯಾದಿಗಳಲ್ಲಿ ಈ ಪುರಾಣಗಳ ಚಿರಂತನ ಪ್ರತೀಕಗಳು ಸಾವಿರಾರು ಸಂಖ್ಯೆಯಲ್ಲಿ ಕಂಡು ಬಂದಿದ್ದರೂ ಅವು ಕಣ್ಣಿಗೆ ಕಟ್ಟುವಂತಹ, ಭ್ರಮಾಲೋಕವನ್ನು ಕಟ್ಟಿಕೊಡುವಂತಹ, ಛಾಯಾಚಿತ್ರಗಳ ಹಾಗಿನ ವಾಸ್ತವದ ರೂಪಗಳಾಗಿರಲಿಲ್ಲ. ವಿವಿಧ ಸಾಂಪ್ರದಾಯಿಕತೆಗಳ ಚೌಕಟ್ಟಿನಲ್ಲಿ ದ್ವಿಮಾನದಲ್ಲಿ, ನೆರಳು–ಬೆಳಕುಗಳಿಲ್ಲದೆ, ಛಾಯಾಂತರವಿಲ್ಲದೆ ರೂಪುಗೊಂಡ ಆದರ್ಶ ಭಾರತೀಯ ರೂಪಗಳು ಅವಾಗಿದ್ದವು.

ತ್ರಿಮಾನದ ಭ್ರಾಂತಿಯನ್ನು ನಿರ್ಮಿಸುವ ತೈಲಚಿತ್ರಗಳೊಂದಿಗಿನ ಸ್ಪರ್ಧೆಯಲ್ಲಿ ದ್ವಿಮಾನದ ರೂಪಗಳು ಸೋತಂತಾಗಿದ್ದವು. ಹೀಗೆ ಆಗ ಚಲಾವಣೆಯಲ್ಲಿದ್ದ ವಿಭಿನ್ನ ಭಾರತೀಯ ಸಾಂಪ್ರದಾಯಿಕ ರೂಪಗಳೆಲ್ಲ ತಾಜಾತನ ಕಳೆದುಕೊಂಡು ನಿಂತ ನೀರಂತಾಗಿದ್ದು, ಅದೇ ಸಮಯದಲ್ಲಿ ಬ್ರಿಟಿಷ್ ಹಾಗೂ ಪಾಶ್ಚಾತ್ಯ ಕಲಾವಿದರ ಅಕಾಡೆಮಿಕ್ ರಿಯಲಿಸಂನ ಕೃತಿಗಳು ಆಗ ತಾನೇ ಚಲಾವಣೆಗೆ ಬಂದಿದ್ದವು. ಇಂತಹ ಸಂದರ್ಭದಲ್ಲಿ ಆಗ ಮುಂಚೂಣಿಗೆ ಬಂದಿದ್ದ ಕಲಾಪ್ರಕಾರವನ್ನು ಅನುಸರಿಸುವುದೇ ರವಿವರ್ಮನ ಆಯ್ಕೆಯೂ ಆಗಿತ್ತು. "ದ್ವಿಮಾನದ ಕಾಗದ ಅಥವಾ ಕ್ಯಾನ್ವಾಸಿಗೆ ಗೌರವ ತೋರಬೇಕಾದರೆ ಅದರ ಮೇಲಿನ ಚಿತ್ರವನ್ನು ಕೂಡ ದ್ವಿಮಾನದಲ್ಲಿಯೇ ರಚಿಸಬೇಕು" ಎಂದು ಕ್ಲೆಮೆಂಟ್ ಗ್ರೀನ್‌ಬರ್ಗ್ ನವ್ಯಕಲೆಯ ಸಂದರ್ಭದಲ್ಲಿ ಹೇಳಿದ. ಆದರೆ ಈ ಅಭಿಪ್ರಾಯವನ್ನು ತಿರಸ್ಕರಿಸಿದ ಕಾಲ ಅದಾಗಿತ್ತು ಎಂಬುದಕ್ಕೆ ಮುಂದೆ ರವಿವರ್ಮನಿಗೆ ದೊರೆತ ಅಭೂತಪೂರ್ವ ಯಶಸ್ಸು ಒಂದು ಉದಾಹರಣೆಯೆನಿಸುತ್ತದೆ.

ಯಾವುದೇ ಕಥಾ ನಿರೂಪಕರು ಮಾಡಬೇಕಾದ ಮೊದಲ ಕೆಲಸವೆಂದರೆ ತಾವು ತೋರಿಸುವುದನ್ನು ಜನ ನಂಬುವಂತೆ ಮಾಡುವುದು. ಜೊತೆಗೆ ವಾಸ್ತವ ಮತ್ತು ಭ್ರಮೆಗಳ ನಡುವೆ ಅತ್ತಿಂದಿತ್ತ ತೂಗುವಂತೆ ಮಾಡಿ ಅವರ ಆಕರ್ಷಣೆಯನ್ನು ಹಿಡಿದಿಡುವುದು. ಅಂತೆಯೇ ಅಂದಿನ ಜನ ಕೇವಲ ಮನಸ್ಸಿನಲ್ಲಿ ಕಟ್ಟಿಕೊಂಡಿದ್ದ ದೇವದೇವತೆಯರನ್ನು ಮಾಯಾ ಬಜಾರ್‌ನಲ್ಲಿಯಂತೆ "ಇದೋ ತಗೊಳ್ಳಿ" ಎಂಬಂತೆ ಧುತ್ತನೆ ಭೂಮಿಗೆ ಇಳಿಸಿ ಜನರ ಮುಂದಿಟ್ಟವನು ಇವನು. ದೇವರನ್ನು ರಕ್ತ ಮಾಂಸಗಳಿಂದ ಕೂಡಿ ನಮ್ಮ ನಡುವೆ ಓಡಾಡುವವರಂತೆಯೇ ಚಿತ್ರಗಳಲ್ಲಿ ರೂಪಿಸಿದವನು. ಅವರೆಗೆ ನಮ್ಮ ದೃಶ್ಯ ಸಂಸ್ಕೃತಿಯಲ್ಲಿ ಗೈರು ಹಾಜರಾಗಿದ್ದ ರೂಪಗಳನ್ನೇ ಹಾಜರುಪಡಿಸಿದವನು. ನಮ್ಮಲ್ಲಿ ಯಾರೂ ನೋಡಿರದಿದ್ದ, ಊಹಿಸಿಕೊಂಡಿರದಿದ್ದ ಹೊಚ್ಚ ಹೊಸ ತಾಜಾ ರೂಪಗಳವು. ಏಕೆಂಧರೆ ದೇವರು ಎಂಬ ಬಗ್ಗೆ ಜನಗಳಲ್ಲಿದ್ದ ಕಲ್ಪನೆಯೇ ಬೇರೆ. ನಮ್ಮ ಹಿಂದಿನ ಚಿತ್ರಗಳಲ್ಲಿಯೂ ಅವರು ಕೂಡ ನೋಡಿದ್ದುದು ಹತ್ತಾರು ಕೈಗಳು, ಹಲವಾರು ಆಯುಧಗಳನ್ನು ಹೊಂದಿದ್ದ ಅತಿ ಮಾನುಷರನ್ನು, ದೇವಲೋಕಕ್ಕಷ್ಟೇ ದಕ್ಕಿದ್ದ ದೇವರುಗಳನ್ನು. ಹಾಗಾಗಿ ಆ ಹಿಂದಿನ ದೇವದೇವತೆಗಳು ಜನರಿಂದ ತುಂಬಾ ದೂರದಲ್ಲಿದ್ದವರು. ಆದರೆ ರವಿವರ್ಮ ಆ ಅಂತರವನ್ನು ಕಡಿಮೆಗೊಳಿಸಿ ಜನ ತಮ್ಮ ಹತ್ತಿರಕ್ಕೆ ಇವರನ್ನು ಕರೆದುಕೊಳ್ಳುವಂತೆ, ಆತ್ಮೀಯರೆನಿಸುವಂತೆ ಮನುಷ್ಯ ರೂಪ ನೀಡಿದ. ಸಾಮಾನ್ಯ ಮನುಷ್ಯರಿಗೇ ಕೇವಲ ಕಿರೀಟ, ವೇಷಭೂಷಣಗಳನ್ನು ತೊಡಿಸಿ, ಮೇಕಪ್ ಮಾಡಿ, ಗ್ರೀಕರ ದೇವರುಗಳ ಹಾಗೆಯೇ ಜನರಿಂದ ಸ್ವಲ್ಪವೇ ಉನ್ನತ ಸ್ತರದಲ್ಲಿ ನಿಲ್ಲಿಸಿದ. ಹಾಗಾಗಿ ತಮಗೆ ಸುಲಭದಲ್ಲಿ ದಕ್ಕುವ ಈ ದೇವರುಗಳನ್ನು ಜನ ನಂಬಿದರು. ಪುರಾಣಗಳಲ್ಲಿಯ ಹಾಗೆ ಮಾಯಾಲೋಕದಲ್ಲಿ, ನಂಬಲಾಗದ ಸನ್ನಿವೇಶಗಳಲ್ಲಿ ಇರದಿದ್ದ ದೇವರುಗಳನ್ನು ಬೆರಗು ಗಣ್ಣುಗಳಿಂದ ಆದರಿಸಿದರು. ಇನ್ನೂ ಹೇಳಬೇಕೆಂದರೆ ಆ ಕಾಲದಲ್ಲಿ ನಮ್ಮ ಸುತ್ತಮುತ್ತ ಆಳುತ್ತಿದ್ದ ರಾಜ ಮಹಾರಾಜರುಗಳ ವೇಷಭೂಷಣಗಳನ್ನೇ, ನಾಟಕಗಳಲ್ಲಿಯಂತೆ ಬಹುತೇಕ ರೂಪಿಸಿದ. ಹಾಗಿದ್ದರೂ ಜನರು ಸುಲಭದಲ್ಲಿ ಈ ದೇವರುಗಳ ಹೆಗಲ ಮೇಲೆ ಕೈ ಹಾಕುವಷ್ಟು

ಹತ್ತಿರಕ್ಕೂ ಬಿಡಲಿಲ್ಲ. ಅವನು ಮಾಡಿದುದೆಂದರೆ ನಮ್ಮ ಸುತ್ತಮುತ್ತಲಿನ ದೇವಸ್ಥಾನಗಳಲ್ಲಿದ್ದ ದೇವರುಗಳಿಂದ ಈ ದೇವರುಗಳನ್ನು ಪ್ರತ್ಯೇಕವಾಗಿಸಿದುದು. ಹೀಗೆ ಜನರನ್ನು ನಂಬಿಸಲು ಗಾಳಹಾಕಿ ಅವರ ಕೈವಶ ಮಾಡಿಕೊಳ್ಳಲು ಅನುಸರಿಸಿದ ತಂತ್ರಗಳು ಹಲವು.

ಈ ಕಲಾವಿದನ ಬಹುಮುಖ್ಯವಾದ ಇನ್ನೊಂದು ತಂತ್ರವೆಂದರೆ ತೈಲವರ್ಣಗಳ ಆಯ್ಕೆ. ಆಗತಾನೇ ನಮ್ಮ ದೇಶದಲ್ಲಿ ಬ್ರಿಟಿಶ್ ಕಲಾವಿದರಿಂದ ಚಲಾವಣೆಗೆ ಬಂದು. ಬಹುತೇಕ ಶೈಶವಾವಸ್ಥೆಯಲ್ಲಿಯೇ ಇದ್ದ ತೈಲವರ್ಣಗಳಿಗಿದ್ದ ಅದ್ಭುತ ಶಕ್ತಿ ಅವನಿಗೆ ಗೊತ್ತಿತ್ತು. ಅಂತೆಯೇ ಆ ಕಾಲದ ಕುಲೀನ ವಿದ್ವಾಂಸ ಮನೆತನಗಳವರು ತಮ್ಮ ದೊಡ್ಡಸ್ತಿಕೆಯನ್ನು ಪ್ರದರ್ಶಿಸಲು ಮಾತುಕತೆಯಲ್ಲಿ ಇಂಗ್ಲೀಷನ್ನು ಆರಿಸಿಕೊಳ್ಳುವಂತೆ, ಅದಕ್ಕೆ ಸಂವಾದಿಯಾಗಿಯೋ ಎಂಬಂತೆ ಆ ಕಾಲದ ಉನ್ನತ ಮಾಧ್ಯಮವೆನಿಸಿದ್ದ ತೈಲಚಿತ್ರರಚನೆಯನ್ನು ಇವನು 1870ರ ದಶಕದಲ್ಲಿ ಬೆಂಬಿಡದ ಭೂತದಂತೆ ಶತಾಯಗತಾಯ ಕಲಿತು, ತಾನು ಕೂಡ ಉನ್ನತ ಸ್ತರದವನೆಂಬುದನ್ನು ನಿರೂಪಿಸಿದ. ತೈಲವರ್ಣ ಪ್ರಕಾರದಲ್ಲಿ ಅತ್ಯುಚ್ಚ ಪ್ರಕಾರದವೆಂದರೆ ಇತಿಹಾಸ ಅಥವಾ ಪುರಾಣಾಧಾರಿತ ಕೃತಿಗಳು. ಆಗ ಈ ಬಗೆಯ ಗ್ರೀಕ್ ಅಥವಾ ಪುರಾತನ ರೂಪಗಳನ್ನು ಕೂಡ ಸ್ವಾಭಾವಿಕವಾಗಿಯೇ ಭಾವಚಿತ್ರ ಅಥವಾ ನಿಸರ್ಗ ಚಿತ್ರಣಕ್ಕಿಂತ ಉನ್ನತ ಸ್ಥಾನದಲ್ಲಿಟ್ಟು ನೋಡಲಾಗುತ್ತಿತ್ತು. ಈ ಸಂದರ್ಭದಲ್ಲಿ ತೈಲವರ್ಣಗಳಿರುವ ಮಾಂತ್ರಿಕ. ಮಾದಕ. ಪರವಶಗೊಳಿಸುವ ಶಕ್ತಿಯ ಬಗ್ಗೆ ಜಾನ್ ಬರ್ಜರ್ ತನ್ನ 'ವೇಸ್ ಆಫ್ ಸೀಯಿಂಗ್' ಪುಸ್ತಕದಲ್ಲಿ ವಿವರಿಸಿದ್ದನ್ನು ಇಲ್ಲಿ ಉಲ್ಲೇಖಿಸಬಹುದು. "What distinguishes oil painting from any other form of painting is its special ability to render the tangibility, texture, the lustre, the solidity of what it depicts. It defines the real as that which you can put your hands on although its painted images are two-dimensional, its potential illusionism is far greater than sculpture, for it can suggest object possessing colour, texture and temperature, filling a space and by implication, filling the entire world." (John Berger, page 88, ways of seeing BBC, London). ಅಂದರೆ ಸಮರ್ಥ ಕಲಾವಿದ ಯಾವ ವಸ್ತುವನ್ನು ರಚಿಸುತ್ತಾನೆಯೋ ಅದು ನೋಡುಗನ ಕೈಗೆ ನಿಜವಾಗಿಯೂ ಸಿಗುವಂತೆ, ಕೈಯಿಂದ ಮುಟ್ಟಬಹುದಾದಂತಹ ಸ್ಪರ್ಶೀಯ ಗುಣ. ಮೈವಳಿಕೆ. ತೇಜಸ್ಸು ಮತ್ತು ಘನತ್ವಗಳನ್ನು ಅದು ಹೊಂದಿರುತ್ತದೆ. ಹೀಗೆ ತೈಲವರ್ಣವು ವರ್ಚುಯಲ್ ಲೋಕ ಸೃಷ್ಟಿ ಮಾಡುವ ಸಾಧ್ಯತೆ ಹೊಂದಿರುವ ಅಪರೂಪದ ಮಾಧ್ಯಮವಾಗಿರುವುದು ಮಾತ್ರವೇ ಅಲ್ಲ. ನೋಡುಗನಲ್ಲಿ ಯಾವುದೇ ಸಮಸ್ಯೆ ಉಂಟು ಮಾಡದಂತೆ ಆ ವಸ್ತುವಿನ ಪ್ರತಿನಿಧೀಕರಣವನ್ನು ಸಾಧ್ಯ ಮಾಡುವ ಗುಣ ಹೊಂದಿದೆ.

ತೈಲವರ್ಣಗಳಿರುವ ಇನ್ನೊಂದು ಶಕ್ತಿಯೆಂದರೆ ನೋಡುತ್ತಿರುವ ವಸ್ತುರೂಪವನ್ನು ವಶೀಕರಿಸಿಕೊಳ್ಳುವ ಗುಣ. ಗುಹಾಮಾನವ ತಾನು ಯಾವುದನ್ನು ಚಿತ್ರಿಸುತ್ತೇನೆಯೋ ಅದು ತನ್ನ ವಶಕ್ಕೆ ಬರುತ್ತದೆ ಎಂದು ನಂಬಿದಂತೆ. ಯಾವುದನ್ನು ಛಾಯಾಚಿತ್ರವೊಂದರಲ್ಲಿಯಂತೆ ತೈಲ ಮಾಧ್ಯಮದಲ್ಲಿ ಚಿತ್ರಿಸಲಾಗಿದೆಯೋ ಅದನ್ನು ವಶಪಡಿಸಿಕೊಂಡಂತಹ ಭಾವನೆ ನೋಡುಗನಲ್ಲಿ ಮೂಡುವುದು ಇದರ ವಿಶಿಷ್ಟ ಗುಣ. ಇದನ್ನೇ ಲೆವಿಸ್ಟ್ರಾಸ್ ಹೀಗೆ ಹೇಳುತ್ತಾನೆ. "For Renaissance artists, painting was perhaps an instrument of knowledge but it was also an Instrument of possession, and we must not forget, when we are dealing with Renaissance paintings, that it was only possible be-

cause of the immense fortunes which were being amassed in Florence and else where, and that rich Italian Merchaŋt (ಇಲ್ಲಿ ನಮ್ಮ ದೇಶದ ರಾಜ ಮಹಾರಾಜರುಗಳು, ಶ್ರೀಮಂತರು ಎಂಧು ಓದಿಕೊಳ್ಳಿ–ಲೇಖಕ) looked upon painters as agents, who allowed them to confirm their possession all that was beautiful and desirable in the world. (ಬಹುತೇಕ ಕೊಳ್ಳುಗರೆಲ್ಲ ಸುಂದರ ಸ್ತ್ರೀಯರ ಚಿತ್ರ ಬರೆಸಿಕೊಂಡು ತಮ್ಮ ಮಲಗುವ ಕೋಣೆಗಳಲ್ಲಿ ತೂಗುಹಾಕುತ್ತಿದ್ದುದು ಏಕೆ ಎಂದು ಊಹಿಸಿಕೊಳ್ಳಿ –ಲೇ:). The picutres in A Florentine palace represented a kind of microcasm in which the proprietor, thanks to his artists, had recreated within easy reach and in as real of form possible, all those features of the world to which he was attached" (Page 86 - Ibid)

ಸ್ವತಃ ರೂಪದರ್ಶಿಗಳನ್ನು ಎದುರಿಗೆ ಇಟ್ಟುಕೊಂಡು ನೆರಳು–ಬೆಳಕು, ಘನತ್ವ, ಛಾಯಾಂತರ, ವರ್ಣಮೇಳ ಇತ್ಯಾದಿಗಳನ್ನು ಯಥಾವತ್ತಾಗಿ ರಚಿಸುವ ಕ್ರಮ ಭಾರತೀಯರ ಕಲಾ ಸಂಪ್ರದಾಯದಲ್ಲಿ ಇರಲಿಲ್ಲ. ಬ್ರಿಟಿಷರ ಈ ವಿಧಾನವನ್ನು ಅನುಸರಿಸುವ ಮೂಲಕ ರವಿವರ್ಮ ಕೃತಿಗಳಿಗೆ ಖಚಿತತೆ ತರುವುದಷ್ಟೇ ಅಲ್ಲ ನಾಟಕವೊಂದರಲ್ಲಿಯಂತೆ ವ್ಯಕ್ತಿಗಳು ಸ್ವತಃ ಅಲ್ಲಿ ಆ ಕ್ರಿಯೆಯಲ್ಲಿ ತೊಡಗಿದ್ದಾರೆಯೋ ಎಂಬ ಭ್ರಮೆ ತರಿಸುವಂತೆ ಚಿತ್ರಿಸಲು ಅವನಿಗೆ ಸಾಧ್ಯವಾಯಿತು. ವೇಷಭೂಷಣಗಳೂ ಕೂಡ ಅವನು ಅಂದಿನ ಮುಂಬಯಿಯ ಪಾರ್ಸಿ ರಂಗಭೂಮಿಯಿಂದ ಪ್ರಭಾವಿತನಾಗಿದ್ದ ಎನ್ನುವುದಕ್ಕೆ ಅವನು ಪಾರ್ಸಿ ನಾಟಕಗಳನ್ನು ನೋಡುವಾಗ ರಚಿಸಿದ ಸ್ಕೆಚ್‌ಗಳು ಸಾಕ್ಷಿಯೆನಿಸುತ್ತವೆ.

ಕುತೂಹಲವೆನಿಸುವಂತೆ ಅವನು ಒಂಭತ್ತು ಗಜದ ಸೀರೆಗೆ ಜನಪ್ರಿಯತೆಯನ್ನೂ ತಂದು–ಕೊಟ್ಟ. ಮಹಿಳೆಯರ ಪಾಶ್ಚಾತ್ಯ ಉಡುಪುಗಳಿಗೆ ಹೋಲಿಸಿದರೆ, ಸೀರೆ ತುಂಬ ವಿಶಿಷ್ಟವಾದುದು. ಅದನ್ನು ಉಟ್ಟವರ ದೇಹದ ಆಕೃತಿಯನ್ನು ಸ್ಪಷ್ಟವಾಗಿ ತೋರಿಸುವಂತಹ ಸೆಕ್ಸಿ ಉಡುಗೆ ಅದು ಎಂಬುದರ ಅರಿವು ಅವನಿಗಿತ್ತು. ಅಂತೆಯೇ ಭಾರತದ ವಿವಿಧ ಪ್ರದೇಶಗಳ ಜನರ ಉಡುಪಿನಲ್ಲಿ ವೈವಿಧ್ಯತೆಯಿದ್ದರೂ, ಬಹುತೇಕ ತನ್ನ ದೇವತೆಯರಿಗೆ, ಹೆಂಗಳೆಯರಿಗೆ ಸೀರೆ ತೊಡಿಸುವ ಮೂಲಕವೂ ತಾನು ಸ್ವೀಕಾರಾರ್ಹನೆನಿಸಿದ. ಜೊತೆಗೆ ಪ್ಯಾನ್–ಇಂಡಿಯನ್ ನೋಟವನ್ನೇ ಕೃತಿಗಳಲ್ಲಿ ತಂದು ಭಾರತದ ಎಲ್ಲ ಪ್ರದೇಶಗಳವರೂ ತನ್ನ ಕೃತಿಗಳನ್ನು ಸ್ವೀಕರಿಸುವಂತೆ ಮಾಡಿಕೊಂಡ.

ಕುತೂಹಲದ ಸಂಗತಿಯೆಂದರೆ ಇಂದಿಗಿಂತ ಬಹಳ ಹೆಚ್ಚಾಗಿ ಪ್ರಾದೇಶಿಕ ಅಸಮಾನತೆ, ಭಿನ್ನತೆಗಳು ಇದ್ದಂತಹ ಪ್ರಾದೇಶಿಕ ರಾಜ್ಯಗಳಂತಹ ಸಮಯದಲ್ಲಿ ಎಲ್ಲ ಪ್ರದೇಶಗಳವರಿಗೂ ಈ ಒಪ್ಪಿಗೆಯಾಗುವಂತಹ ವೇಷಭೂಷಣಗಳ ಮೂಲಕ ರಾಷ್ಟ್ರೀಯ ಭಾವನೆ ನಿರ್ಮಿಸುವಲ್ಲಿಯೂ ರವಿವರ್ಮನ ಪಾತ್ರವು ಮಹತ್ವದ್ದು. ರವಿವರ್ಮ ತೀರಿಕೊಂಡ ಸಮಯದಲ್ಲಿ (1907ರಲ್ಲಿ) ನಿವೇದಿತಾ ಅವರು 'The modern review' ಪತ್ರಿಕೆಯಲ್ಲಿ The Functionf of Art in shaping nationality ಎಂಬ ಶೀರ್ಷಿಕೆಯಲ್ಲಿ ಬರೆದ ಲೇಖನ ಹಾಗೂ ರಮಾನಂದ ಚಟರ್ಜಿಯವರ ಲೇಖನದ ಚರ್ಚೆಗಳಲ್ಲಿ ಇದನ್ನು ಗಮನಿಸಬಹುದಾಗಿದೆ.

ಓಗೆ ಇವು ಕಥಾ ನಿರೂಪಣೆಯ ಚಿತ್ರಗಳ ಕಾಲವನ್ನೇ ಆರಂಭಿಸಿತು. ಅಷ್ಟೇ ಅಲ್ಲ. ತನ್ನ ಕೃತಿಗಳು, ವಿವಿಧ ಪ್ರದೇಶಗಳಲ್ಲಿನ ರಾಜ ಮಹಾರಾಜರುಗಳ ನಿಯೋಜನೆಗಳು ಹಾಗೂ ಭಾರತದಾದ್ಯಂತ ನಿರಂತರ ಪ್ರವಾಸಗಳಿಂದಾಗಿ ಜನ ಅವನನ್ನು ಕೇವಲ ಕೇರಳದ

ಕಲಾವಿದನಾಗಿ ಗುರುತಿಸದೆ ಭಾರತವನ್ನು ಪ್ರತಿನಿಧಿಸುವಂತಹ ಕಲಾವಿದನೆನಿಸಿದ. ಇದರೊಂದಿಗೆ ಭಾರತದೆಲ್ಲೆಡೆಯ ಮಧ್ಯಮ ವರ್ಗದವರಿಗೆ ಅವರು ಕಾತುರದಿಂದ ನಿರೀಕ್ಷಿಸುತ್ತಿದ್ದ ದೇವರುಗಳ ಚಿತ್ರಗಳನ್ನು ಓಲಿಯೊಗ್ರಾಫ್ ತಂತ್ರದಲ್ಲಿ ಮುದ್ರಿಸಿ ಅಗ್ಗದ ಬೆಲೆಗೆ ಮಾರಾಟ ಮಾಡಿದ. ಆ ನಂತರದಿಂದ ತಮ್ಮ ಮನೆಯ ದೇವರ ಕೋಣೆಗಳಲ್ಲಿ ಈ ಓಲಿಯೋಗ್ರಾಫ್ ಮುದ್ರಣದ ದೇವರುಗಳ ಚಿತ್ರಗಳನ್ನೇ ಚಂದದ ಕಟ್ಟು ಹಾಕಿಸಿ ಪೂಜಿಸುವ ಪರಂಪರೆಯೂ ಆರಂಭವಾಯಿತು. ಹೀಗೆ ಜನರಿಗೆ ಸುಲಭದಲ್ಲಿ ದೇವರುಗಳನ್ನು ನೀಡುವ ಮೂಲಕವೂ ಅವನು ಭಾರತದಾದ್ಯಂತ ಜನಜನಿತನಾದ.

* * *

ನಿಜವಾಗಿಯೂ ರಾಜರ ಮನೆತನಕ್ಕೆ ನೇರವಾಗಿ ಸೇರದ, ಎಂದಿಗೂ ರಾಜನಾಗಿರದ ರವಿವರ್ಮನನ್ನು Prince among the artists and Artist among the princes ಎಂದೇ ಹಿಂದಿನವರು ಗುರುತಿಸಿದ್ದಾರೆ. ಚಿತ್ರಕಲೆಯ ಸಂದರ್ಭದಲ್ಲಿ ರಾಜನಂತೆಯೇ ಮೆರೆದ ಇವನನ್ನು ರಾಜನನ್ನಾಗಿ ಕರೆಯುವಂತೆ ನಿಜಕ್ಕೂ ಮಾಡಿದವರು ಬ್ರಿಟಿಷರೇ. 1904ರಲ್ಲಿ ಅಂದಿನ ಬ್ರಿಟಿಷ್ ಸರ್ಕಾರ ಇವನಿಗೆ 'ಕೈಸರ್ ಎ ಹಿಂದ್' ಪ್ರಶಸ್ತಿ ನೀಡಿ ಗೌರವಿಸಿತು. ಈ ಪ್ರಶಸ್ತಿ ಪಡೆದ ಏಕೈಕ ಕಲಾವಿದ ಇವನಾಗಿದ್ದು, ಅವನಿಗೆ ನೀಡಿದ ಪ್ರಶಸ್ತಿ ಪತ್ರದಲ್ಲಿ ರಾಜಾ ರವಿವರ್ಮ ಎಂದು ಬರೆದಿದ್ದು, ಅಂದಿನಿಂದ ಎಲ್ಲರೂ ರಾಜಾ ರವಿವರ್ಮ ಎಂದೇ ಕರೆಯಲಾರಂಭಿಸಿದರು. ಕೆಲವರಂತೂ ಅವನು ರಾಜನಾಗಿದ್ದ ಎಂದೇ ತಿಳಿದಿದ್ದಾರೆ.

ಕೇರಳದ ಕಿಳಿಮಾನೂರಿನ ಉಮಾಂಬ ತಂಪುರಾಟ್ಟಿ, ಎಳುಮಾವಿಲ್ ನೀಲಕಂಠನ್ ಭಟ್ಟಾತಿರಿಪ್ಪಾಡ್ ದಂಪತಿಗಳ ಪುತ್ರನಾಗಿ 1848ರ ಏಪ್ರಿಲ್ 29ರಂದು ಜನಿಸಿದ ರವಿವರ್ಮನ ಹಿಂದಿನ ತಲೆಮಾರಿನ ಕೇರಳ ವರ್ಮ ಮತ್ತು ಕಾರ್ತಿಕಾತಿರುನಾಳ್ ರಾಮವರ್ಮ ಧರ್ಮವರ್ಮ ಅವರು ಶತ್ರುಗಳಿಂದ ಕಿಳಿಮಾನೂರಿನ ಕೋಟೆಯನ್ನು ರಕ್ಷಿಸುವಲ್ಲಿ ನೆರವಾಗಿ ಹುತಾತ್ಮರಾಗಿದ್ದಕ್ಕಾಗಿ ಅಂದಿನ ರಾಜ ವೀರ ಮಾರ್ತಾಂಡ ವರ್ಮನಿಂದ ಈ ವಂಶಸ್ಥರು ಕಿಳಿಮಾನೂರಿನ 17 ಚದರ ಮೈಲು ಪ್ರದೇಶವನ್ನು ಉಂಬಳಿಯಾಗಿ ಪಡೆದಿದ್ದರು. 1862ರಲ್ಲಿ ಅಂದರೆ ತನ್ನ 14ನೆಯ ವಯಸ್ಸಿನಲ್ಲಿ ರಾಜಮನೆತನದ ಸ್ವಯಂವರವೊಂದರಲ್ಲಿ ಭಾಗವಹಿಸಲು ತಿರುವಾಂಕೂರಿಗೆ ಬಂದ ರವಿವರ್ಮ ಈ ಸ್ವಯಂವರದಲ್ಲಿ ತಿರಸ್ಕರಿಸಲ್ಪಟ್ಟಿದ್ದ. ಆದರೆ ಅದೇ ಸಂದರ್ಭದಲ್ಲಿ ಇವನಲ್ಲಿದ್ದ ಚಿತ್ರಕಲೆಯ ಪರಿಣತಿಯನ್ನು ಕಂಡ ಇವನ ಚಿಕ್ಕಪ್ಪ ರಾಜ ರಾಜವರ್ಮ ಅಂದಿನ ರಾಜ ಅಯಿಲ್ಯಮ್ ತಿರುನಾಳ್‌ಗೆ ಪರಿಚಯಿಸಿ, ಪ್ರೋತ್ಸಾಹಿಸುವಂತೆ ಕೋರಿದ. ಹೀಗೆ ಆರಂಭವಾಯಿತು ಇವನ ಚಿತ್ರಕಲೆಯ ಕ್ಷೇತ್ರದಲ್ಲಿನ ಪ್ರಯಾಣ. ಅಲ್ಲಿನ ಅರಮನೆಯಲ್ಲಿದ್ದ ವರ್ಣಚಿತ್ರ ಕೃತಿಗಳು, ತಾಳೆಗರಿ ಚಿತ್ರಗಳು, ಗಾಜಿನ ಚಿತ್ರಗಳು ಹಾಗೂ ತಂಜಾವೂರಿನ ಶೈಲಿಯ ಕೃತಿಗಳಷ್ಟೇ ಅಲ್ಲ, ಯೂರೋಪಿಯನ್ ಕಲಾವಿದರ ಹಲವು ತೈಲಚಿತ್ರಗಳನ್ನೂ ನೋಡಿ ಅಭ್ಯಾಸ ಮಾಡತೊಡಗಿದ. ಯೂರೋಪಿಯನ್ ಕಲಾವಿದರ ಕೆಲವು ಪುಸ್ತಕಗಳು ಅವನಿಗೆ ದೊರೆತವು. ಅವನಲ್ಲಿದ್ದ ಅದ್ಭುತ ಪ್ರತಿಭೆಯನ್ನು ಮನಗಂಡ ರಾಜ ತಿರುನಾಳ್ ಇವನನ್ನು ಪ್ರೋತ್ಸಾಹಿಸಲು ಇಟಲಿಯ ಕಲಾವಿದರ ಪ್ರತಿಕೃತಿಗಳ ಪರಿಚಯ ಮಾಡಿಸಿದ. ಹಾಗೆ ಅಲ್ಲಿ ಸುಮಾರು ಒಂಭತ್ತು ವರ್ಷ ಅಭ್ಯಾಸ ಮಾಡಿದ. ಆಗ ತಿರುವಾಂಕೂರಿನಲ್ಲಿ ತೈಲಚಿತ್ರಗಳ ಬಗ್ಗೆ ಚೆನ್ನಾಗಿ ತಿಳಿದಿದ್ದ ಕಲಾವಿದ ರಾಮಸ್ವಾಮಿ ನಾಯ್ಕರ್ ಇದ್ದರಾದರೂ, ಇವನಲ್ಲಿ ವೃತ್ತಿ ಎದುರಾಳಿಯನ್ನು ಅವರು ಗುರುತಿಸಿದರಲ್ಲದೆ, ಎಷ್ಟೆ ಕೇಳಿದರೂ ತೈಲಚಿತ್ರಗಳ ಮರ್ಮವನ್ನು ಬಿಟ್ಟುಕೊಡಲಿಲ್ಲ. 1868ರಲ್ಲಿ ಡಚ್ ಕಲಾವಿದ

ಥಿಯೊಡೊರ್ ಜೆನ್ಸನ್ ಚಿತ್ರ ರಚನೆಗಾಗಿ ರಾಜರ ಆಹ್ವಾನದ ಮೇಲೆ ತಿರುವಾಂಕೂರಿಗೆ ಬಂದಿದ್ದ. ಜೆನ್ಸನ್ ಕೂಡ ರವಿವರ್ಮನಿಗೆ ತೈಲಚಿತ್ರಗಳ ತಂತ್ರ ಹೇಳಿಕೊಡಲು ಒಪ್ಪಲಿಲ್ಲವಾದರೂ, ಅವನ ಕೃತಿ ರಚನೆಯನ್ನು ನೋಡಲು ಪರವಾನಗಿ ಕೊಟ್ಟ. ಪ್ರತಿಭಾಶಾಲಿಯಾಗಿದ್ದ ರವಿವರ್ಮನಿಗೆ ಅಷ್ಟೇ ಸಾಕಾಗಿತ್ತು. ಏಕಲವ್ಯನಂತೆ ಕೇವಲ ನೋಡಿಯೇ ತೈಲಚಿತ್ರಗಳ ತಂತ್ರಗಳನ್ನು ಕರತಲಾಮಲಕ ಮಾಡಿಕೊಂಡ.

ಆ ಸಮಯದಲ್ಲಿ ಮದ್ರಾಸಿನ ಗವರ್ನರ್ ಆಗಿದ್ದ. ಆಗಿನ ಡ್ಯೂಕ್ ಆಫ್ ಬಕಿಂಗ್ ಹ್ಯಾಂ ತಿರುವಾಂಕೂರು ಅರಮನೆಗೆ ಬರುವ ಕಾರ್ಯಕ್ರಮವಿತ್ತು. ಆಗ ರವಿವರ್ಮ ಅವನ ಭಾವಚಿತ್ರ ರಚಿಸಿದ. ಅದರ ಅನಾವರಣದ ಸಂದರ್ಭದಲ್ಲಿ ಹಲವಾರು ಯೂರೋಪಿಯನ್ ಕಲಾವಿದರೂ ಉಪಸ್ಥಿತರಿದ್ದರು. ಕಲಾಕೃತಿಯಲ್ಲಿನ ಅತ್ಯುತ್ಕೃಷ್ಟತೆಯನ್ನು ಕಂಡು ಅವರೆಲ್ಲ ಆಶ್ಚರ್ಯಚಕಿತರಾಗಿದಷ್ಟೇ ಅಲ್ಲ, ಸ್ವತಃ ಗವರ್ನರ್ ಹೀಗೆ ಹೇಳಿದ "ನನ್ನ ಭಾವಚಿತ್ರಕ್ಕಾಗಿ ನಾನು ಯೂರೋಪಿಯನ್ ಕಲಾವಿದನೊಬ್ಬನ ಬಳಿ ಹದಿನೆಂಟು ಸಿಟಿಂಗ್ ಕೊಟ್ಟಿದ್ದೆ. ಹಾಗಿದ್ದರೂ ಆ ಕಲಾವಿದ, ರವಿವರ್ಮ ಮಾಡಿದ್ದರಲ್ಲಿನ ಅರ್ಧದಷ್ಟನ್ನೂ ಸೆರೆಹಿಡಿಯಲಾಗಲಿಲ್ಲ." ಹೀಗೆ ರವಿವರ್ಮ ಬಹುಬೇಗ ತೈಲವರ್ಣದಲ್ಲಿ ಭಾವಚಿತ್ರ ರಚನೆಯ ಪರಿಣತಿಯನ್ನು ಕೈವಶ ಮಾಡಿಕೊಂಡಿದ್ದ. ಮುಂದೆ ಇವನು ರಚಿಸಿದ ಕೃತಿ ಶ್ರೇಣಿಯನ್ನು ಮುಖ್ಯವಾಗಿ ನಾಲ್ಕು ಪ್ರಕಾರಗಳಾಗಿ ವಿಂಗಡಿಸಬಹುದಾಗಿದೆ. ಮೊದಲನೆಯದು ಭಾವಚಿತ್ರಗಳು, ಎರಡನೆಯದು ಭಾವಚಿತ್ರಾಧಾರಿತ ಚಿತ್ರಗಳು, ಮೂರನೆಯದು ಪುರಾಣಾಧಾರಿತ ಚಿತ್ರಗಳು ಹಾಗೂ ಕೊನೆಯದು ಓಲಿಯೊಗ್ರಾಫ್ ಮುದ್ರಣಗಳು.

ಈ ಮೇಲಿನ ನಾಲ್ಕು ಪ್ರಕಾರಗಳಲ್ಲಿ ಇವನು ಅತ್ಯಂತ ಪ್ರಸಿದ್ಧಿ ಪಡೆದ ಪ್ರಕಾರವೆಂದರೆ ಪುರಾಣಾಧಾರಿತ ಚಿತ್ರಗಳು. ಈ ನಮ್ಮ ಪುರಾಣಾಧಾರಿತ ಚಿತ್ರಗಳಿಗೆ ಅವನಿಗೆ ಪ್ರೇರಣೆ ದೊ-ರೆತಿದ್ದು ಕೂಡ ಬ್ರಿಟಿಷರಿಂದಲೇ. ತಪತಿ ಗುಹಾ ತಕುರ್ತಾ ಅವರು ಗುರುತಿಸುವಂತೆ ಆಗ ಮದ್ರಾಸಿನ ಗವರ್ನರ್ ಆಗಿದ್ದ ಲಾರ್ಡ್ ನೇಪಿಯರ್ ತನ್ನ 1871ರಲ್ಲಿನ 'ಫೈನ್ ಆರ್ಟ್ಸ್ ಇನ್ ಇಂಡಿಯಾ 'ಕುರಿತ ಭಾಷಣದಲ್ಲಿ ಈ ಬಗೆಯ ಕಲಾವಿದರಿಗೆ ಕರೆ ನೀಡಿದ್ದ. "Napier called on Indian artists, trained in European techniques to utilise their 'modern' skills towards exploring the rich pictorial potentials the county offered, in her colours, costumes, village scenes, religious festivals and most of all, in her ancient mythology. A vast field for invoking "the ideal and the allegorical', he believed, lay open for the Indian artist in Vedic mythology and in the Ramayana and Mahabharata which contain the most inexhaustible... stories for pictorial representation which any country possesses... All that is needed to... complete their fame is that, in their nobler and purer passages and with the power of European art, they should engage the service of national pencil.."

ತನ್ನ ನೇಪಿಯರ್‌ನ ಈ ಭಾಷಣವು, ಮುಂದಿನ ದಿಕ್ಕಿನ ಬಗೆಗೆ ಅಸ್ಪಷ್ಟತೆಯಿಂದ ಕೂಡಿದ್ದ ರವಿವರ್ಮನಿಗೆ ದಾರಿದೀಪದಂತೆ ಕಂಡಿರಬಹುದು. ನೇಪಿಯರ್‌ನ ಈ ವಿಚಾರಗಳು ನಮಗೆ ಮೇಲ್ನೋಟಕ್ಕೆ ಪ್ರಗತಿಶೀಲವೆನಿಸಿದರೂ ಕೂಡ ಅವನಲ್ಲಿ ನಮ್ಮ ದೇಸಿ ಸಂಸ್ಕೃತಿಯ ನಾಶದ ಹುನ್ನಾರವಿತ್ತೆ? ನಮ್ಮ ನೆಲದ ದನಿಯ ಸದ್ದಡಗಿಸುವ ಕುಟಿಲತೆ ಇತ್ತೇ? ಎಂಬ

ಅನುಮಾನ ನಮ್ಮನ್ನು ನಿಜಕ್ಕೂ ಕಾಡುತ್ತದೆ. ಏಕೆಂದರೆ ಅವನು ಹೇಳಿದ ಈ ಹೊಸ ಹಾದಿ ಆವರೆಗೆ ನಮ್ಮಲ್ಲಿದ್ದುದ್ದನ್ನು ನಿರಾಕರಿಸುವಂತೆ ಹೇಳುತ್ತದೆ; ಬ್ರಿಟಿಷ್ ಚಿತ್ರಣದ ವಿಧಾನವನ್ನು ಅನುಸರಿಸುವಂತೆ ಮಾಡುತ್ತದೆ. (ಬ್ರಿಟಿಷರು 1860ರ ದಶಕದಲ್ಲಿ ಹಾಗೂ ಆ ನಂತರ ದೇಶದ ವಿವಿಧೆಡೆಗಳಲ್ಲಿ ನಾಲ್ಕು ಕಲಾಶಾಲೆಗಳನ್ನು ಸ್ಥಾಪಿಸಿದ್ದು, ಈ ಎಲ್ಲ ಕಡೆ ಬ್ರಿಟಿಷರ ವಿಕ್ಟೋರಿಯನ್ ಕಲಾ ಶಿಕ್ಷಣದ ಪಠ್ಯಕ್ರಮಗಳನ್ನೇ ಅಲ್ಲಿ ಹೇರಲಾಯಿತಲ್ಲದೆ, ದೇಸಿ ವಿಧಾನಗಳಿಗೆ ಮನ್ನಣೆಯೇ ಇರಲಿಲ್ಲ ಎಂಬುದನ್ನು ಇಲ್ಲಿ ನೆನೆಯಬಹುದು). ಅದೇನೇ ಇರಲಿ, ರವಿವರ್ಮ ಈ ದಾರಿ ಅನುಸರಿಸುವ ಮೂಲಕ ಒಂದೆ ಕಲ್ಲಿನಲ್ಲಿ ಎರಡು ಹಕ್ಕಿಗಳನ್ನು ಹೊಡೆದಿದ್ದ. ಒಂದೆಡೆ ಭಾರತೀಯ ಮಧ್ಯಮ ವರ್ಗ ಹಾಗೂ ಕುಲೀನ ಮನೆತನಗಳವರ ಬೂರ್ಷ್ವಾ ಮನಸ್ಥಿತಿಗೆ ಸ್ಪಂದಿಸಿದ್ದರೆ, ಇನ್ನೊಂದೆಡೆ ಬ್ರಿಟಿಷ್ ಆಡಳಿತಗಾರರ ಕೃಪೆಗೂ ಪಾತ್ರನಾದ.

ಹೀಗೆ ಕಲೆಯ ಈ ನಾಲ್ಕು ಮುಖ್ಯ ಪ್ರಕಾರಗಳ ಮೂಲಕ ಆರಂಭವಾದ ರವಿವರ್ಮನ ಚಿತ್ರಕಲೆಯ ಗಂಭೀರ ಪ್ರಯಾಣವು ಮುಂದೆ ಆ ಪ್ರಕಾರಗಳೊಳಗಿನ ವಿವಿಧ ಸಾಧ್ಯತೆಗಳನ್ನು ವಿಸ್ತರಿಸುವಂತೆ ಮಾಡಿತು. ವಿವಿಧ ಕಾರಣಗಳಿಂದಾಗಿ ಪ್ರಸಿದ್ಧನಾದ ಅವನ ಕೃತಿಗಳಿಗೆ ಎಲ್ಲೆಡೆ ಬೇಡಿಕೆ ಬರತೊಡಗಿತು. ದೇಶಾದ್ಯಂತ ಸುಮಾರು ಹತ್ತು ರಾಜರುಗಳಿಂದ ಆಹ್ವಾನಿಸಲ್ಪಟ್ಟು, ಅವರ ಕೋರಿಕೆಯಂತೆ ಚಿತ್ರ ರಚಿಸಿಕೊಟ್ಟು ದಂತಕಥೆಯಂತಾದ ಅವನು ದೇಶಾದ್ಯಂತ ಪ್ರವಾಸವನ್ನು ಮಾಡಿದ. ಈ ಎಲ್ಲ ಸಂದರ್ಭಗಳಲ್ಲಿ ಇವನ ಸುಮರು 12 ವರ್ಷ ಚಿಕ್ಕವನಾದ ತಮ್ಮ ರಾಜ ರಾಜವರ್ಮ ಕೂಡ ಅವನ ಜೊತೆಗಿದ್ದ. ರವಿವರ್ಮನಷ್ಟೆ ಪ್ರತಿಭಾಶಾಲಿಯಾದ ಕಲಾವಿದನಾಗಿದ್ದ ಈ ರಾಜವರ್ಮ ರಾಮನ ಜೊತೆಗಿದ್ದ ಲಕ್ಷ್ಮಣನಂತೆ ತನ್ನ ಸಹೋದರನಿಗಾಗಿಯೇ ಬಾಳನ್ನು ಮುಡಿಪಾಗಿಟ್ಟು ತಾನು ಹಿನ್ನೆಲೆಗೆ ಸರಿದಿದ್ದ. ವ್ಯವಹಾರದಲ್ಲಿ ಮಾತ್ರವಲ್ಲ, ರವಿವರ್ಮನ ಕೃತಿರಚನೆಯಲ್ಲಿಯೂ ಅವನೊಂದಿಗೆ ಕೈಜೋಡಿಸಿ ಸಹಕಾರ ನೀಡಿದವನು ಅವನು. ಕುತೂಹಲದ ಅಂಶವೆಂದರೆ ಅವನು ತಮ್ಮ ಪ್ರಯಾಣದ ವಿವರಗಳೂ ಸೇರಿದಂತೆ ವಿವರವಾದ ಡೈರಿ ಬರೆದಿದ್ದು, ಇಂದು ರವಿವರ್ಮನ ಬದುಕಿನ ಬಗ್ಗೆ ಬೆಳಕು ಚೆಲ್ಲುವಲ್ಲಿ ಅದೇ ಆಧಾರವಾಗಿದೆ. ಅಷ್ಟೇ ಅಲ್ಲ, ಭಾರತೀಯ ಕಲಾವಿದನೊಬ್ಬನ ಬಗೆಗಿನ ಪ್ರಪ್ರಥಮ ಡೈರಿಯೂ ಆಗಿದೆ. ಮುಂದೆ ಅವರ ಕೃತಿಗಳಿಗೆ ಭಾರಿ ಬೇಡಿಕೆ ಬಂದಾಗ ಅಷ್ಟೊಂದು ಕೃತಿಗಳನ್ನು ರಚಿಸುವುದು ಈ ಅಣ್ಣ ತಮ್ಮಂದಿರಿಬ್ಬರ ಕೈಯಿಂದಲೂ ಆಗಲಿಲ್ಲ. ಏಕೆಂದರೆ ತೈಲವರ್ಣ ಕೃತಿಗಳು ಹೊಸ ಬಗೆಯ ಸಂಪತ್ತನ್ನು ಸೃಷ್ಟಿಸಿದ್ದವು. ಬರ್ಜರ್ ಹೇಳುವಂತೆ "oil painting celebrated a new kind of wealth - which was dynamic and which found its only sanction in the supreme buging power of money. Thus painting itself had to be able to demonstrate the desirability of what money could buy. And the visual desirability of what can be bought lies in its tangibility, in how it will reward the touch, the hand, of the owner."

(ಜಾನ್ ಬರ್ಜರ್ – ಪುಟ 90 'ವೇಸ್ ಆಫ್ ಸೀಯಿಂಗ್') ಆಗ ಮೊದಲು ತಿರುವಾಂಕೂರಿನ ಹಾಗೂ ನಂತರ ಬರೋಡಾದ ದಿವಾನರಾಗಿದ್ದ ಸರ್ ಟಿ. ಮಾಧವರಾವ್ ಅವರು ಕೃತಿಗಳ ಓಲಿಯೊಗ್ರಾಫ್ ಮುದ್ರಣವನ್ನು ಯೂರೋಪಿನಿಂದ ಮಾಡಿಸಿ ತರುವಂತೆ ಸಲಹೆ ಮಾಡಿದರು. ಹಾಗಿದ್ದರೂ ಯೂರೋಪಿಗೆ ಕಳಿಸಿ ಮುದ್ರಣ ಮಾಡಿಸುವುದಕ್ಕೆ ಬದಲಾಗಿ ಪೂನಾದ ಲೋನಾವಲ ಬಳಿ 'ರವಿವರ್ಮ ಲಿಥೊ ಪ್ರೆಸ್' ಹೆಸರಿನಲ್ಲಿ ತಾವೇ ಸ್ವತಃ ಮುದ್ರಣ ಯಂತ್ರ ಸ್ಥಾಪಿಸಲು ಈ ಅಣ್ಣ ತಮ್ಮಂದಿರಿಬ್ಬರೂ ತೀರ್ಮಾನಿಸಿದರು. ಹಾಗೆ ಆರಂಭವಾದ ಪ್ರೆಸ್‌ನಲ್ಲಿನ ಗುಣಮಟ್ಟ ಸಾಲದೆನಿಸಿದರೂ ಜರ್ಮನ್ ತಂತ್ರಜ್ಞರನ್ನು ಕರೆಸಿ ಅವರ

ಮೇಲ್ವಿಚಾರಣೆಯಲ್ಲಿ ಕೃತಿಗಳನ್ನು ಮುದ್ರಿಸಿದರು. ಅಲ್ಲಿ ಮುದ್ರಿತವಾದ ಸಾವಿರಾರು ಪ್ರತಿಗಳು ನಮ್ಮ ದೇಶದೆಲ್ಲೆಡೆ ಮಾತ್ರವಲ್ಲ, ದಕ್ಷಿಣ ಏಷ್ಯಾ, ಆಫ್ರಿಕಾ ಮತ್ತಿತರ ಪ್ರದೇಶಗಳನ್ನು ತಲುಪಿತು. ಇವುಗಳ ಪ್ರಭಾವ ಎಷ್ಟರಮಟ್ಟಿಗೆ ಆಯಿತೆಂದರೆ, ನಮ್ಮ ಜನ ಇದನ್ನೇ ನಿಜ ಕಲೆಯ ಶೈಲಿಯಾಗಿ ಪರಿಗಣಿಸಿ, ಉಳಿದುವನ್ನು ತಿರಸ್ಕರಿಸುವಂತೆ ಮಾಡಿತು. ಹಾಗಿದ್ದರೂ ಇದು ಕಲಾ ಕೃತಿಯನ್ನು ಕಮಾಡಿಟಿಯಾಗಿಸುವುದಕ್ಕೆ ನಾಂದಿ ಹಾಡಿವರೆ, ಇನ್ನೊಂದೆಡೆ ಹರಿದು ಬರುವ ಹಣದ ಕಾರಣದಿಂದಾಗಿ, ಜೊತೆಗೆ ಆತುರದ ಕಾರಣವೂ ಸೇರಿದಂತೆ ಓಲಿಯೊಗ್ರಾಫ್‌ಗಳ ನಿರ್ಮಾಣ ಹಂತದಲ್ಲಿ ಸಹಾಯಕರನ್ನು ನೇಮಿಸಿಕೊಳ್ಳಬೇಕಾಯಿತು. ಎಷ್ಟೇ ಆದರೂ ಈ ಸಹಾಯಕರು ರವಿವರ್ಮ ಅಥವಾ ರಾಜವರ್ಮನಷ್ಟು ಕೌಶಲ್ಯ ಹೊಂದಿಲ್ಲದ ಕಾರಣದಿಂದಾಗಿ ಅವುಗಳ ಗುಣಮಟ್ಟದಲ್ಲಿ ವ್ಯತ್ಯಯವುಂಟಾಯಿತು. ಇನ್ನೊಂದೆಡೆ ರವಿವರ್ಮನ ಹೆಸರಿನಲ್ಲಿ ಖೋಟಾ ಮುದ್ರಣಗಳನ್ನು ಧನದಾಹಿಗಳು ಮಾರುಕಟ್ಟೆಗೆ ತಂದರು. ಹಾಗಾಗಿ ರವಿವರ್ಮನ ಪ್ರತಿಷ್ಠೆಗೆ ಇದು ಧಕ್ಕೆ ತಂದರೆ, ಕೊನೆಗೆ ಇದೇ ಪ್ರೆಸ್‌ನ ಕಾರಣದಿಂದಾಗಿ ವರ್ಮ ಸಹೋದರರು ನಷ್ಟ ಮಾಡಿಕೊಂಡು ಭಾರಿ ಬೆಲೆ ತೆರುವಂತಾದುದು ಇಲ್ಲಿನ ವಿಪರ್ಯಾಸ. ಇಲ್ಲಿ ಕುತೂಹಲದ ಒಂದು ಅಂಶವೆಂದರೆ ಮುಂದೆ ಚಲನಚಿತ್ರ ಕ್ಷೇತ್ರದಲ್ಲಿ ಬಹುದೊಡ್ಡ ದಂತಕತೆಯೆನಿಸಿದ ದಾದಾ ಸಾಹೇಬ್ ಫಾಲ್ಕೆಯವರೂ ಕೂಡ ತಮ್ಮ ಆರಂಭದ ದಿನಗಳಲ್ಲಿ ಈ ಪ್ರೆಸ್‌ನಲ್ಲಿ ನಕಲು ಮಾಡುವ ಕೆಲಸ ಮಾಡಿದ್ದರು ಎನ್ನುವುದು. ಅಷ್ಟೇ ಅಲ್ಲ, ಫಾಲ್ಕೆಯವರು ರವಿವರ್ಮನಿಂದ ಎಷ್ಟು ಪ್ರಭಾವಿತರಾಗಿದ್ದರೆಂದರೆ, ಅವರ ಮುಂದಿನ ಚಲನಚಿತ್ರಗಳ ದೃಶ್ಯಯೋಜನೆಯಲ್ಲಿ ರವಿವರ್ಮನ ಪ್ರಭಾವವನ್ನು ಅನೇಕರು ಗುರುತಿಸುತ್ತಾರೆ.

1913ರ ಮೇ 3ರಂದು ಮುಂಬಯಿಯ ಕೊರೊನೇಶನ್ ಸಿನಿಮಾ ಮಂದಿರದಲ್ಲಿ ಫಾಲ್ಕೆಯವರ 'ರಾಜಾ ಹರಿಶ್ಚಂದ್ರ' ಚಲನಚಿತ್ರ ಬಿಡುಗಡೆಯಾದಾಗ ಬಹುತೇಕ ನೋಡುಗರು ಅದನ್ನು ರವಿವರ್ಮನ ಕೃತಿಗಳೊಂದಿಗೆ ತಾಳೆಹಾಕಿ ನೋಡುವ ಕೆಲಸ ಮಾಡಿದರು. ಹೀಗೆ ಚಲನಚಿತ್ರ ಕ್ಷೇತ್ರದಲ್ಲಿಯೂ ಹೊಸದೊಂದು ಆಯಾಮ ಬರುವಲ್ಲಿಯೂ ಇವನ ಪಾತ್ರ ಮುಖ್ಯವೆನಿಸಿತು.

ರವಿವರ್ಮ ಚಿತ್ರಕಲೆಯ ಕ್ಷೇತ್ರವನ್ನು ಪ್ರವೇಶಿಸಿದುದಕ್ಕೂ ನಾವು ಅವನನ್ನು ಶ್ಲಾಘಿಸಲೇ ಬೇಕು. ಏಕೆಂದರೆ ಇದು ಅರವತ್ತನಾಲ್ಕು ಕಲೆಗಳಲ್ಲಿ ಒಂದಾಗಿದ್ದು ಕಲಾವಿದರನ್ನು ಕೂಡ ಕುಂಬಾರ, ಚಮ್ಮಾರ, ಅಕ್ಕಸಾಲಿಗರಂತೆ ಕ್ರಾಫ್ಟ್‌ಮನ್‌ಗಳೆಂದೇ ಪರಿಗಣಿಸಿದ್ದ ಕಾಲವದು. ಜೊತೆಗೆ ಸಾಮಾಜಿಕ ಶ್ರೇಣೀಕೃತ ವ್ಯವಸ್ಥೆಯಲ್ಲಿನ ಕುಲೀನ ಮನೆತನದವರು, ಉನ್ನತ ವರ್ಗದವರು ಕಲೆಯಲ್ಲಿ ತೊಡಗಿಸಿಕೊಳ್ಳಲು ಹಿಂದೆ ಮುಂದೆ ನೋಡುವಂತಹ ಪರಿಸರ ಆಗಿತ್ತು. ಹೀಗಾಗಿ ಕೇವಲ ಶೂದ್ರರು ಮಾತ್ರವೇ ಈ ವ್ಯವಸಾಯದಲ್ಲಿ ಕೆಲಸ ಮಾಡುತ್ತಾರೆ ಎನ್ನುವಂತಹ ಭಾವನೆ ಇತ್ತು ಎನ್ನುವುದನ್ನು ಸ್ಟೆಲ್ಲಾ ಕ್ರಾಮರಿಶ್ ಅವರು ಗುರುತಿಸುತ್ತಾರೆ. 1907ರಲ್ಲಿ ಬಂಗಾಳದ ಮಾಡರ್ನ್ ರಿವ್ಯೂಪತ್ರಿಕೆಯಲ್ಲಿ ಪ್ರಕಟವಾದ ಲೇಖನದಲ್ಲಿಯೂ ಕೂಡ ರವಿವರ್ಮನನ್ನು ಕುರಿತು ಉಲ್ಲೇಖಿಸುವಾಗ ತುಳಿತಕ್ಕೊಳಗಾದ ಕಲೆಯನ್ನು ಮೇಲಕ್ಕೆತ್ತಿದವನು ಎಂದು ಹೇಳಿದುದೂ ಅದನ್ನೆ ಸಮರ್ಥಿಸುತ್ತದೆ. ಹಲವಾರು ಬ್ರಿಟಿಷ್ ಕಲಾವಿದರು ಇಲ್ಲಿಗೆ ಬಂದು ದೇಶಾದ್ಯಂತ ಪ್ರವಾಸ ಮಾಡಿ ಕೃತಿಗಳನ್ನು ರಚಿಸುತ್ತಿದ್ದರೂ ನಮ್ಮ ಸಮಾಜದಲ್ಲಿ ಕಲಾವಿದರ ಬಗೆಗೆ ಹೇಳಿಕೊಳ್ಳುವಂತಹ ಉತ್ತಮ ಭಾವನೆಯಿರಲಿಲ್ಲ. ರವಿವರ್ಮ ಇಂತಹ ಕಾಲದಲ್ಲಿ ಎದೆಗುಂದದೇ ಈ ಕ್ಷೇತ್ರ ಪ್ರವೇಶಿಸಿದುದಷ್ಟೇ ಅಲ್ಲ, ಜೀವಮಾನವಿಡೀ ಸ್ವಂತ ಪರಿಶ್ರಮದಿಂದ ಸ್ವತಃ ತಾನು ಬೆಳೆದುದೆ ಅಲ್ಲ, ಚಿತ್ರಕಲೆಗೂ, ಕಲಾವಿದರಿಗೂ ಗೌರವ ಬರುವಂತೆ ಮಾಡಿದ; ಪ್ರತಿಷ್ಠೆ ತಂದುಕೊಟ್ಟ. ಹಾಗಿದ್ದರೂ ಚಿಕಾಗೊ ಪ್ರದರ್ಶನಕ್ಕೆ ಕಳಿಸಿದ. ಕೃತಿಗಳೂ ಸೇರಿವಂತೆ

ಆರಂಭದ ಕೆಲವು ಕೃತಿಗಳನ್ನು ಹೊರತುಪಡಿಸಿದರೆ, ಬಹುತೇಕ ಅವನ ಜೀವನದ ನೂರಾರು ಕೃತಿಗಳು ನಿಯೋಜನೆಯ ಮೇರೆಗೆ ಅಂದರೆ ಬೇರೆಯವರು ನೀಡಿದ ಹಣಕ್ಕಾಗಿ ರಚಿತವಾದವು. ಬದಲಿಗೆ ಅಂದಿನ ಸಾಮಾಜಿಕ, ರಾಜಕೀಯ ಸನ್ನಿವೇಶಗಳಿಗೆ ಪ್ರತಿಕ್ರಿಯೆ ನೀಡುವ ಕೆಲಸವನ್ನು ಮಾಡಲಿಲ್ಲ. ಕಲೆಯನ್ನು ಅದಕ್ಕೆ ಬಳಸಿಕೊಳ್ಳಲಿಲ್ಲ.

1906ರಲ್ಲಿ ಮೈಸೂರಿನಲ್ಲಿ ಖೆಡ್ಡಾ ಚಿತ್ರ ಹಾಗೂ ವೀಣೆ ನುಡಿಸುತ್ತಿರುವ ಕಾದಂಬರಿ' ಚಿತ್ರ ರಚನೆಯ ನಂತರ ರವಿವರ್ಮ ತನ್ನ ಊರಿಗೆ ಮರಳಿದ್ದ. ಮುಂದೆ ಆರೋಗ್ಯ ಕೈ-ಕೊಟ್ಟು 1906ರ ಅಕ್ಟೋಬರ್ 2ರಂದು ಅವನು ತೀರಿಕೊಂಡಾಗ ಕಿಳಿಮಾನೂರಿನಂತಹ ಚಿಕ್ಕ ಸ್ಥಳವು ದೇಶದೆಲ್ಲೆಡೆಯಿಂದ ಬಂದ ಜನರಿಂದ ತುಂಬಿ ತುಳುಕುತ್ತಿತ್ತು. ಅಷ್ಟೇಕೆ ರವಿವರ್ಮ ಕೊನೆಯುಸಿರೆಳೆದಾಗ ದೇಶಾದ್ಯಂತಹ ಪ್ರಮುಖ ಪತ್ರಿಕೆಗಳ ಪ್ರತಿನಿಧಿಗಳು ಮಾತ್ರವೇ ಅಲ್ಲ ರೈಯಿಟರ್ಸ್‌ನ ಪ್ರತಿನಿಧಿಯೂ ಅಲ್ಲಿ ಹಾಜರಿದ್ದರೆಂದರೆ ಅವನ ಪ್ರಸಿದ್ಧಿಯನ್ನು ಊಹಿಸಬಹುದಾಗಿದೆ. ಅಷ್ಟೇ ಅಲ್ಲ, ರವಿವರ್ಮ ಬದುಕಿದ್ದಾಗ ಅವನಿಗೆ ಬರುತ್ತಿದ್ದ ರಾಶಿ ರಾಶಿ ಪತ್ರಗಳ ಕಾರಣದಿಂದಾಗಿ ಕಿಳಿಮಾನೂರಿನಂತಹ ಸಣ್ಣ, ನಗಣ್ಯ ಊರಿನಲ್ಲಿಯೂ ವಿಶೇಷವಾಗಿ ಅಂಚೆ ಕಚೇರಿಯನ್ನು ತೆರೆಯಲಾಗಿತ್ತು.

ರವಿವರ್ಮ ಬದುಕಿದ್ದಾಗ ಅವನ ವ್ಯಕ್ತಿತ್ವ, ಕೃತಿಗಳ ಕುರಿತು ಎಲ್ಲೆಡೆ ಹೊಗಳಿಕೆಯ ಸುರಿಮಳೆಯೇ ಸುರಿಯಿತು. ಆದರೆ ಅವನ ದುರದೃಷ್ಟವೋ ಎಂಬಂತೆ ಅವನು ತೀರಿಕೊಂಡ ತಕ್ಷಣದಲ್ಲಿಯೇ ಪರಿಸ್ಥಿತಿ ಬದಲಾಯಿತು. ಸಾಮಾನ್ಯ ಜನರೆಲ್ಲ ಅಂದು ಮಾತ್ರವೆ ಅಲ್ಲ, ಇಂದಿಗೂ ಅವನನ್ನು ಅತ್ಯಂತ ಪ್ರತಿಭಾಶಾಲಿ ಕಲಾವಿದನೆಂಬಂತೆ ನೋಡಿದರೆ, ಅವನು ತೀರಿಕೊಂಡ ತಕ್ಷಣದಲ್ಲಿಯೇ ಕಲೆಯ ಕ್ಷೇತ್ರದ ಮುಂಚೂಣಿಯಲ್ಲಿದ್ದ ಹಲವು ಕಲಾಪರಿಣಿತರು ಅವನ ಕೃತಿಗಳನ್ನು ಕುರಿತು ಅಪಸ್ವರ ಎತ್ತಿದ್ದು, ಅದು ಇಂದಿಗೂ ಆಗಾಗ ಅನುರಣನಗೊಳ್ಳುತ್ತಿದೆ. ಇವನ ಬಗ್ಗೆ ತುಂಬ ಪ್ರೀತ್ಯಾದರಗಳನ್ನು ಹೊಂದಿದ್ದ ಬಂಗಾಳದ ರಮಾನಂದ ಚಟರ್ಜಿಯವರು ಆಗ 'ಪ್ರವಾಸಿ' ಮತ್ತು 'ಮಾಡರ್ನ್ ರಿವ್ಯೂ' ಪತ್ರಿಕೆಗಳ ಸಂಪಾದಕರಾಗಿದ್ದು ಇವುಗಳಲ್ಲಿ ರವಿವರ್ಮನ ಹಲವು ಕೃತಿಗಳನ್ನು ಮುದ್ರಿಸಿ ಜನಪ್ರಿಯವಾಗಿಸಿದ್ದಷ್ಟೇ ಅಲ್ಲ. 1907ರ ಜನವರಿಯಲ್ಲಿ ಸ್ವತಃ ಪ್ರಮುಖ ಲೇಖನವೊಂದನ್ನು ಬರೆದರು. ಅದೇ ಪತ್ರಿಕೆಯ ಫೆಬ್ರವರಿ ಸಂಚಿಕೆಯಲ್ಲಿ ಭಗಿನಿ ನಿವೇದಿತಾ ಅವರು "The Function of Art in shaping Nationality" ಎಂಬ ಶೀರ್ಷಿಕೆಯಲ್ಲಿ ಲೇಖನವೊಂದನ್ನು ಬರೆದು ಅದರಲ್ಲಿ ರವಿವರ್ಮನ ಕೃತಿಗಳ ಬಗ್ಗೆ ತೆಗಳಿದ್ದರು. "... Not every scene is fit for a picutre. And this truth needs emphasising in modern India especially, because here an erroneous conception of fashion has gone far to play have with the taste of people. In a country in whcih that posture is held to be ill-bred (I ought to state here, that I do not know of any country in which a young lady may stretch herself on the floor in the public.) every home contains a picture of a fat young woman lying full length on the floor and writing a letter on lotus leaf! As if a sight that would outrage decorum in actuality, could be beautiful in imagination! In a country in which romantic emotion is never allowed to show itself in public, pictures of the wooing of arjuna and subhadra abound." ಅದೇ ಲೇಖನದಲ್ಲಿ ಮುಂದೆ "pictures of the nude and semi-nude are always best avoided in India, since it is

almost impossible here at present, to attain the education necessary for their true discrimination, and mistakes in taste an a such a subject are dangerous to moral dignity." ನಿವೇದಿತಾ ಅವರು ಶಕುಂತಲೆಯ ಪತ್ರಲೇಖನದಲ್ಲಿ ಶಕುಂತಲೆಯು ನೆಲದ ಮೇಲೆ ಸಾರ್ವಜನಿಕ ಸ್ಥಳದಲ್ಲಿ ಮಲಗಿ, ತಾವರೆಯ ಎಲೆಯ ಮೇಲೆ ಪತ್ರ ಬರೆಯುವುದು ಸರಿಯೇ ಎಂಬ ಪ್ರಶ್ನೆ ಎತ್ತುತ್ತಾರಲ್ಲದೆ, ಅರ್ಜುನ ಮತ್ತು ಸುಭದ್ರೆಯರ ಪ್ರಣಯ ಸಲ್ಲಾಪದ ಚಿತ್ರದ ಬಗ್ಗೆಯೂ ಅಕ್ಷೇಪಣೆ ವ್ಯಕ್ತಪಡಿಸುತ್ತಾರೆ. ನಮ್ಮ ದೇಶ ಆ ಬಗೆಯ ಚಿತ್ರಗಳ ಬಗ್ಗೆ ಪಕ್ವಗೊಂಡಿಲ್ಲದಿರುವ ಬಗ್ಗೆಯೂ ಪ್ರಸ್ತಾಪಿಸುತ್ತಾರೆ. ಆದರೆ ಅವರು ಅರೆನಗ್ನ ಮಹಿಳೆಯರ ಚಿತ್ರಣದ ಬಗ್ಗೆ ಪ್ರಸ್ತಾಪಿಸದಿರುವುದು ಆಶ್ಚರ್ಯವೇ ಸರಿ. ಹಾಗಿದ್ದರೂ ಕಲೆಯಿಂದ ಹೊರತಾದ ನಿವೇದಿತಾ ಅವರು ಆಕ್ಷೇಪಣೆಗಳನ್ನು ಸಾಮಾಜಿಕವಾಗಿಯೂ ಒಪ್ಪಿಕೊಳ್ಳಲಾಗದು.

ಆ ಕಾಲದ ಮಹಾನ್ ಕಲಾ ಚಿಂತಕರಲ್ಲಿ ಒಬ್ಬರಾದ ಆನಂದ ಕುಮಾರಸ್ವಾಮಿಯವರಂತೂ ರವಿವರ್ಮನನ್ನು ಯುದ್ಧೋತ್ಸಾಹದಿಂದ ಟೀಕಿಸಿದರು. ಮಾಡರ್ನ್ ರಿವ್ಯೂ ಪತ್ರಿಕೆಯ ಆಗಸ್ಟ್ 1907ರ ಸಂಚಿಕೆಯ ಲೇಖನದಲ್ಲಿ ಅವರ ಮಾತುಗಳು ಹೀಗಿವೆ. "... So the untrained public, finding a painter who broke through these conventions and produced realistic pictures of familiar subjects, welcomed him with open arms. It had, indeed been his reward for choosing Indain subjects, that he has thus become a true nationalising influence to a certain dgree; but had he been also a true artist with the gift of great imagination. This influence must have been tenfold greater and deeper. He is the landmark of a great opportunity, not wholly missed, but ill availed of. Theatrical conceptions, want of imagination and lack of Indian feeling in the treatment of sacred and epic Indian subjects are Ravivarma's faults. No offence can be greater than the treatment of serious or epic subjects without dignity; and Ravi Varma's gods and herors are men cast in a common mould, who find themselves in situations for which they have not a proper capacity. Unforgivable too, is the lack of a spontaneous expression of individual or national idiosyncaracy; for his pictures are such as any European student could paint after perusal of the necessary literature and superficial study of Indian life..." ಈ ಬಗೆಯ ಟೀಕೆಗಳು ಅಷ್ಟಕ್ಕೇ ನಿಲ್ಲಲಿಲ್ಲ. ಆಗ ಕಲ್ಕತ್ತಾ ಕಾಲೇಜ್ ಆಫ್ ಆರ್ಟ್‌ನ ಪ್ರಿನ್ಸಿಪಾಲರಾಗಿದ್ದ ಇ.ಬಿ. ಹ್ಯಾವೆಲ್ ಅವರು ಕೂಡ ಇದರೊಂದಿಗೆ ದನಿಗೂಡಿಸಿದರು. ಅಷ್ಟೇಕೆ ನಮ್ಮ ಅನಕೃ ಅವರೂ 1932ರಲ್ಲಿ 'ಭಾರತೀಯ ಚಿತ್ರಕಲೆಯಲ್ಲಿ ರಾಜಾ ರವಿವರ್ಮನ ಸ್ಥಾನ' ಎಂಬ ಲೇಖನದಲ್ಲಿ ರವಿವರ್ಮನನ್ನು ಚೆನ್ನಾಗಿ ತರಾಟೆಗೆ ತೆಗೆದುಕೊಂಡಿದ್ದಾರೆ. ಹೀಗೆ ಏಕಕಾಲದಲ್ಲಿ ಹೊಗಳಿಕೆಗೆ ಮತ್ತು ತೆಗಳಿಕೆಗಳಿಗೆ ತುತ್ತಾದ ಅಪರೂಪದ ಕಲಾವಿದನಿವನು.

ಬ್ರಿಟಿಷ್ ವಿರೋಧಿ ಹೋರಾಟ ಅಷ್ಟಾಗಿ ಪ್ರಖರತೆ ಹೊಂದಿಲ್ಲದಿರದಿದ್ದರೂ ರವಿವರ್ಮ ಬ್ರಿಟಿಷರ ಕೆಂಗಣ್ಣಿಗೆ ತುತ್ತಾಗುವಂತಹ ಯಾವುದೇ ಕೆಲಸ ಮಾಡಲಿಲ್ಲ (ಅದಕ್ಕೇ ತಾನೇ ಬ್ರಿಟಿಷರು ಅವರ ಅತ್ಯುಚ್ಚ ಪ್ರಶಸ್ತಿ ಕೈಸರ್ ಒಂದ್ ನೀಡಿದ್ದು). ಚಿತ್ರಗಳ ಮೂಲಕ ರಾಷ್ಟ್ರೀಯ ಭಾವನೆ ನಿರ್ಮಿಸಿದ ಎನ್ನಬಹುದಾದರೂ ಅದು ಎಲ್ಲಿಯೂ ಬ್ರಿಟಿಷರ ವಿರುದ್ಧದ ಭಾವನೆ

ನಿರ್ಮಿಸುವುದಿಲ್ಲ. ಹೀಗೆ ಅವರನ್ನು ಓಲೈಸುವ ಪ್ರಭುತ್ವವಾದಿ ಆಶಯ ಹೊಂದಿದ್ದ ಅವನು ಹಾಗೆ ಮಾಡುವಾಗ ಭಾರತೀಯ ದೃಶ್ಯ ಸಂಸ್ಕೃತಿಯಲ್ಲಿ ಹೊಸ ಚೈತನ್ಯವನ್ನೇ ತಂದಿದ್ದ. ಆದರೆ ಅವನ ಈ ಕ್ರಿಯೆಗಳಿಂದಾಗಿ ಮೊದಲೇ ಬಡವಾಗಿದ್ದ, ಕುಂಟುತ್ತ ಸಾಗಿದ್ದ ಅಂದಿನ ನಮ್ಮ ಸಾಂಪ್ರದಾಯಿಕ ಕಲೆಗಳೆಲ್ಲ ಮೂಲೆ ಗುಂಪಾದವು. ಹೀಗೆ ತನಗೆ ತಿಳಿದೋ, ತಿಳಿಯದೆಯೋ ಭಾರತೀಯ ಚಿತ್ರಕಲೆಗೆ ಇವನು ಭಾರಿ ಹೊಡೆತ ನೀಡಿದ್ದ. ಈ ನಡುವೆ ಕುತೂಹಲದ ಇನ್ನೊಂದು ಅಂಶವೆಂದರೆ ಕಳೆದ ಶತಮಾನದಿಂದಲೂ ನಮ್ಮ ದೇಶದ ಪುರಾತನ ಸಂಸ್ಕೃತಿಯ ರಕ್ಷಕರೆಂದು ಭಾವಿಸುವ, ಬಲಪಂಥೀಯ ಸಂಘಟನೆಗಳವರೆಲ್ಲ ರವಿವರ್ಮನನ್ನು ಆರಾಧನೆಯ ಭಾವದಿಂದ ನೋಡುತ್ತಿರುವುದು. ಚಂದದ ದೇವ–ದೇವತೆಯರನ್ನು ಕಂಡು ಮರುಳಾದ ಇವರಿಗೆ ಇವನ ಈ ರೂಪಗಳು ಬ್ರಿಟಿಷರಿಂದ, ಪಾಶ್ಚಾತ್ಯರಿಂದ ಕಡ ತಂದವು ಎಂದು ಗೋಚರಿಸುವುದೇ ಇಲ್ಲ. ಇವು ನವ–ರಾಷ್ಟ್ರವಾದಿ ಸಂಕೇತವೆಂಬ ಭ್ರಮೆಯಲ್ಲಿರುವ ಇವರಿಗೆ ರವಿವರ್ಮ ಭಾರತೀಯ ಸಾಂಪ್ರದಾಯಿಕ ಕಲೆಗೆ ನೀಡಿದ ಕೊಡಲಿ ಪೆಟ್ಟು ಗಮನಕ್ಕೆ ಬರುವುದೇ ಇಲ್ಲ; ಈ ಮ್ಯಾಜಿಕಲ್ ರಿಯಲಿಸಂ ಚಿತ್ರ ರೂಪಗಳು ಭಾರತೀಯ ಸಂಸ್ಕೃತಿಯಲ್ಲಿ ಹಿಂದೆ ಇರಲಿಲ್ಲ ಎಂಬ ಅಂಶ ಗೊತ್ತಿರದ ಜನ ರವಿವರ್ಮನ ರೂಪಗಳನ್ನೇ ಭಾರತೀಯ ರೂಪ ಎಂದು ಸ್ವೀಕರಿಸುತ್ತಿದ್ದಾರೆ, ಆರಾಧಿಸುತ್ತಿದ್ದಾರೆ.

ಅಷ್ಟೇಕೆ ರವಿವರ್ಮನ ಕೃತಿಗಳ ಶ್ರೇಣಿಯನ್ನು ಇನ್ನೊಂದು ಮಗ್ಗುಲಿನಿಂದ ನೋಡಿದರೆ, ಒಂದೆರಡು ಕೃತಿಗಳು ಹೊರತುಪಡಿಸಿದರೆ ಉಳಿದುವೆಲ್ಲ ಬೂರ್ಷ್ವಾ ಮನಸ್ಥಿತಿಗೆ, ಹೆಡೊನಿಸ್ಟಿಕ್ ಆಶಯಗಳಿಗೆ ಪೂರಕವಾದುವು ಎಂಬುದು ಯಾರಿಗಾದರೂ ಅರ್ಥವಾದೀತು. ಅವನು ರಚಿಸಿದ ಬಹುತೇಕ ಅರೆನಗ್ನ ಹೆಂಗಳೆಯರ ಚಿತ್ರಗಳು ಕಾಮುಕ ಕಣ್ಣುಗಳನ್ನು ತಣಿಸುವ ಆಶಯ ಹೊಂದಿದ್ದವು. (ಹುಸೇನರ ನಗ್ನಚಿತ್ರಗಳನ್ನು ಅಪಾಯಕಾರಿ ಎಂದು ಯಾರಾದರೂ ಭಾವಿಸಿದ್ದರೆ, ರವಿವರ್ಮನದು ಅದಕ್ಕಿಂತಲೂ ಅಪಾಯಕಾರಿ ಎಂದೇ ಅವರು ಹೇಳಬೇಕಾಗುತ್ತದೆ. ಏಕೆಂದರೆ ಹುಸೇನರು ತಮ್ಮ ವಿಶಿಷ್ಟ ಶೈಲಿಯ ಮೂಲಕ ಅಲ್ಲಿನ ರೂಪಗಳನ್ನು ವಿಕೃತಗೊಳಿಸಿ ಅವುಗಳನ್ನು ಕಲೆಯಾಗಿಸುತ್ತಾರೆ. ವಾಸ್ತವದಿಂದ ಬೇರೆಯದೇ ರೀತಿಯಲ್ಲಿ ವಿರೂಪಗೊಂಡಿರುವ ಅವು ದ್ವಿಮಾನದಲ್ಲಿದ್ದು, ಕಾಮದ, ಅಶ್ಲೀಲದ ಸೋಂಕಿನಿಂದ ದೂರವಿರುವ ಕಲಾಕೃತಿಗಳಾಗಿವೆ. ಆದರೆ ಫೋಟೋ ತೆಗೆದಂತೆ ನಿಜ ರೂಪದರ್ಶಿಗಳನ್ನು ಇಟ್ಟುಕೊಂಡು ತೆಳುಪರದೆಯೊಂದಿಗೆ ಯಥಾವತ್ತಾಗಿ ಚಿತ್ರಿಸಿದ ರವಿವರ್ಮನ ಕೃತಿಗಳಲ್ಲಿ ಬೇಕೆಂದರೆ ಕಾಮದ ವಾಸನೆ ಕಾಣಬಹುದಾಗಿದೆ. ಅವು ಕಲೆ ಹೆಸರಿನಲ್ಲಿರುವ Soft-porn ಚಿತ್ರಗಳು. ಅವನ್ನು ಕಲೆಯಾಗಿ ಮಾರ್ಪಡಿಸಿದ ರೂಪಗಳೆಂದು ಹೇಳುವುದು ಕಷ್ಟ. ಇದಕ್ಕೆ ಪೂರಕವಾಗಿ ಇತ್ತೀಚೆಗೆ ರಂಗ್ ರಸಿಯಾ ಚಿತ್ರದ ನಿರ್ದೇಶಕ ಕೇತನ್ ಮೆಹ್ತಾ ಅವರ ಮಾತುಗಳನ್ನು ಸೇರಿಸಬಹುದು. ರವಿವರ್ಮನ ಕುರಿತಂತೆ ಈಚೆಗೆ ಈ ಚಿತ್ರ ನೋಡಿದ ಅನೇಕರು ಅದರಲ್ಲಿನ ನಂದನಾ ಸೇನ್ ಅವರ ಅರೆನಗ್ನ ದೃಶ್ಯಗಳ ಕುರಿತು ಪ್ರಶ್ನಿಸಿದಾಗ ಮೆಹ್ತಾ ಹೇಳಿದ್ದು ಹೀಗೆ "ರಾಜಾ ರವಿವರ್ಮ ರಾಮಾಯಣ ಮತ್ತು ಮಹಾಭಾರತ ಕಾಲಗಳ ಊರ್ವಶಿ, ರಂಭೆ ಮತ್ತಿತರ ಅಪ್ಸರೆಯರ ಅರೆನಗ್ನ ಚಿತ್ರಗಳನ್ನು ಬರೆದಿದ್ದಾನೆ. ರಂಗ್ ರಸಿಯಾದಲ್ಲಿ, ರಾಜಾ ರವಿವರ್ಮ ನಿಜ ಜೀವನದಲ್ಲಿ ಮಾಡಿದುದನ್ನೇ ನಾನು ನಿಖರವಾಗಿ ತೋರಿಸಿದ್ದೇನೆ. ನಾನು ಯಾವುದೇ ವಾಸ್ತವಾಂಶಗಳ ವಿರೂಪಗೊಳಿಸಿಲ್ಲ." ಅಷ್ಟೇ ಅಲ್ಲ, ಅದೇ ಚಿತ್ರದಲ್ಲಿ ತೆರೆದೆದೆಯ ಬಿಸಿ ಬಿಸಿ ದೃಶ್ಯಗಳನ್ನು ಮಾಡಿದ ನಂದನಾ ಸೇನ್‌ಳನ್ನು ಮುಂದೆ ದೇವತೆ ಲಕ್ಷ್ಮಿಯಾಗಿಯೂ ಬಿಂಬಿಸಲಾಗಿದೆಯಂತೆ. ಅದೇನೆ ಇರಲಿ, ಈ ಚಿತ್ರ ನಿರ್ಮಾಣವಾಗಿ ನಾಲ್ಕಾರು ವರ್ಷ ಕಳೆದರೂ, ಇನ್ನೂ ಸಾರ್ವಜನಿಕವಾಗಿ ಬಿಡುಗಡೆಯಾಗಿಲ್ಲ. ಬಿಡುಗಡೆಯಾಗಿ ನೋಡಿದ ನಂತರ ಆ ಕುರಿತು ಚರ್ಚಿಸಬಹುದಾಗಿದೆ.

ಹೀಗೆ ಒಟ್ಟಾರೆಯಾಗಿ ಹೆಣ್ಣನ್ನು ಗೌರವದ ದೃಷ್ಟಿಯಿಂದ ನೋಡುವಂತೆ ಮಾಡುವುದಕ್ಕೆ ಬದಲಾಗಿ, ಅಂದು ಪ್ರಚಲಿತವಿದ್ದ ಭೋಗ ಲಾಲಸೆಯ ಸಂಕೇತವಾಗಿಯೇ ರವಿವರ್ಮ ಪರಿಗಣಿಸಿದ್ದ. ಅವನ ರೂಪದರ್ಶಿಗಳ ಬಗ್ಗೆಯೂ ಜಿಜ್ಞಾಸೆಯಿದೆ. ಅದು ಭಾರತೀಯವಲ್ಲದ ಸಂಪ್ರದಾಯವೆಂದು ಒಂದೆಡೆ ಹೇಳಿದರೆ, ಇನ್ನೊಂದೆಡೆ ಅವರ ಹಿನ್ನೆಲೆಯನ್ನು ಕುರಿತದ್ದು. ಏಕೆಂದರೆ ಆ ಕಾಲದಿಂದ ಇಂದಿನವರೆಗೂ ನಮ್ಮ ಮನೆಗಳ ದೇವರ ಕೋಣೆಯಲ್ಲಿ ಇಟ್ಟುಕೊಂಡು ಪೂಜಿಸುತ್ತಿರುವ ರವಿವರ್ಮನ ಓಲಿಯೊಗ್ರಾಫ್ ಮುದ್ರಣಗಳು, ಚಿತ್ರಗಳಿಗೆ ರೂಪದರ್ಶಿಯಾಗಿದ್ದವರು ಸಾಮಾಜಿಕವಾಗಿ ಒಳ್ಳೆಯ ಹೆಸರುಳ್ಳವರಾಗಿರಲಿಲ್ಲ. ಒಳ್ಳೆಯ ರೂಪದರ್ಶಿಗಳ ಕೊರತೆಯಿಂದಾಗಿ ಅಂದಿನ ವೇಶ್ಯೆಯರು, ನೃತ್ಯಗಾರ್ತಿಯರು, ನಟಿಯರು ಮುಂತಾದವರನ್ನೇ ಅವಲಂಬಿಸುವುದು ಅವನಿಗೆ ಅನಿವಾರ್ಯವಾಗಿತ್ತು. ಹೀಗೆ ಅವನ ಮೋಹಿನಿ, ಲಕ್ಷ್ಮಿ, ಸರಸ್ವತಿ ಮತ್ತು ಗಂಗಾ ಮುಂತಾದ ಪ್ರಸಿದ್ಧ ಕೃತಿಗಳಿಗೆ ರೂಪದರ್ಶಿಯಾಗಿದ್ದವಳು ಮುಂಬಯಿಯ ದೇವದಾಸಿ ನೃತ್ಯ ಮತ್ತು ಸಂಗೀತಗಾರ್ತಿ ಅಂಜನಾ ಮಾಲೇಪೆಕರ್ ಎಂಬುದಾಗಿ ಇತ್ತೀಚೆಗೆ ಡಾಕ್ಯುಮೆಂಟರಿ ನಿರ್ದೇಶಕ ವಿನೋದ್ ಮಂಕರಾ ಅವರು ಕಂಡುಹಿಡಿದಿದ್ದಾರೆ. ಇನ್ನು ಕೆಲವು ಕೃತಿಗಳಿಗೆ ಸುಗನ್ ಬಾಯಿ/ಸುಗಂಧಾ ಮತ್ತಿತರ ಹೆಸರುಗಳು ಕೇಳಿಬರುತ್ತಿವೆ. ಈ ಎಲ್ಲವೂ ಒಬ್ಬಳೇ ಅಥವಾ ಬೇರೆ ಬೇರೆಯವರೇ ಎಂಬ ಬಗ್ಗೆ ಇನ್ನೂ ತಿಳಿಯಬೇಕಿದೆ. ಅಂಜನಾ ಮಾಲೇಪೆಕರ್ ಅಪೂರ್ವ ಚೆಲುವೆಯಾಗಿದ್ದು ರವಿವರ್ಮನ ಕೃತಿಗಳಿಗೆ ಹೇಳಿ ಮಾಡಿಸಿದಂತಿದ್ದವಳು. ಈ ರೂಪದರ್ಶಿಗಳ ಹಿನ್ನೆಲೆಯ ಬಗ್ಗೆ ಸಾಮಾನ್ಯರಿಗೆ ತಿಳಿದಾಗ ಅವರಲ್ಲಿ ಒಂದು ಬಗೆಯ ದ್ವಂದ್ವ ಕಾಡದಿರದು. ಅವರ ಹಿನ್ನೆಲೆ ಮರೆತು ಕಲೆಯಾಗಿ ಆ ಚಿತ್ರಗಳನ್ನು ನೋಡಿದಾಗ ಗೌರವದ ಭಾವನೆ ಮೂಡಬಹುದಾದರೂ, ಅವರ ಹಿನ್ನೆಲೆ ತಿಳಿದಾಗ ನಾವು ವೇಶ್ಯೆಯರನ್ನು, ದೇವದಾಸಿಯರನ್ನು, ಪೂಜಿಸುತ್ತಿದ್ದೇವಲ್ಲವೇ ಎಂಬ ಗೊಂದಲ ನಿರ್ಮಾಣವಾಗುವುದು ನಿಶ್ಚಿತ. ಆ ಅಂಶವೇನಾದರೂ ನಮ್ಮ ಮಧ್ಯಮ ವರ್ಗದ ಬಹುಜನರಿಗೆ ತಿಳಿದಿದ್ದರೆ ಅವರು ಆ ಸುಂದರ ಕಟ್ಟುಹಾಕಿಸಿದ ಚಿತ್ರಗಳನ್ನು ದೇವರ ಕೋಣೆಯಿಂದ ತೆಗೆಯುತ್ತಿದ್ದುದಂತೂ ಖಂಡಿತ. ಹೀಗೆ ರವಿವರ್ಮನ ಕೃತಿಗಳು ಒಳಿತು ಕೆಡುಕಿನ ನಡುವಿನ ಸಂಘರ್ಷವನ್ನು ಎತ್ತುತ್ತವೆ.

ರವಿವರ್ಮ ಈ ಕೆಲವು ರೂಪದರ್ಶಿಯರೊಂದಿಗೆ, ಅದರಲ್ಲಿಯೂ ಅಂಜನಾ/ಅಂಜಲಿ/ಸುಗಂಧಾ ಬಾಯಿ ಮುಂತಾದವರೊಂದಿಗೆ ಅನೈತಿಕ ಸಂಬಂಧ ಹೊಂದಿದ್ದು ಕೂಡ ಜನಜನಿತವಾಗಿದೆ (ರವಿವರ್ಮ 1866ರಲ್ಲಿಯೇ ಕೇರಳದಲ್ಲಿ ಭಾಗೀರಥಿ ಎಂಬುವವಳನ್ನು ಮದುವೆಯಾಗಿದ್ದರೂ, ತನ್ನ ದೀರ್ಘ ಪ್ರವಾಸದಲ್ಲಿ ಅವಳನ್ನು ಜೊತೆಗೆ ಕರೆದೊಯ್ದ ಉದಾಹರಣೆಗಳಿಲ್ಲ. ಅಷ್ಟೇಕೆ ಅವರ ವೈವಾಹಿಕ ಜೀವನದ ಬಗ್ಗೆ ದೀಪಾಂಜನಾ ಪಾಲ್ ತಪತಿ ಗುಹಾ ಪ್ರಸ್ತಾಪಿಸಿದ್ದಾರಾದರೂ ಬಹುತೇಕ ಚರಿತ್ರೆ ಆ ಕುರಿತು ಮೌನವಹಿಸಿದೆ ಎನ್ನಬಹುದು. ಅದಿರಲಿ ತಮ್ಮ ಕಾವ್ಯ ಕನ್ನಿಕೆ/ಕಲಾ ಸ್ಫೂರ್ತಿದೇವತೆಯರೊಂದಿಗೆ painter and muse ಎಂಬ ಕಲ್ಪನೆಯಲ್ಲಿ ತಮ್ಮ ರೂಪದರ್ಶಿಗಳೊಂದಿಗೆ ಈ ಬಗೆಯ ಸಂಬಂಧಪಟ್ಟುಕೊಂಡಿದ್ದ ಹಲವಾರು ಉದಾಹರಣೆಗಳಿವೆ. ಪಾಶ್ಚಾತ್ಯರಲ್ಲಿಯಂತೂ ಇದೂ ತುಂಬ ಹೆಚ್ಚಾಗಿ ಕಂಡುಬರುತ್ತವೆ). ರವಿವರ್ಮನ ಈ ಬಗೆಯ ಸಂಬಂಧಗಳನ್ನೇ ರೋಮಾಂಚಕ ಪ್ರಣಯ ಕಥೆಯಾಗಿಸಿಕೊಂಡು ಹಲವು ಚಲನಚಿತ್ರಗಳೂ ಬಂದಿವೆ. ಈ ದಿಸೆಯಲ್ಲಿ ವಿನೋದ್ ಮಂಕರಾ ಅವರು 'before the brush dropped' ಚಲನಚಿತ್ರ ನಿರ್ಮಿಸಿದರೆ, ಇತ್ತೀಚೆಗೆ ಕೇತನ್ ಮೆಹ್ತಾ ಅವರು 'ರಂಗ್ ರಸಿಯಾ' ಮೂಲಕ ಭಾರಿ ಸುದ್ದಿ ಮಾಡಿದ್ದಾರೆ. ಇದರೊಂದಿಗೆ ಹಿಂದಿ ಮತ್ತು ಮಲಯಾಳಂಗಳಲ್ಲಿ ನಾಲ್ಕಾರು ಚಲನಚಿತ್ರಗಳು ಬಂದಿದ್ದು, ಬಹುತೇಕ ಇವುಗಳಲ್ಲಿ ಇವನ

ಕಲಾಕೃತಿಗಳ ಬಗ್ಗೆ ಹೊಸ ಹೊಳಹುಗಳನ್ನು ನೀಡುವುದಕ್ಕಿಂತಲೂ ಗ್ಲಾಮರ್ ನೆಲೆಯಲ್ಲಿ ಪ್ರಣಯವನ್ನು ವೈಭವೀಕರಿಸಿ ಮನರಂಜನೆ ಒದಗಿಸುವ ಉದ್ದೇಶವೇ ಮೆರೆದಿದೆ.

ವಾಲ್ಟರ್ ಬೆಂಜಮಿನ್ 1936ರಲ್ಲಿ ಬರೆದ 'The work of art in the age of reproduction' ಎಂಬ ತನ್ನ ಪ್ರಬಂಧದಲ್ಲಿ ಕೃತಿಗಳ ಯಾಂತ್ರಿಕ ಪುನರ್-ಸೃಷ್ಟಿಯನ್ನು ಸಕಾರಾತ್ಮಕವಾಗಿ ಪರಿಗಣಿಸುತ್ತಾನೆ. ಹೀಗಾದಾಗ ಕೃತಿಗಳ ಅನನ್ಯತೆ ನಾಶವಾಗುತ್ತಾದರೂ ಇದ-ರಿಂದ ದೊರೆಯುವ ಸೌಲಭ್ಯ ನೆನೆದಾಗ ಒಂದು ನೆಲೆಯಲ್ಲಿ ಇವುಗಳನ್ನು ನಾವು ಒಪ್ಪಿಕೊಳ್ಳಲೇ ಬೇಕಾಗುತ್ತದೆ. ಏಕೆಂದರೆ ಕೇವಲ ಶ್ರೀಮಂತರ ಬಳಿಯಷ್ಟೇ ಇರಬಹುದಾಗಿದ್ದ ಕಲಾಕೃತಿಗಳು ಪುನರ್-ಮುದ್ರಣದ ಕಾರಣದಿಂದಾಗಿ ಸಾವಿರಾರು ಜನರನ್ನು ತಲುಪುವಲ್ಲಿ ಇವು ನೆರವಾಗುತ್ತವೆ. ರವಿವರ್ಮನ ಓಲಿಯೊಗ್ರಾಫ್‌ಗಳ ಸಂದರ್ಭದಲ್ಲಿಯೂ ಇದೇ ಮಾತುಗಳನ್ನು ಹೇಳಬಹುದು. ಇವನ ಈ ಬಗೆಯ ಮುದ್ರಣಗಳಿಂದಾಗಿ ಸಾವಿರಾರು ಮನೆಗಳಲ್ಲಿ ಕೃತಿಗಳು ರಾರಾಜಿಸಿದುವು. ಬಹುತೇಕ ಆಗ ಚಲಾವಣೆಯಲ್ಲಿದ್ದ ಪಾಶ್ಚಾತ್ಯ ಮುದ್ರಣಗಳನ್ನು ಮೂಲೆಗುಂಪಾಗಿಸಿದವು. ಆದರೆ ಅವಸರದ ಕಾರಣದಿಂದಲೊ, ಧನದಾಹದಿಂದಲೋ ಅಥವಾ ಬೇರಾವುದೋ ಕಾರಣದಿಂದಗಿ ನಕಲು ಮಾಡಲು ಹಾಗೂ ಮುದ್ರಣಕ್ಕಾಗಿ ಈ ಹಿಂದೆ ತಿಳಿಸಿದಂತೆ ಅವನು ಸಹಾಯಕರನ್ನು ನೇಮಿಸಿಕೊಳ್ಳಬೇಕಾಗಿ ಬಂತು. ಅವರಲ್ಲಿ ಹಲವರ ಕಳಪೆ ಕೆಲಸದಿಂದಾಗಿ ಕಳಪೆ ಮುದ್ರಣಗಳೂ ಹೊರಬಂದವು. ಜೊತೆಗೆ ಈ ಹಿಂದೆ ಹೇಳಿದಂತೆ ರವಿವರ್ಮನ ಹೆಸರಿನಲ್ಲಿ ಅನೇಕರು ತಮ್ಮದೇ ಮುದ್ರಣಗಳನ್ನು ಮಾರುಕಟ್ಟೆಗೆ ಬಿಟ್ಟರು. ಈ ಬಗೆಯ ಕೀಳು ಮುದ್ರಣಗಳು. ಕೀಳು ನಕಲುಗಳು ರವಿವರ್ಮನ ಹೆಸರು ಹಾಳು ಮಾಡುವುದಕ್ಕೆ ಕಾರಣವಾಯಿತು.

ರವಿವರ್ಮನ ನಿರ್ದಿಷ್ಟ ಕೃತಿಗಳನ್ನು ಮುಂದಿಟ್ಟುಕೊಂಡು ವಿಶ್ಲೇಷಿಸುವ ಕೆಲಸವನ್ನು ನಾನಿಲ್ಲಿ ಮಾಡುತ್ತಿಲ್ಲ. ಅವನ ಕೆಲವು ಪ್ರಾತಿನಿಧಿಕ ಕೃತಿಗಳನ್ನು ಇಟ್ಟುಕೊಂಡ ಚರ್ಚೆಯನ್ನು ಬೇರೆಡೆ ಮಾಡಬಹುದಾಗಿದೆ. ಹಾಗಿದ್ದರೂ ಅವನ ಕೃತಿಗಳನ್ನು ವರ್ತಮಾನದ ಸಂದರ್ಭದಲ್ಲಿಟ್ಟು ನೋಡಿದಾಗ ಸಂಕ್ಷಿಪ್ತವಾಗಿ ನನಗೆ ಹೀಗನ್ನಿಸುತ್ತದೆ: ರವಿವರ್ಮನ ಕೃತಿಗಳಲ್ಲಿ ಪ್ರಚಲಿತ ಕಥೆಗೆ ಸಂಪೂರ್ಣ ನಿಷ್ಠೆಯುಳ್ಳ ಓರ್ವ ಕುಶಲ ನಿರೂಪಣಾ ಚಿತ್ರಕಾರ ಕಾಣಿಸುತ್ತಾನೆಯೇ ಹೊರತು, ನಿಜ ಕಲೆಯ ಅಂಶಗಳನ್ನು ದುಡಿಸಿಕೊಳ್ಳುವಂತಹ ಕಲಾವಿದ ಅಲ್ಲ. ಹೀಗಾಗಿ ಅವನ ಚಿತ್ರಗಳು ಬಹುತೇಕ ಏಕಮುಖಿ ಚಿಂತನೆಯನ್ನು ನಿರ್ಮಿಸುತ್ತದಲ್ಲದೆ. ಇಂದು ನಾವು ನಿರೀಕ್ಷಿಸುವಂತಹ ಬಹುಧ್ವನಿತ್ವದ ಪ್ರಾಪ್ತಿ ಅವುಗಳಿಂದ ಆಗುವುದಿಲ್ಲ. ಜೊತೆಗೆ ಮಸ್ತಿಷ್ಕಕ್ಕಿಂತಲೂ ಹೃದಯವನ್ನು ಮುಟ್ಟುವ ಆಶಯದ ಇವು ಹಿಂದಿನದನ್ನು ಪ್ರಶ್ನಿಸುವ ಮನೋಭಾವ ಬೆಳೆಸುವುದಿಲ್ಲ; ವೈಚಾರಿಕತೆಯನ್ನು ಪ್ರೋತ್ಸಾಹಿಸುವುದಿಲ್ಲ. ಬದಲಿಗೆ ಬೆರಗುಗೊಳಿಸುವಂತಹ ಪ್ರಭಾವಳಿಯೊಂದನ್ನು ನಿರ್ಮಿಸಿ ನೋಡುಗರನ್ನು ಮನರಂಜನೆಯ ಕೊಂಡವಲ್ಲಿ ತಳ್ಳುತ್ತವೆ. ಮೈಮನಗಳನ್ನು ಬೆಚ್ಚಗಾಗಿಸುವ, ಮುದ ನೀಡುವ ಭವ್ಯ ಶೈಲಿಯ ಮೂಲಕ ಭಾವಾಕ್ರಮಣಕ್ಕೆ ಒಳಪಡಿಸಿ ಚಿತ್ರಿತ ವ್ಯಕ್ತಿಗಳ ಮೋಹಪಾಶದಲ್ಲಿ ನಾವು ಬೀಳುವಂತೆ ಮಾಡುತ್ತವೆ. ಜೊತೆಗೆ ಪಶ್ಚಿಮದ ಜೊತೆಗಿನ ಮುಖಾಮುಖಿಯಲ್ಲಿ ಯಾವುದನ್ನೂ ಶೋಧಿಸದೆ. ಬರಿಯ ಮಂಡನೆಯ ಕೆಲಸವನ್ನು ಮಾಡುತ್ತವೆ.

ಭಾರತೀಯ ಚಿತಕಲೆಯ ವೈಶಿಷ್ಟದ ಬಗ್ಗೆ ಹೇಳುವಾಗ ಆನಂದ ಕುಮಾರಸ್ವಾಮಿಯವರು ಒಂದೆಡೆ ಲಿಯೊನಾರ್ಡೊ ಡಾವಿಂಚಿಯ ಮಾತುಗಳನ್ನು ಉದಾಹರಿಸುತ್ತಾರೆ. 'ಡ ವಿಂಚಿಯ ಪ್ರಕಾರ ಒಳ್ಳೆಯ ಚಿತ್ರಗಾರನಿಗೆ ಎರಡು ಗುರಿಗಳು ಮುಖ್ಯವಾಗುತ್ತವೆ. ಒಂದನೆಯದು ಮನುಷ್ಯನ ಬಾಹ್ಯ ಸ್ವರೂಪಕ್ಕೆ ಸಂಬಂಧಿಸಿದ್ದು. ಎರಡನೆಯದು ಮನುಷ್ಯನ ಅಂತರಂಗಕ್ಕೆ ಸಂಬಂಧಿಸಿದ್ದು. ಇವುಗಳಲ್ಲಿ

ಮೊದಲನೆಯದು ಸುಲಭ. ಎರಡನೆಯದು ಕಷ್ಟ." ರವಿವರ್ಮ ಆರಿಸಿಕೊಂಡದ್ದು ಸುಲಭದ ಈ ಮೊದಲಿನದನ್ನೇ. ತನ್ನೆಲ್ಲ ಹಸ್ತಕೌಶಲ್ಯದ ಪರಿಣತಿಯ ನಡುವೆಯೂ, ಮೋಡಿಮಾಡುವಂತಹ ಪ್ರತಿಭೆಯ ನಡುವೆಯೂ ಅವನು ಮನುಷ್ಯನ ಅಂತರಂಗವನ್ನು ತಟ್ಟುವಲ್ಲಿ ಯಶಸ್ವಿಯಾಗಲಿಲ್ಲ ಎಂದೇ ನನಗನ್ನಿಸುತ್ತದೆ. ಆದರೆ ಇವನ ಹಾಗೆಯೇ ತಮ್ಮ ಪುರಾಣ, ಧಾರ್ಮಿಕ ವಸ್ತುಗಳನ್ನು ಆಧರಿಸಿ ಕೆಲಸ ಮಾಡಿದ ಮೈಕೆಲೆಂಜಲೊ. ಡ ವಿಂಚಿ, ರಾಫೈಲ್ ಮತ್ತಿತರ ಪಾಶ್ಚಾತ್ಯ ರೆನೆಸಾನ್ಸ್ ಕಲಾವಿದರು ತಮ್ಮೆಲ್ಲ ರಂಜಕ ಅಂಶಗಳ ನಡುವೆಯೂ ಮನುಷ್ಯನ ಅಂತರಂಗದ ಕದ ತಟ್ಟುವ ಕೆಲಸ ಮಾಡಿದರು. ಅದಕ್ಕೆ ಮುಖ್ಯ ಕಾರಣ ಅವುಗಳ ವಸ್ತು ಮುಂದಿಡುವಾಗ ಕಲಾತ್ಮಕತೆಯನ್ನು ಮರೆಯದಿರುವುದು. ಈ ಕಾರಣಕ್ಕಾಗಿಯೇ ಶತಮಾನಗಳು ಕಳೆದರೂ ಕಲಾಚರಿತ್ರೆಯ ಸಂದರ್ಭದಲ್ಲಿ ಅವು ಮತ್ತೆ ಮತ್ತೆ ಪ್ರಸ್ತಾಪಿಸುವಂತಹ ಉದಾಹರಣೆಗಳೆನಿಸಿವೆ. ಆದರೆ ಭ್ರಮಾಲೋಕ ಸೃಷ್ಟಿಸುವ ರಂಜಕತೆಯ ನಡುವೆಯೂ ಹೊಸ ಹೊಳಹುಗಳನ್ನು ಮೂಡಿಸಿದ್ದರೆ, ತನ್ನ ಕೃತಿಗಳನ್ನು ಕಲಾಕೃತಿಯಾಗಿಸುವ ಕಾಳಜಿ ಇಟ್ಟುಕೊಂಡಿದ್ದರೆ, ಕೊನೆಗೆ ಪ್ರಭುತ್ವ ವಿರೋಧಿ ನಿಲುವುಗಳನ್ನಾದರೂ ಪ್ರಕಟಿಸಿದ್ದರೆ ರವಿವರ್ಮ ಇಂದಿನ ಆಧುನಿಕ ಕಲೆಯ ಸಂದರ್ಭದಲ್ಲಿಯೂ ಹೆಚ್ಚಾಗಿ ಸಲ್ಲುತ್ತಿದ್ದ. ತನ್ನಲ್ಲಿರುವ ಎಲ್ಲ ಮೋಡಿ ಮಾಡುವ ಅಂಶಗಳ ನಡುವೆಯೂ ಅವನು ಸೋತದ್ದಕ್ಕೆ ಈ ಅಂಶಗಳೇ ಕಾರಣ ಎನ್ನಬಹುದಾಗಿದೆ.

ಶತಮಾನಗಳ ಹಿಂದೆ ಗ್ರೀಕ್ ದಾರ್ಶನಿಕ ಪ್ಲೇಟೋ ಕವಿಗಳನ್ನು ಮತ್ತು ಕಾವ್ಯಗಳನ್ನು (ಕಲೆಯನ್ನು) ತನ್ನ ಆದರ್ಶ ರಾಜ್ಯದಿಂದ ಹೊರಗಿಡಲು ಮುಖ್ಯವಾಗಿ ಎರಡು ಕಾರಣಗಳನ್ನು ನೀಡಿದ್ದ. ಮೊದಲನೆಯದೆಂದರೆ ಕಲೆಯು ನಮ್ಮಲ್ಲಿರುವ ಹೀನ ವಾಸನೆಗಳಿಗೆ ಪುಷ್ಟಿ ಕೊಡುವ ಮೂಲಕ ಕಾಮ-ಕ್ರೋಧಗಳನ್ನು ಪೋಷಿಸುತ್ತದೆ ಎಂಬುದು. ಎರಡನೆಯದೆಂದರೆ ಕಲಾವಿದರು ದೇವ-ದೇವತೆಯರನ್ನು ಮತ್ತು ಮಹಾ ಪುರುಷರನ್ನು ಜನ ಸಾಮಾನ್ಯರಂತೆ ಚಿತ್ರಿಸಿ ಅವರ ಮಹತ್ವಕ್ಕೆ ಚ್ಯುತಿ ತರುತ್ತಾರೆ ಎಂಬುದು. ಪ್ಲೇಟೋ ಯಾವುದನ್ನು ನಕಾರಾತ್ಮಕವಾಗಿ, ನಿರಾಕರಣೆಯ ದೃಷ್ಟಿಯಿಂದ ನೋಡಿದನೋ ಅವುಗಳನ್ನೇ ರವಿವರ್ಮ ತನ್ನ ಕೃತಿಗಳಲ್ಲಿ ಗರ್ಭೀಕರಿಸಿದ. ಒಟ್ಟಾರೆಯಾಗಿ ಹೃದಯದ ಆಳಯಕ್ಕಿಳಿಯದೇ ಕೇವಲ ಮೇಲ್ಪದರಲ್ಲಿ ತಣಿಸುವ ಆಶಯದೊಂದಿಗೆ ಜೇರೊಂದು ದೃಶ್ಯಭಾರತವನ್ನು ನಿರ್ಮಿಸುವಾಗ ಪಶ್ಚಿಮದ ದುರಹಂಕಾರವನ್ನು ತಾನು ಪ್ರೋತ್ಸಾಹಿಸುತ್ತಿದ್ದೇನೆ ಎಂಬುದನ್ನು ಇವನು ಮನಗಾಣಲಿಲ್ಲ; ವಸಾಹುತುಶಾಹಿಯ ಬಯಕೆಗಳನ್ನು ಈಡೇರಿಸುತ್ತಿದ್ದೇನೆ ಎಂಬುದನ್ನೂ ಅರಿಯಲಿಲ್ಲ. ಕೊನೆಯಲ್ಲಿ ಹಂಗೇರಿಯ ತತ್ವಶಾಸ್ತ್ರಜ್ಞ ಜಾರ್ಜ್ ಲುಕಾಕ್ಸ್‌ನ ಹೇಳಿಕೆಯೊಂದಿಗೆ ಈ ಲೇಖನ ಮುಗಿಸುತ್ತೇನೆ. "In great works of art, people experience present and past, and there with the perspective of their future development. But they experience such things not as an external fact, which they register as more or less important, but as something essential for their own life-as an important element in their own existence" (Uguo Schmale - page 77, man and Art, Max HueberVevlag, 1972).


*

ನಂ.754, 3ನೇ ಹಂತ, ಬಿ.ಇ.ಎಂ.ಎಲ್. ಬಡಾವಣೆ
ರಾಜರಾಜೇಶ್ವರಿ ನಗರ, ಬೆಂಗಳೂರು 560 098

ಪುಸ್ತಕ

ಪರಿಚಯ

ಸ್ವಾಭಿಮಾನಿಯೊಬ್ಬನ ದಿಟ್ಟ ಪರಪಂಚ



ಲಕ್ಷ್ಮಣ ಕೊಡಸೆ

ಪುಟ : ೧೧೨

ಬೆಲೆ : ೭೦

ಮುದ್ರಣ : ೨೦೧೧

ಪ್ರಕಾಶಕರು : ಅಂಕಿತ ಪುಸ್ತಕ
ಬೆಂಗಳೂರು

ಅಂದಿನ ಮಲೆನಾಡಿನ ಭವ್ಯತೆಯನ್ನು ಕುವೆಂಪುರವರ ಮಲೆಗಳಲ್ಲಿ ಮದುಮಗಳು, ಕಾನೂರು ಹೆಗ್ಗಡಿತಿ ಮತ್ತು ಇತರ ಕೃತಿಗಳಲ್ಲಿ ಯಥೇಚ್ಛವಾಗಿ ಕಾಣಸಿಗುವುದಾದರೂ. ಅವರು ಕೃತಿಗಳಲ್ಲಿ ಕಟ್ಟಿಕೊಡುವ ಆ ಮಲೆನಾಡು ಈಗ ಕಾಣಸಿಗಲಾರದು. ಆದರೂ ಮಲೆನಾಡಿನ ದೃಗ್ ದಿಗಂತದ ದೃಶ್ಯ ಸಾದೃಶ ಯಾರನ್ನಾದರೂ ಸೆಳೆಯದಿರದು. ಕುವೆಂಪು ಆನಂತರದ ಬಹಳಷ್ಟು ಲೇಖಕರು ಕೂಡ 'ಮರೆದ' ಮಲೆನಾಡನ್ನ ಕೃತಿಗಳಲ್ಲಿ ಕಟ್ಟಿ ಕೊಟ್ಟಿದ್ದಾರೆ. ಅವರಲ್ಲಿ ಪೂರ್ಣಚಂದ್ರ ತೇಜಸ್ವಿಯವರು ಒಬ್ಬರು. ಅವರ ಕೃತಿಗಳಲ್ಲಿ ಬದುಕಿನ ಜೊತೆಜೊತೆಗೆ ಜೀವ ಸಂಕುಲಗಳು, ಅವುಗಳ ವೈಜ್ಞಾನಿಕ ವಿಶೇಷತೆಗಳನ್ನು ಕೂಡ ನಮಗೆ ತಿಳಿಸಿಕೊಡುತ್ತಾರೆ. ಆನಂತರ ಮಲೆನಾಡಿನ ಬಗ್ಗೆ ಅದೆಷ್ಟೋ ಲೇಖಕರು ಬರೆದರೂ, ಇತ್ತೀಚೆಗೆ ಪ್ರಕಟಗೊಂಡ ಕೆಲವು ಕೃತಿಗಳಲ್ಲಿ ಗಿರಿಮನೆ ಶಾಮರಾವ್ ಅವರ 'ಕಾಫಿ ನಾಡಿನ ಕಿತ್ತಳೆ' ಮತ್ತು ಬಿಳುಮನೆ ರಾಮದಾಸ್ ಅವರ 'ಮಲೆಯ ಪ್ರಬಂಧಗಳು' ಮರೆಯಾದ ಮಲೆನಾಡಿನ ಒಳಹೊರಗನ್ನು ಪ್ರತಿಬಿಂಬಿಸಿದೆ. ಓದುಗನ ಕಣ್ಣಿನಲ್ಲಿ ಇಂದಿಗೂ ಅಂದಿನ ಮಲೆನಾಡು ಇಲ್ಲಿ ಇನ್ನೂ ಸಮೃದ್ಧವಾಗಿಯೇ ಉಳಿದಿದೆ.

ಈ ರೀತಿಯಲ್ಲಿ ಮಲೆನಾಡನ್ನು ತೊರೆದು ಬಾಲ್ಯದ ನೆನಪುಗಳನ್ನು ಜೀವಂತವಾಗಿ ಇರಿಸಿಕೊಂಡು ಆಗಿನ ಮಲೆನಾಡಿನ ಸ್ಥಿತಿಗತಿ ಮತ್ತು ಅಲ್ಲಿಯ ಬದುಕಿನ ಪುಟಗಳನ್ನು ಕಟ್ಟಿಕೊಡುವವರಲ್ಲಿ ಲಕ್ಷ್ಮಣ ಕೊಡಸೆಯವರನ್ನು ಹೆಸರಿಸಬಹುದು. 'ಪಯಣ'ದಂತಹ ಕಾದಂಬರಿಯನ್ನು ಬರೆದ ಕೊಡಸೆಯವರು, 'ಊರು-ಮನೆ'ಯ ಮೂಲಕ ಮಲೆನಾಡಿನ ಪರಿಸರವನ್ನು ನೆನಪಿನಲ್ಲಿ ಜಾಗೃತವಾಗಿರಿಕೊಂಡು

ಲೇಖನಿಯಿಂದ ಅಕ್ಷರಕ್ಕೆ ಇಳಿಸಿದ ಪ್ರಯತ್ನ ಅವರದ್ದು. ಅವರ ಇತ್ತೀಚಿನ ಕೃತಿ 'ಅಪ್ಪನ ಪರಪಂಚ'ದಲ್ಲಿಯೂ ಮಲೆನಾಡಿನ ಬದುಕು, ಜೀವಸಂಕುಲಗಳ ವೈವಿಧ್ಯ ಮತ್ತು ಆಗಿನ ಮಲೆನಾಡಿನ ಪರಿಸರವನ್ನ ಬಹಳ ಸುಂದರವಾಗಿ ಬಳಸಿಕೊಂಡಿರುವುದು ಓದುಗನಲ್ಲಿ ಆಸಕ್ತಿಯನ್ನು ಹುಟ್ಟಿಸುತ್ತದೆ.

'ಅಪ್ಪನ ಪರಪಂಚ' ಒಂದು ಕಾದಂಬರಿಯಂತೆ ಕಂಡರೂ ಅಲ್ಲಿರುವುದು ಒಂದು ವ್ಯಕ್ತಿ ಚಿತ್ರಣ ಅಥವಾ 'ಜೀವನಗಾಥೆ'. ಆದರೂ, ಇದನ್ನು ಒಂದು 'ನಾನ್ ಫಿಕ್ಷನ್' ಅಂದರೆ ತಪ್ಪಾಗಲಾರದು.

ಈ ಕೃತಿಯಲ್ಲಿ ತಂದೆ ಮತ್ತು ಮಗನ ಬಾಂಧವ್ಯಕ್ಕಿಂತಲೂ, ತಂದೆ ಬದುಕಿಗಾಗಿ ಪಡುವ ಹೋರಾಟವನ್ನು 'ವನ್ ಮ್ಯಾನ್ ಆರ್ಮಿ'ಯಾಗಿ ಚಿತ್ರಿಸುತ್ತಾ, ಮಗ ತಂದೆಯ 'ನೆಗೆಟಿವ್'ಗಳನ್ನು ಹೇಳುವಂತೆ ಕಂಡರೂ, ಅಲ್ಲಿ ಮಗನಿಗೆ ತಂದೆಯ ಮೇಲಿರುವ ಅವ್ಯಕ್ತವಾದ ಪ್ರೀತಿಯನ್ನು ಸೂಕ್ಷ್ಮವಾಗಿ ತೆರೆದಿಡುತ್ತದೆ. ಇದರ ಜೊತೆಗೆ ಆಗಿನ ಒಟ್ಟು ವ್ಯವಸ್ಥೆಯನ್ನು, ಆ ಪರಿಸರದಲ್ಲಿ ಬೆಳೆದವರ ಮುಗ್ಧತೆಯನ್ನು ಕೂಡ ಪರಪಂಚದಲ್ಲಿ ದೃಶಿಸಿರುವುದು ಕಣ್ಣಿಗೆ ಕಟ್ಟಿದ ಹಾಗೆ ಮೂಡಿ ಬಂದಿದೆ. ಅಡಿಕೆಯ ಸಿಪ್ಪೆ ಸುಲಿಯುತ್ತಲೇ ಮಕ್ಕಳ ಬಗ್ಗೆ ಅಪಾರ ಪ್ರೀತಿಯಿರುವ ತಂದೆ, ಮಕ್ಕಳ ಓದಿನ ಬಗೆಯೂ ಕಾಳಜಿವಹಿಸಿ ಬದುಕು ಬದಲಿಸಿಕೊಳ್ಳುವ ನೋವು ಮತ್ತು ಪ್ರೀತಿಯಲ್ಲಿ ಅವರ 'ಭವಿಷ್ಯ'ವನ್ನು ರೂಪಿಸಿಕೊಡುವುದು ಮಕ್ಕಳ ಮೇಲಿನ ದ್ವೇಷದಿಂದಲ್ಲ, ಬರೀ ಪ್ರೀತಿಯಿಂದ ಮಾತ್ರ. ತಂದೆಯಾದವನ ಜವಾಬ್ದಾರಿ ಮತ್ತು ಅದನ್ನು ಡಿಸ್ಚಾರ್ಜ್‌ಗೊಳಿಸುವ ಹಾದಿ ಸುಗಮವಾದುದಲ್ಲವಾದರೂ, ಈ ಕೃತಿಯಲ್ಲಿ ಇದ್ದದ್ದರಲ್ಲೇ ಪ್ರಪಂಚವನ್ನು ಕಂಡುಕೊಳ್ಳುವ ಗಟ್ಟಿ ಮಲೆನಾಡಿಗನೊಬ್ಬನ ಹೋರಾಟವಿದೆ.

ಆಯುಷ್ಯ ಏರುತ್ತಿದ್ದಂತೆ ಹುಟ್ಟಿಕೊಳ್ಳುವ ಜೀವನ ಪ್ರೀತಿ, ಅಸಹಾಯಕತೆಯ ನಡುವೆಯೂ ಮನಸ್ಸಿಗೆ ಮೀರಿದ ಸಾಹಸದ ಕೆಲಸಗಳನ್ನು ಮಾಡಲು ಪ್ರೇರೇಪಿಸುವಂತೆ ಇಳಿವಯಸಿನಲ್ಲಿಯೂ 'ನೀರಾ' ತೆಗೆದು, ಅದನ್ನು ಗಡಿಗೆಯಲ್ಲಿ ಹೊತ್ತುಕೊಂಡು ಹೋಗುವ ಕೆಲಸ ಸಾಮಾನ್ಯವಾದುದಲ್ಲ. ಇಲ್ಲಿ ಹಠಮಾರಿತನಕ್ಕಿಂತಲೂ ಸ್ವಾಭಿಮಾನವಿದೆ. ಮಕ್ಕಳ ಮುಂದೆ ಕ್ಷುಲ್ಲಕ ವಿಷಯಕ್ಕೂ ಕೈಯೊಡ್ಡಬೇಕಾದ ಪರಿಸ್ಥಿತಿಯಲ್ಲಿ ಅದನ್ನು ನಿಭಾಯಿಸಿ ಬದುಕುವ ಹಳ್ಳಿಗನೊಬ್ಬನ ಜೀವನಗಾಥೆಯಿದೆ. ಕೆಲವೊಂದು ಹಳ್ಳಿಗಳಲ್ಲಿ ಇಂದಿಗೂ ಶೇಂದಿಯನ್ನು ತೆಗೆದು, ಮಾರುವ ದೃಶ್ಯವನ್ನು ಕಾಣುತ್ತೇವೆ. ಅದೇ ದೃಶ್ಯ ಕೊಡಸೆಯವರ ಈ ಕೃತಿಯಲ್ಲಿ ಕೂಡ ಪಾತ್ರವೊಂದರ ಅವಿಭಾಜ್ಯ ಅಂಗದಂತೆ ಮೂಡಿಬಂದಿದೆ.

'ಅಪ್ಪನ ಪರಪಂಚ'ದಲ್ಲಿ, ಅಪ್ಪ ರಾಜಕೀಯವನ್ನು ಅನಿವಾರ್ಯವಾಗಿ ಪ್ರವೇಶಿಸುವುದು, ಜಿಳುಮನೆಯವರ 'ಮಲೆಯ ಪ್ರಬಂಧಗಳು'ವಿನಲ್ಲಿ 'ಶಾಂತವೇರಿ ಗೋಪಾಲಗೌಡರು–ನೆನಪುಗಳು' ಪ್ರಬಂಧವನ್ನು ಮೆಲುಕು ಹಾಕುವಂತೆ ಮಾಡುತ್ತದೆ. ರಾಜಕೀಯದ ನಡುವೆ ಇಳಿವಯಸ್ಸಿನಲ್ಲಿಯೂ ಸಮಾಜಸೇವೆಗೆ ಟೊಂಕಕಟ್ಟಿ ನಿಲ್ಲುವ ಉತ್ಸಾಹ ಅಪ್ಪನ ಪರಸೇವೆಯ ಪ್ರಪಂಚವಾಗಿಯು ಕಾಣಿಸುತ್ತದೆ. ಚುನಾವಣೆಯಲ್ಲಿ ಸೋತರೂ ಬತ್ತದ ಸಮಾಜಸೇವೆಯ ನಂಟು ರಿಪ್ಪನ್‌ಪೇಟೆಯಲ್ಲಿರುವ ಸಮುದಾಯ ವಿದ್ಯಾರ್ಥಿನಿಲಯದ ಜವಾಬ್ದಾರಿಯನ್ನು ಹೆಗಲಿಗೇರಿಸಿಕೊಂಡು ಶಿಕ್ಷಣದ ಹಂಬಲದಲ್ಲಿರುವ ಮಕ್ಕಳ ಕಾಳಜಿಯನ್ನು ಹೊತ್ತುಕೊಂಡು ಪರಿಸ್ಥಿತಿಯನ್ನು ಎದುರಿಸುವುದು ಸುಲಭದ ಮಾತಲ್ಲವೆನ್ನುವುದು ಓದುಗನಿಗೆ ತಿಳಿಯುತ್ತದೆ.

ಇಷ್ಟೆಲ್ಲಾ ತಾಕತ್ತಿದ್ದರೂ ಮಕ್ಕಳು ಪ್ರಾಯಕ್ಕೆ ಬಂದಾಗ ಅವರಿಗೆ ಜವಾಬ್ದಾರಿಯನ್ನು ಹೊರೆಸಿ. ಬದುಕಿನ ವ್ಯಾಪ್ತಿಯನ್ನು ತೆರೆದಿಡುವ ಉದ್ದೇಶವೇ ಅವನಿಗೆ ಇದ್ದಿರಬಹುದೆಂದೆನಿಸುತ್ತದೆ.

ಇಲ್ಲವಾದರೆ ಮಕ್ಕಳಿಗೆ ಆಯಾಯ ಸಂದರ್ಭದಲ್ಲಿ ಏನೇನು ಆಗಬೇಕೆಂದುಕೊಳ್ಳುತ್ತಾರೋ ಅವುಗಳ ಜೊತೆಗೆ ಅವರವರ ಜವಾಬ್ದಾರಿಯನ್ನು ಈ ಮೂಲಕ ಹೇಳುತ್ತಿರಬಹುದು. ಅಷ್ಟೇ ಅಲ್ಲದೆ, ಸರೀಕರ ಜೊತೆಗೆ 'ಯಜಮಾನ' ಅನಿಸಿಕೊಂಡವನು ಬಾಂಧವ್ಯಗಳನ್ನು ಉಳಿಸಿಕೊಂಡು ಒಬ್ಬ 'ರೋಲ್ ಮಾಡೆಲ್' ಆಗಿ ಗೋಚರಿಸಿದರೂ ಹೆಚ್ಚಲ್ಲ. ಈ ರೀತಿಯ ಗೌರವಕ್ಕೆ ಪಾತ್ರವಾಗಬೇಕಾದರೆ ಆತನ ಕಾರ್ಯವೈಖರಿ, ಆದರ್ಶಗಳು ಇತರರಿಗೆ ಮಾದರಿಯಾಗಿರಬೇಕು. ಹಾಗಿನ ವ್ಯಕ್ತಿತ್ವ ಈ ಕೃತಿಯಲ್ಲಿ ಬರುವ ಅಪ್ಪನದು. ಬೆನ್ನುಡಿಯಲ್ಲಿ ಸರ್ಜಾಶಂಕರ ಹರಳಿಮಠ ಅವರು ಹೇಳುವಂತೆ, 'ಇಲ್ಲಿ ಅಪ್ಪನ ಬಗ್ಗೆ ಮಾತ್ರ ಹೇಳುತ್ತಿಲ್ಲ. ಅಪ್ಪನ ಕಾಲಘಟ್ಟವನ್ನು ನಿಷ್ಠುರವಾಗಿ ಚಿತ್ರಿಸುವ ಕೃತಿ 'ಅಪ್ಪನ ಪರಪಂಚ'.

ಮಕ್ಕಳ ಮನೆಯಲ್ಲಿ ಆರಾಮವಾಗಿ ಜೀವನ ನಡೆಸಬಹುದಾದ ಅವಕಾಶಗಳಿದ್ದರೂ ಅದು ಅಸಹನೀಯವಾಗುವ ಸ್ಥಿತಿಯೇ ಒಬ್ಬನ ಕ್ರಿಯಾಶೀಲತೆಯನ್ನು ತೋರಿಸುತ್ತದೆ. ಅಂತಹ ಕ್ರಿಯಾಶೀಲತೆಯಿಂದಿರುವ ವ್ಯಕ್ತಿಯು ಪ್ರತೀ ಕೆಲಸದಲ್ಲಿಯೂ ಗುಣಾತ್ಮಕವಾದ ಪ್ರತಿಕ್ರಿಯೆಯನ್ನು ನಿರೀಕ್ಷಿಸುತ್ತಾನೆ. ಹಾಗಾಗಿ ಇಲ್ಲಿಯ ಅಪ್ಪ ತನ್ನದೇ ಆದ ಒಂದು ಪ್ರಪಂಚವನ್ನು ಕಟ್ಟಿಕೊಂಡಿದ್ದಾನೆ.

ಮಕ್ಕಳಿಗೆ ರೋಲ್ ಮಾಡೆಲ್ ಆಗುವ ಅಪ್ಪಂದಿರ ಬಗ್ಗೆ ಆಗಿನ ಕಾಲದಲ್ಲಿ ಏನನ್ನೂ ಗುರುತಿಸಲಾರದೆ, ಸ್ವತಃ ತನಗೆ ಜವಾಬ್ದಾರಿಗಳ ಆಳದ ಅರಿವಾದಾಗ ಮಗ, ಅಪ್ಪನ ಕಾರ್ಯವೈಖರಿಯನ್ನು ಒಂದು 'ಬೆರಗು' ಅನ್ನುವಂತೆ ಇಲ್ಲಿ ಕಾಣುತ್ತಾನೆ. ಆ ಬೆರಗು ಅಸಹಾಯಕತೆಯಿಂದ ಪಾರ್ಶ್ವವಾಯು ಪೀಡಿತನಾಗಿ ಮಲಗಿದಾಗ ಕ್ರಿಯಾಶೀಲತೆಯ ಚುರುಕು ಜೀವವೊಂದನ್ನು ಆ ರೀತಿಯಲ್ಲಿ ಕಲ್ಪಿಸಿಕೊಳ್ಳುವುದಕ್ಕೂ ಬೇಸರವಾಗುತ್ತದೆ. ಮುಂದೆ ಅದು ಸಾವಿನಲ್ಲಿ ಅಂತ್ಯ ಕಂಡಾಗ ಅಪ್ಪನನ್ನು ನೋಡಲಾಗದ ಅಸಹಾಯಕತೆಯಲ್ಲಿ ಉಳಿದು ಬಿಡುವ ಮಗನ ಅಂತಃಕರಣದ ಸೊಲ್ಲು ಮತ್ತು ಅವನ ಆಶೆಗಳೆಲ್ಲಾ ದೂರ ಮಾಡಿಕೊಂಡ ನಿರ್ಲಿಪ್ತತೆ ಯಾರ ಮನಸ್ಸನಾದರೂ ಕಲಕದಿರದು. ಇನ್ನೊಂದು ಮನಕಲಕುವ ದೃಶ್ಯ, ಮಕ್ಕಳ ಒತ್ತಾಯಕ್ಕೆ ಹಸಿರು ಬಳೆ ತೊಟ್ಟು, ಕನಕಾಂಬರ ಮುಡಿಗೇರಿಸಿ, ಹಣೆಗೆ ಕುಂಕುಮವಿಟ್ಟು ಕಾರಿನತ್ತ ಹೆಜ್ಜೆ ಹಾಕುವ ತಾಯಿಯ ಸನ್ನಿವೇಶ ಓದುಗನ ಕಣ್ಣನ್ನು ಒದ್ದೆ ಮಾಡದಿರದು.

'ಅಪ್ಪನ ಪರಪಂಚ' ಒಬ್ಬ ಆದರ್ಶಪ್ರಾಯ ತಂದೆಯ ಜೀವಿತ ಮತ್ತು ಆತನ ಸ್ವಾಭಿಮಾನದ, ಶಿಸ್ತಿನ ಬದುಕು ಎಲ್ಲರಿಗೂ ಮಾದರಿಯೆಂದರೆ ಅತಿಶಯೋಕ್ತಿಯಲ್ಲ. ನಿಜವಾಗಿಯೂ ತಂದೆಯೊಬ್ಬ ಮಕ್ಕಳ ದೃಷ್ಟಿಯಲ್ಲಿ 'ರಿಯಲ್ ಹೀರೋ' ಅಂದರೂ ತಪ್ಪಲ್ಲ. ಹಾಗಾಗಿ ಲಕ್ಷ್ಮಣ ಕೊಡಸೆ ಅವರ ಈ ಕೃತಿ ಕೇವಲ ಒಂದು ಕುಟುಂಬದ ಅಥವಾ ವರ್ಗದ ಓದುಗರಿಗೆ ಮಾತ್ರ ಸೀಮಿತವಲ್ಲ. ಸಹಜ ಬದುಕಿನ ಏರಿಳಿತಗಳು ಓದುಗರಿಗೂ ಆದರ್ಶಪ್ರಾಯವೆಂದೆನಿಸಬಹುದು. ಈ ಕೃತಿಯಲ್ಲಿ ಮನೋಹರ್ ಅವರ ಮುಖಪುಟದ ಕಲೆ ಕೂಡ ಕೃತಿಯಷ್ಟೇ ಬಹಳ ಪರಿಣಾಮಕಾರಿಯಾಗಿ ಮೂಡಿ ಬಂದಿದೆ.

– ಅನು ಬೆಳ್ಳೆ

ಅನು ಬೆಳ್ಳೆ
ಉಜಿರೆ
ದೂ : 98802 58933

ಆಡಾಡತ ಆಯುಷ್ಯ

ನಡೆದು ಬಂದ ದಾರಿ ಕಡೆಗೆ
ತಿರುಗಿಸಬೇಡ – ಕಣ್ಣ
ಹೊರಳಿಸಬೇಡ ॥
- ಎಂ. ಗೋಪಾಲಕೃಷ್ಣ ಅಡಿಗ

ಗಿರೀಶ್ ಕಾರ್ನಾಡರು ಭಾರತೀಯ ರಂಗಭೂಮಿಗೆ, ಮುಖ್ಯವಾಗಿ ಕನ್ನಡ ರಂಗಭೂಮಿಗೆ ಕೊಟ್ಟ ಕೊಡುಗೆ ಅನನ್ಯವಾದುದು ಮತ್ತು ಅಪೂರ್ವವಾದುದು. ಅವರು ನಾಟಕಕಾರರಾಗಿ ಪ್ರಸಿದ್ಧರಷ್ಟೇ ಅಲ್ಲ, ನಟರಾಗಿ, ಚಿತ್ರ ನಿರ್ದೇಶಕರಾಗಿಯೂ ಪ್ರಸಿದ್ಧರು. ಎಪ್ಪತ್ತರ ದಶಕದಲ್ಲಿ ಹಲವು ಕನ್ನಡದ ಅತ್ಯುತ್ತಮ ಸಾಹಿತ್ಯ ಕೃತಿಗಳನ್ನು ಬೆಳ್ಳಿತೆರೆಗೆ ತಂದು, ಕನ್ನಡ ಚಿತ್ರರಂಗಕ್ಕೆ ಅಪೂರ್ವವಾದ ಚಿತ್ರಗಳು ಬರಲು ಕಾರಣರಾದವರು. ಅವರು ಆಕ್ಸ್‌ಫರ್ಡಿನಲ್ಲಿ ಓದಿಯೂ ಇಂಗ್ಲಿಷ್ ವ್ಯಾಮೋಹಕ್ಕೆ ಒಳಗಾಗದೆ, ಮನೆಮಾತು ಕೊಂಕಣಿಯಾದರೂ ಕನ್ನಡದ ಮೇಲೆ ಪ್ರೀತಿ ಇಟ್ಟು, ಕನ್ನಡದಲ್ಲೇ ಬರೆದು ಮಹತ್ತರ ನಾಟಕಕಾರರಾಗಿ ಜ್ಞಾನಪೀಠ ಪುರಸ್ಕೃತರಾಗಿ ಕನ್ನಡ ನಾಡಿಗೆ ಕೀರ್ತಿ ತಂದವರು. ಅವರು ನಾಟಕಗಳ ಮೂಲದ್ರವ್ಯವನ್ನು ಭಾರತೀಯ ಪುರಾಣಗಳಿಂದ ತೆಗೆದುಕೊಂಡವರು. ಅದನ್ನು ಅವರು ಸಮಕಾಲೀನ ಭಾರತದ ಆಧುನಿಕತೆಯ ಬೆಳಕಿನಲ್ಲಿ ಚಿತ್ರಿಸುತ್ತಾರೆ. ಗಿರೀಶರು ಮಹತ್ವದ ನಾಟಕಕಾರರು ಎನ್ನುವುದಕ್ಕೆ ಅವರ, ಯಯಾತಿ, ತುಘಲಕ್, ತಲೆದಂಡ ನಾಟಕಗಳನ್ನು ಹೆಸರಿಸಿದರಷ್ಟೇ ಸಾಕು. ಬಹುಶಃ ಲೇಖಕರಾಗಿ ಅವರಿಗಿದ್ದ ಸಂಯಮ, ಬೇರೊಬ್ಬರಲ್ಲಿರುವುದು ನಾನು ಓದಲಿಲ್ಲ, ಕೇಳಿಯೂ ಇಲ್ಲ.



ಗಿರೀಶ ಕಾರ್ನಾಡ

ಪುಟ : ೩೭೪
ಬೆಲೆ : ೩೦೦
ಮುದ್ರಣ : ೨೦೧೧
ಪ್ರಕಾಶಕರು : ಮನೋಹರ ಗ್ರಂಥಮಾಲಾ, ಧಾರವಾಡ

ಅವರು ತಮ್ಮ ನಾಟಕಗಳು ಮುದ್ರಣವಾದ ಮೇಲೂ ಮತ್ತೊಂದು ಮುದ್ರಣಕ್ಕೆ ಹೋಗುವ ಮುಂಚೆ ತಿದ್ದುತ್ತಾರೆಂದು ಅವರೇ ಹೇಳಿಕೊಂಡಿದ್ದಾರೆ. ಅವರು ಹಾಗೆ ತಿದ್ದುವುದಕ್ಕೆ ಕಾರಣ, ಬಹುಶಃ ಭಾಷೆಯ ದೋಷವನ್ನು ಸರಿಪಡಿಸಲೆಂದು ತಿದ್ದಬಹುದು. ಈ ಮಾತನ್ನು ನಾನು ಉಲ್ಲೇಖಿಸುವುದಕ್ಕೆ ಕಾರಣ. ಇತ್ತೀಚಿನ ಅವರ 'ಅಡಾಡತ ಆಯುಷ್ಯ' ಒಂದು ಅಪೂರ್ವ ಕಥನವೇ ಸರಿ. ತಮ್ಮ ಆತ್ಮಕತೆಯನ್ನು ಕತೆಗಳು ಎಂದಿರುವುದಕ್ಕೆ ಕಾರಣ, ಅವರು ಕೃತಿಯಲ್ಲಿ ಅವರ ಜೊತೆಗಿನ ಗೆಳೆಯರ ಜೀವನಕಥೆಗಳೂ ಸೇರಿವೆ. ಎಪ್ಪತ್ಮೂರರ ಅಂಚಿನಲ್ಲಿರುವ ಕಾರ್ನಾಡರು ಬರೆದ ಆತ್ಮಕತೆ, ಪ್ರಾರಂಭವಾಗುವುದು ಅವರ ತಾಯಿ ಕುಟ್ಟಬಾಯಿ ಬರೆದ ಆತ್ಮಕತೆಯಿಂದ. ಅವರ ತಾಯಿ ಕುಟ್ಟಬಾಯಿ ಆಗಿನ ಕಾಲದಲ್ಲೇ *"Living together concept"* ಅನ್ನು ಧೈರ್ಯವಾಗಿ ನಿಭಾಯಿಸಿ ಮತ್ತು ವಿಧವೆಯಾಗಿಯೂ ಮತ್ತೊಂದು ಮದುವೆಯಾಗಿ ಸಮಾಜವನ್ನು ಧೈರ್ಯವಾಗಿ ಎದುರಿಸಿದ್ದುದನ್ನು ತಮ್ಮ ಆತ್ಮಕತೆಯಲ್ಲಿ ಚಿತ್ರಿಸಿದ್ದಾರೆ. ಅವರ ತಾಯಿಯ ಆತ್ಮಕತೆ, ಮದುವೆಯಾಗಿ ಸಂಸಾರ ಹೂಡುವ ತನಕ ಮಾತ್ರ ಮುಂದುವರೆಯುತ್ತದೆ. ಮಕ್ಕಳಾದ ಮೇಲೆ ಅವರು ತಮ್ಮ ಕತೆಯನ್ನು ಅಲ್ಲಿಗೇ ನಿಲ್ಲಿಸುತ್ತಾರೆ. ಒಂದು ಅಪೂರ್ವವಾದ ಆತ್ಮಕತೆಯಿಂದ ತಮ್ಮ ಆತ್ಮಕಥೆಯನ್ನು ಪ್ರಾರಂಭಿಸಿರುವುದು ವಿಶಿಷ್ಟವಾಗಿದೆ ಮತ್ತು ಹೃದಯಸ್ಪರ್ಶಿಯಾಗಿದೆ. ಈ ಕೃತಿಯಲ್ಲಿ ಒಂದು ಕಾಲಘಟ್ಟದ ಸಮಕಾಲೀನ ಸಮಾಜದ ಚಾರಿತ್ರಿಕ ಆಯಾಮವನ್ನು ಚಿತ್ರಿಸಿದ್ದಾರೆ. ಅಲ್ಲದೆ ಅವರು ಹುಟ್ಟಿ ಬೆಳೆದ ಪರಿಸರ, ಇಂಗ್ಲೆಂಡಿನಲ್ಲಿ ಹೆಚ್ಚಿನ ವಿದ್ಯಾಭ್ಯಾಸ ಮಾಡುವಾಗ ಅಲ್ಲಿಯ ಬದುಕಿನ ಅನುಭವ, ಅವರು ಚಿತ್ರರಂಗದಲ್ಲಿ ಮತ್ತು ಫಿಲಂ ಇನ್ಸ್ಟಿಟ್ಯೂಟ್‌ನಲ್ಲಿ ನಿರ್ದೇಶಕರಾಗಿದ್ದಾಗ ಎದುರಾಗುವ ಬಿಕ್ಕಟ್ಟಿನ ಅನುಭವ, ಯು.ಆರ್. ಅನಂತಮೂರ್ತಿ ಅವರ 'ಸಂಸ್ಕಾರ' ಓದಿದಾಗಿನಿಂದ ಅದನ್ನು ಗೆಳೆಯರೊಂದಿಗೆ ಸೇರಿ ಚಿತ್ರ ನಿರ್ಮಿಸಿ ಬಿಡುಗಡೆ ಮಾಡುವ ತನಕ ಪಡುವ ಪಾಡು, ಸುಪ್ರಸಿದ್ಧ ರಂಗತಜ್ಞರಾದ ಅಲ್ಕಾಜಿ ಮತ್ತು ಸತ್ಯದೇವ್ ದುಬೆ ಅವರೊಂದಿಗಿನ ಒಡನಾಟದ ಅನುಭವ ಎಲ್ಲವೂ ಸ್ವಾರಸ್ಯಕರವಾಗಿದೆ. ಹಲವು ಘಟನೆಗಳು ರೋಚಕವಾಗಿವೆ.

ಇಷ್ಟೆಲ್ಲ ಇದ್ದರೂ ಪೂರ್ತಿ ಆತ್ಮಕತೆಯನ್ನು ಓದಿದ ಮೇಲೆ ಒಂದು ಅಸಂತೃಪ್ತಿಯ ಭಾವ ಕಾಡುತ್ತದೆ. ಇಲ್ಲಿನ ಮುಖ್ಯ ದೋಷವೆಂದರೆ, ಭಾಷೆ ಮತ್ತು ವಾಕ್ಯ ರಚನೆ ಕೆಲವು ಕಡೆ ಅಸಂಬದ್ಧವಾಗಿದೆ. ಅವರು ಇದನ್ನು ಮುಂದಿನ ಮುದ್ರಣದಲ್ಲಿ 'ಸರಿಪಡಿಸಬಹುದು. ಕಾರ್ನಾಡರು ಬದುಕನ್ನು ಯಾವ ಸಂಘರ್ಷವೂ ಇಲ್ಲದೆ, ಸುಸೂತ್ರವಾಗಿ ಕಳೆದವರು. ಶಿ.ವಿ. ಕಾರಂತರ 'ಇಲ್ಲಿರಲಾರೆ, ಅಲ್ಲಿಗೆ ಹೋಗಲಾರೆ' ಆತ್ಮಚರಿತ್ರೆಯ ಹಾಗೆ 'ಅಡಾಡತ ಆಯುಷ್ಯ' ಅಷ್ಟು ಗಾಢವಾಗಿ ಮನಸ್ಸಿಗೆ ತಟ್ಟುವುದಿಲ್ಲ.

– ಸತ್ಯ ಭಾರದ್ವಾಜ್

ಸತ್ಯ ಭಾರದ್ವಾಜ್
ಬೆಂಗಳೂರು
94487 03864

ಇಸ್ತ್ರಿ ಮಾಡಿದ ಆತ್ಮ ಮತ್ತು ಪ್ರಾಮಾಣಿಕ ಕಥೆಗಳು

ಗಿರೀಶ ಕಾರ್ನಾಡರು ತಮ್ಮ ಆತ್ಮಕತೆ 'ಆಡಾಡತ ಆಯುಷ್ಯ' ಕೃತಿಯನ್ನು 'ಆತ್ಮ-ಕತೆಗಳು' ಎಂದು ಕರೆದುಕೊಂಡಿದ್ದಾರೆ. ಇಲ್ಲಿನ ತನಕ ರೂಢಿಯಲ್ಲಿರುವ 'ಆತ್ಮಕಥೆ' ಎಂಬ ಉಪಶೀರ್ಷಿಕೆಯನ್ನು ಬಿಟ್ಟು, 'ಆತ್ಮ-ಕತೆಗಳು' ಎಂಬ ಬಹುವಚನದ, ಒಡೆದ ಪದಗಳ ಶೀರ್ಷಿಕೆ ಉದ್ದೇಶಪೂರ್ವಕವಾದದ್ದು ಎಂಬುದು ಲೇಖಕರು ಲೆಕ್ಕಾಚಾರದಲ್ಲಿ ಬರೆದ ನಾಟಕಗಳನ್ನು ಕನ್ನಡದಲ್ಲಿ ಓದಿದವರಿಗೆ ತಿಳಿಯುವ ಸಂಗತಿ.

ಕೃತಿಯನ್ನು ಓದುತ್ತಾ ಹೋದಂತೆ ಉದ್ದಕ್ಕೂ ಲೇಖಕರ 'ಆತ್ಮ' ಮತ್ತು 'ಕಥೆ'ಗಳ ನಡುವಿನ ಹೊಯ್ದಾಟ ಗೋಚರಿಸುತ್ತಾ, ಆ ಕಥೆಗಳು ತಮ್ಮ ಒಳಗಿನ ಲೇಖಕರ ಆತ್ಮವನ್ನು ಇಸ್ತ್ರಿ ಇಲ್ಲದೆ ಸಹಜವಾಗಿ ಹೊರಗೆ ಬರಲು ಬಿಡುವುದೇ ಇಲ್ಲವಲ್ಲ ಪಾಪ ಎನ್ನಿಸುತ್ತದೆ. ಗಿರೀಶರು ತಮ್ಮ ಬಾಲ್ಯ ಮತ್ತು ವಿವಾಹೇತರ ಸಂಬಂಧಗಳನ್ನು ವಿವರಿಸಿರುವ ಸೊಫೆಸ್ಟಿಕೇಟೆಡ್ ರೀತಿ ನೋಡಿದರೆ ಇದು ಸ್ಪಷ್ಟವಾಗಿ ತಿಳಿಯುತ್ತದೆ. ತಮ್ಮ ಬಾಲ್ಯವನ್ನು ಅವರು ಕಟ್ಟಿಕೊಟ್ಟಿರುವ ರೀತಿಯಂತೂ ಆತ್ಮಕಥೆ ಎನ್ನುವುದಕ್ಕಿಂತಲೂ ಜೀವನ ಚರಿತ್ರೆ ಎನ್ನುವಂತೆಯೇ ಇದೆ. ಓರ್ವ ಗ್ರಾಮೀಣ ಪ್ರದೇಶದ ಬಾಲಕನ ಚಿತ್ರಣವು ಅನೇಕ ನೂರು ವಿವರಗಳಿಂದ ತುಂಬಿದ್ದರೂ ಅದರಲ್ಲಿ 'ಬಾಲ್ಯ'ದ ಸಹಜವಾದ ಮನಸ್ಸೇ ಇಲ್ಲ ಎಂಬುದು ಅಚ್ಚರಿಯ ಸಂಗತಿ. ಅಥವಾ ಲೇಖಕರು ಅಂಥವೆಲ್ಲಾ ಬೇಡ ಎಂದು ನಿರ್ಧರಿಸಿ, ಜತನದಿಂದ ತೂಕ ಮಾಡಿ, ತಾಳೆ ಹಾಕಿ ತಮ್ಮ ಮುಂದಿನ 'ಕತೆ'ಗಳಿಗೆ ಹೊಂದುವಂತೆ ಬಾಲಕ ಗಿರೀಶನನ್ನು ಪುನರ್ ರೂಪಿಸಿಕೊಂಡಿದ್ದಾರೋ ಎಂಬ ಅನುಮಾನವೂ ಮೂಡುತ್ತದೆ.

ನಿಜಕ್ಕೂ ಒಮ್ಮೆ ಕೈಗೆತ್ತಿಕೊಂಡರೆ ಓದಿ ಮುಗಿಸುವವರೆಗೂ ಕೆಳಗೆ ಇಡಲು ಮನಸ್ಸಾಗದಷ್ಟು ಚೆನ್ನಾಗಿರುವ ಮತ್ತು ಅವರ ನಾಟಕಗಳಷ್ಟೇ ಜತನದಿಂದ ಹೆಣೆದಂತೆ ಕಾಣುವ ಕಥೆಗಳು ಇಲ್ಲಿದ್ದರೂ. ಹೀಗೆ ಅನ್ನಿಸಲು ಕಾರಣ ಬಹುಶಃ ಗಿರೀಶರ ಬರವಣಿಗೆಯ ಶೈಲಿ ಮತ್ತು ಅವರ ಭಾಷೆ. ಗಿರೀಶರ ಬಗ್ಗೆ ಗೊತ್ತಿಲ್ಲದ ಯಾರಾದರೂ ಇದನ್ನು ಓದಿದರೆ ಇದನ್ನು 'ಉತ್ತಮ ಇಂಗ್ಲೀಷ್ ಕೃತಿಯ ಮಕ್ಕಿಕಾಮಕ್ಕಿ ಅನುವಾದ' ಎಂದು ಹೇಳುವಂತಿದೆ. ಕನ್ನಡದ ಓದುಗರಿಗೆ ಅಭ್ಯಾಸವಿಲ್ಲದ ಇಂಗ್ಲೀಷ್ ಛಾಯೆಯ ಕನ್ನಡ ಇಲ್ಲಿನದು. ಹಾಗಾಗಿ ಕನ್ನಡದ ಮೂಲಕವೇ ಕನ್ನಡದ ಮನಸ್ಸುಗಳಿಗೆ ದಕ್ಕುವ ಅನೇಕ ಸಪಿರಾದ ಮತ್ತು ಗಾಢ ಅನುಭವಗಳಿಗೂ ಇದು ಎರವಾಗಿದೆ.

ಗಿರೀಶ ಕಾರ್ನಾಡರ ಬರವಣಿಗೆಯಲ್ಲಿ ಎಲ್ಲೂ ಇದು ಮೂಲ ಕನ್ನಡದ ಕೃತಿ ಎಂದು ಅನ್ನಿಸುವುದೇ ಇಲ್ಲ. ಇದಕ್ಕೆ ಕಾರಣ ಲೇಖಕರ ಭಾಷೆ ಮಾತ್ರ ಅಲ್ಲ. ಕಾರ್ನಾಡರ ಒಟ್ಟೂ 'ಕನ್ನಡ' ಕೃತಿಗಳನ್ನು ನೋಡಿದರೆ ಅದರಲ್ಲಿ ಪದ ಮತ್ತು ವಾಕ್ಯಗಳು ಮಾತ್ರ ಕನ್ನಡದವು; ಮಾತಿನೊಳಗಿನ ಆತ್ಮ ಕನ್ನಡದ್ದಲ್ಲ. ಅವು ಎಲ್ಲಿಯವೂ ಆಗಬಹುದಾದವು. ಬಹುಶಃ 'ಪಾನ್ ಇಂಡಿಯಾ'. ತಮ್ಮ ಭಾಷೆಯ ಬಗ್ಗೆ ಗಿರೀಶರು ತಮ್ಮ ಕತೆಗಳಲ್ಲೇ ಒಂದು ಕಡೆ ಹೀಗೆ ಹೇಳಿಕೊಂಡಿದ್ದಾರೆ,

'ನಾನು ಶಿರಸಿಯಲ್ಲಿ ಬೆಳೆದಿದ್ದರ ಪರಿಣಾಮವಾಗಿ ಹವ್ಯಕ – ಗೌಡಸಾರಸ್ವತ ಬಳಕೆಗಳ ನಡುವೆ ಎಲ್ಲೋ ರೂಪುಗೊಂಡ ನನ್ನ ಕನ್ನಡ ಧಾರವಾಡದಲ್ಲಿ, ಕನ್ನಡದ ಗಂಧವಿಲ್ಲದ ಸಾರಸ್ವತಪುರದಲ್ಲಿ ಕೃಷ್ಣ ಬಸರೂರ, ಆರೋರಾರವರ ಇಂಗ್ಲೀಷ್ ಸಾನ್ನಿಧ್ಯದಲ್ಲಿ ಹೊಯ್ದಾಡಿ, ಆಕ್ಸಫರ್ಡಿನಲ್ಲಿ ತೀರ ಹದಗೆಟ್ಟಿತ್ತು. 'ಯಯಾತಿ'ಯ ಸಂಭಾಷಣೆಯನ್ನು ಕೀರ್ತಿ ತಿದ್ದಿರುವದರಿಂದ ನನ್ನ ದೌರ್ಬಲ್ಯ ಕಣ್ಣಿಗೆ ಬೀಳುವದಿಲ್ಲ. ಆದರೆ ಆ ತುಯ್ಯಲಾಟಕ್ಕೆ 'ತುಘಲಕ್' ನಾಟಕದ ಪ್ರಥಮ ಆವೃತ್ತಿ ಸಾಕ್ಷಿಯಾಗಿದೆ.'

ದೇಸಿ ಶಬ್ದಗಳ ಅನುಭವಗಳಿಗೆ ಹೊರತಾದ ಇಲ್ಲಿನ ಮಾಹಿತಿಗಳು ಮಾತ್ರ ಕರಾರುವಕ್ಕಾದ ಪದಗಳ ಮೂಲಕ ಪುಷ್ಕಳವಾಗಿ ದಕ್ಕುತ್ತದೆ. ಈ ಮಾಹಿತಿಗಳ ಮೂಲಕ ಬಿಚ್ಚಿಕೊಳ್ಳುವ, ಓದುಗರ ಮನದಲ್ಲಿ ರೂಪುಗೊಳ್ಳುವ 'ಆತ್ಮ-ಕಥೆಗಳು' ತಮ್ಮ ಪ್ರಾಮಾಣಿಕತೆಯನ್ನು ಎದ್ದು ಕಾಣಿಸುತ್ತವೆ. ಇದು ಈ ಕೃತಿಯ ಬಹುದೊಡ್ಡ ಗುಣಾತ್ಮಕ ಅಂಶ.

'ಸಂಸ್ಕಾರ' ಚಲನಚಿತ್ರ ತಯಾರಿಕೆಯ ಬಗೆಗಿನ ಕತೆ (ಮಾಹಿತಿ) ಕನ್ನಡ ಸಂಸ್ಕೃತಿಯ ಇತಿಹಾಸದಲ್ಲಿ ಮುಖ್ಯವಾಗಿ ನಿಲ್ಲುವಂಥದ್ದಾಗಿದೆ. ಮರಾಠಿಯ 'ಘಾಶೀರಾಮ ಕೋತವಾಲ'ದ ಮಾದರಿಯನ್ನೇ ಬಿ.ವಿ. ಕಾರಂತರು ಕನ್ನಡದ ಜನಪ್ರಿಯ ರಂಗಪ್ರಯೋಗ 'ಸತ್ತವರ ನೆರಳು'ವಿನಲ್ಲಿ ಅಳವಡಿಸಿಕೊಂಡರು ಮತ್ತು ಆ 'ಘಾಸೀರಾಮ'ನಿಗೂ ಕನ್ನಡ 'ಹಯವದನ'ವೇ ಸ್ಫೂರ್ತಿ ಎಂದು ಗಿರೀಶರು ಗುರುತಿಸಿರುವುದು ಮುಖ್ಯವಾಗಿದೆ. ತಮ್ಮ ಆತ್ಮ-ಕತೆಗಳಲ್ಲಿ ಇಂಥಹ ಅನೇಕ ಚಾರಿತ್ರಿಕ ವಿಶೇಷಗಳನ್ನು ಗಿರೀಶರು ದಾಖಲಿಸಿರುವುದರಿಂದಲೂ ಇದು ಮಹತ್ವದಾಗಿದೆ.

ತಮ್ಮ ಮೂವತ್ತೇಳನೇ ವಯಸ್ಸಿಗೇ ತಮ್ಮ ಕತೆಗಳನ್ನು ನಿಲ್ಲಿಸುವ ಕಾರ್ನಾಡರು ಮುಂದಿನ ದಿನಗಳಲ್ಲಿ ಅದನ್ನು ಮುಂದುವರೆಸುವ ಸೂಚನೆಯನ್ನೂ ನೀಡಿದ್ದಾರೆ. ಅದಕ್ಕಾಗಿ

ನಾವೆಲ್ಲರೂ ಕುತೂಹಲದಿಂದ ಕಾಯುವಂತೆ ಮಾಡಿದ್ದಾರೆ. ಆದರೆ ಇಡೀ ಕೃತಿಯನ್ನು ಓದಿ ಮುಗಿಸಿದ ಮೇಲೆ ನಮ್ಮನ್ನು ಏನೂ ಕಾಡುವುದಿಲ್ಲ ಎಂಬುದೇ ನಿರಾಸೆಯ ಸಂಗತಿ. ಮುಖ್ಯವಾಗಿ ದೊಡ್ಡ ಕಲಾವಿದ, ಲೇಖಕನ 'ಆತ್ಮ'ವೊಂದರ ಜೊತೆ ಮುಖಾಮುಖಿ ಆದಂತಹ ಸಮಾಧಾನವೂ ಓದುಗನಿಗೆ ಸಿಗುವುದಿಲ್ಲ.

ಲೇಖಕನ ಕಷ್ಟ-ಸುಖಗಳಲ್ಲಿ, ಜೀವನದ ತಿರುವುಗಳಲ್ಲಿ ಭಾವನಾತ್ಮಕವಾಗಿ ಪಯಣಿಸಿದ ಓದುಗರಿಗೆ ಕಾರ್ನಾಡರು ಅದ್ಭುತ ವ್ಯಕ್ತಿಯಾಗಿ, ಸಾಧಕರಾಗಿ 'ವಾರೆ ವ್ಹಾ!' ಎನ್ನಿಸಿಕೊಳ್ಳುತ್ತಾರೆ. ಆದರೆ 'ಇವ ನಮ್ಮವ... ಇವ ನಮ್ಮವ...' ಎಂದು ಅನ್ನಿಸುವುದಿಲ್ಲ, ಆಪ್ತವಾಗುವುದಿಲ್ಲ. ಇದಕ್ಕೆ ಮುಖ್ಯ ಕಾರಣ 'ಲೇಖಕ'ರು, ಆತ್ಮ-ಕಥೆಗಳ 'ನಾಯಕ'ನ ಆತ್ಮವನ್ನು ಚೆನ್ನಾಗಿ ಒಗೆದು, ಇಸ್ತ್ರಿ ಮಾಡಿ, ಸೊಫೆಸ್ಟಿಕೇಟ್ ಮಾಡಿ ಓದುಗರಿಗೆ ಹೊಂದಾಣಿಕೆ ಆಗುವಂತೆ 'ಪ್ರಸೆಂಟೆಬಲ್' ಮಾಡಿರುವುದು. ಹೀಗಾಗಿ ಈ ಪ್ರಸೆಂಟಬಲ್ ಕಥೆಗಳು ಜಗತ್ತಿನ ಎಲ್ಲಾ ದೇಶದ ಎಲ್ಲಾ ವರ್ಗದ ಜನರಿಗೂ ಅತಿ ಶೀಘ್ರದಲ್ಲಿ ಮೆಚ್ಚುಗೆ ಆಗುತ್ತವೆ.

*

–ಬಿ.ಎಸ್. ವಿದ್ಯಾರಣ್ಯ

ಬಿ.ಎಸ್. ವಿದ್ಯಾರಣ್ಯ
ಬೆಂಗಳೂರು
Vidyaranyabs@gmail.com



ಸಂಚಯ

ಸಾಹಿತ್ಯ ಸ್ಪರ್ಧೆ-೨೦೧೧

ಹೊಸ ಬರಹಗಾರರನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ಸಂಚಯ ಸಾಹಿತ್ಯ ಪತ್ರಿಕೆಯು ಈ ವರ್ಷವೂ ಕನ್ನಡದ ವಿವಿಧ ಸಾಹಿತ್ಯ ಪ್ರಕಾರಗಳಲ್ಲಿ ಸ್ಪರ್ಧೆಗಳನ್ನು ಆಯೋಜಿಸಿದೆ.

ಕಾವ್ಯ ಸ್ಪರ್ಧೆ

ಇದರಲ್ಲಿ ಭಾಗವಹಿಸುವವರು ತಮ್ಮ ಸ್ವಂತ ರಚನೆಯ ಎರಡು ಕವಿತೆಗಳನ್ನು ಕಳುಹಿಸಬೇಕು. ಅನುವಾದಗಳಾಗಲೀ, ಈಗಾಗಲೇ ಪ್ರಕಟಗೊಂಡಿರುವ ಕವಿತೆಗಳಾಗಲೀ ಅವಕಾಶವಿಲ್ಲ.

ಲೇಖನ ಸ್ಪರ್ಧೆ

ಈ ಸ್ಪರ್ಧೆಗೆ ಕೊಟ್ಟಿರುವ ಮೂರು ವಿಷಯಗಳಲ್ಲಿ ಯಾವುದಾದರೂ ಒಂದು ವಿಷಯ ಕುರಿತ ಹದಿನೈದು ಪುಟಗಳನ್ನು ಮೀರದ ಒಂದು ಲೇಖನ ಕಳುಹಿಸಬಹುದು.

ಲೇಖನ ಸ್ಪರ್ಧೆಯ ವಿಷಯಗಳು

೧. ಅಣ್ಣಾ ಹಜಾರೆ ಭ್ರಷ್ಟಾಚಾರದ ವಿರುದ್ಧದ ಹೋರಾಟ-ಸಾಧ್ಯತೆ-ಸವಾಲು-ಮಿತಿಗಳು
೨. ಚಂದ್ರಶೇಖರ ಕಂಬಾರರ ಕೃತಿಯೊಂದರ ವಿಮರ್ಶೆ
೩. 'ನನ್ನ ಹರೆಯದ ಸಾಹಸಗಳು' ಒಂದು ಲಲಿತ ಲಹರಿ


ಸ್ಪರ್ಧೆಯ ನಿಯಮಗಳು

೧. ಬರಹಗಳು ಸ್ವತಂತ್ರವಾಗಿದ್ದು ಎಲ್ಲೂ ಪ್ರಕಟಗೊಂಡಿರಬಾರದು
೨. ಸ್ಪರ್ಧೆಗೆ ಯಾವುದೇ ಪ್ರವೇಶ ಶುಲ್ಕ ಹಾಗೂ ವಯೋಮಿತಿಗಳು ಇರುವುದಿಲ್ಲ
೩. ಸ್ಪರ್ಧೆಗೆ ಕಳುಹಿಸಲಾದ ಹಸ್ತಪ್ರತಿಗಳನ್ನು ವಾಪಸ್ಸು ಕಳುಹಿಸಲಾಗುವುದಿಲ್ಲ
೪. ಹಸ್ತಪ್ರತಿಯ ಜೊತೆಗೆ ಲೇಖಕರ ಹೆಸರು ಸಂಪರ್ಕ ವಿಳಾಸಗಳನ್ನು ಬೇರೆ ಕಾಗದದಲ್ಲಿ ಬರೆದು ಲಗತ್ತಿಸಿರಬೇಕು
೫. ಬಹುಮಾನಗಳು ಪುಸ್ತಕ ರೂಪದ್ದಾಗಿದ್ದು ತೀರ್ಪುಗಾರರ ತೀರ್ಮಾನವೇ ಅಂತಿಮ
೬. ಆಯ್ದ ಬಹುಮಾನಿತ ಬರಹಗಳು ಸಂಚಯ ಪತ್ರಿಕೆಯಲ್ಲಿ ಪ್ರಕಟಗೊಳ್ಳುತ್ತದೆ
೭. ಬರಹಗಳನ್ನು ಕಳುಹಿಸಲು ಕೊನೆಯ ದಿನಾಂಕ ನವೆಂಬರ್ ೩೦, ೨೦೧೧
ಬರಹಗಳನ್ನು ಕಳುಹಿಸಬೇಕಾದ ಹೆಚ್ಚಿನ ವಿವರಗಳಿಗೆ ಸಂಪರ್ಕ ವಿಳಾಸ:

ಸಂಚಯ
ಕನ್ನಡ ಸಾಹಿತ್ಯ ಸಂಸ್ಕೃತಿ ಪತ್ರಿಕೆ
ನಂ.೧೦೦, ೨ನೇ ಮುಖ್ಯರಸ್ತೆ, ೬ನೇ ಬ್ಲಾಕ್,
೩ನೇ ಘಟ್ಟ ಬನಶಂಕರಿ ೩ನೇ ಹಂತ, ಬೆಂಗಳೂರು-೫೬೦ ೦೮೫
ಮೊಬೈಲ್: ೯೮೪೪೦ ೬೩೫೧೪
email : sanchaya.sahityapatrike@gmail.com

ಸಂಚಯ ಗ್ಯಾ|ಲ|ರಿ

ರವಿವರ್ಮನ ಕಲಾಕೃತಿಗಳು




ಮೇನಕೆ, ವಿಶ್ವಾಮಿತ್ರ



ಒಂದು ಭಾವಚಿತ್ರ

SANCHAYA (Bi-Monthly), MAG(2) PRB-DECL : 309/94-95



ರವಿವರ್ಮನ ಕಲಾಕೃತಿ : ನಳ–ದಮಯಂತಿ

Edited, Printed & Published by D.V. Prahlad, No.100, 2nd Main, 6th Block, 3rd Stage, 3rd Phase, Banashankari, Bangalore - 560 085. Ph : 080 -2679 1925